ಈ ಗ್ರಂಥವು

ಶ್ರೀಮದ್ಯುವರಾಜ

ಕಂಠೀರವನರಸಿಂಹರಾಜ ಒಡೆಯರ್

ಬಹದೂರ್ ಕೆ. ಸಿ. ಐ. ಇ. ಯವರ ಸನ್ನಿಧಿಗೆ.

ಗ್ರಂಥಕರ್ತನಿಂದ

ಅತ್ಯಂತ ವಿನಯ ಪುರಸ್ಸರವಾಗಿ

ಸಮರ್ಪಿಸಲ್ಪಟ್ಟಿದೆ.

KARNÂTAKA

NALACHARITRA NÂTAKAM

ಕರ್ಣಾಟಕ

ನಳಚರಿತ್ರ ನಾಟಕಂ

ಕರ್ಣಾಟಕ ಶೇಷರಾಮಾಯಣ, ವಿಕ್ರಮೋರ್ವಶೀಯ ನಾಟಕ,
ರಾಮಾಯಣನಾಟಕಾದಿ ಗ್ರಂಥಕರ್ತರಾದ, ಆಸ್ಥಾನ
ಮಹಾವಿದ್ವಾಂಸರಾದ, ಕವಿತಿಲಕ, ಸೋಸಲೆ,
ಅಯ್ಯಾಶಾಸ್ತ್ರಿಗಳಿಂದ
ರಚಿಸಲ್ಪಟ್ಟುದು.

ಜಿ. ಟಿ. ಎ, ಮುದ್ರಾಶಾಲೆಯಲ್ಲಿ ಮುದ್ರಿಸಲ್ಪಟ್ಟಿತು.
ಮೈಸೂರು.
1914

ಕ್ರಯ ೧೨ ಆಣೆ] [*Price 12 As.*

ಪೀಠಿಕೆ.

ಕರ್ಣಾಟ ಭಾಷೆಯನ್ನು ಅಭಿವೃದ್ಧಿಪಡಿಸಬೇಕೆಂಬ ಲೇಟ್ ಶ್ರೀಮನ್ಮಹಾರಾಜ ಚಾಮರಾಜೇಂದ್ರ ಒಡೆಯರ್ ಬಹದೂರರವರ ಅಭಿಪ್ರಾಯಕ್ಕೆ ಅನುಸಾರವಾಗಿ ಜಗತ್ಪ್ರಸಿದ್ಧವಾದ ಶ್ರೀಮನ್ಮಹಾಭಾರತದಲ್ಲಿರುವ ನಳೋಪಾಖ್ಯಾನವನ್ನು ಕಥಾ ಸರಣಿಯೂ ಕೆಡದಂತೆ ನಾಟಕ ಸಂವಿಧಾನಗಳನ್ನಿಟ್ಟು. ಆಯಾ ಸಂದರ್ಭಗಳಿಗೆ ತಕ್ಕಹಾಗೆ ವೃತ್ತ ಕಂದಗಳಿಂದಲೂ ಗಾನಯೋಗ್ಯವಾದ ಪದಗಳಿಂದಲೂ ಕೂಡಿ ಪಂಡಿತ ಪಾಮರ ರಂಜಕವಾಗಿರುವಂತೆ ಕರ್ಣಾಟಕ ನಾಟಕವನ್ನಾಗಿ ರಚಿಸಿದ್ದೆನು. ಈಗ ಇದನ್ನು ಓದುವವರಿಗೆ ಅನುಕೂಲವಾಗಿರುವಂತೆ ಸಂಗೀತದ ಪದಗಳಿಗೆಲ್ಲಾ ಪ್ರತಿಯಾಗಿ ವೃತ್ತ ಕಂದಗಳನ್ನೂ ರಚಿಸಿ ಮುದ್ರಾಪಿಸಿರುವೆನು.

ಇದರಲ್ಲಿರುವ ಸಂಗೀತಪದಗಳ ರಾಗ ತಾಳ ಸ್ವರಗಳನ್ನು ಆಸ್ಥಾನ ಸಂಗೀತ ವಿದ್ವಾಂಸರು ಮ||ರಾ|| ಗಾನವಿಶಾರದ, ಬಿ. ಕೃಷ್ಣಪ್ಪನವರು ಶೋಧಿಸಿ ನೋಡಿ ಸಮ್ಮತಿಸಿರುವುದಕ್ಕಾಗಿ ಕೃತಜ್ಞನಾಗಿರುವೆನು.

ಇದರಲ್ಲೇನಾದರೂ ಪ್ರಮಾದವಿದ್ದಲ್ಲಿ ಗುಣಪಕ್ಷಪಾತಿಗಳಾದ ವಿದ್ವಾಂಸರು ತಿಳಿಸಿದರೆ ಅದನ್ನು ಕೃತಜ್ಞತೆಯಿಂದ ಗ್ರಹಿಸಿ ಎರಡನೆಯ ಮುದ್ರಣದಲ್ಲಿ ಪರಿಷ್ಕರಿಸುವೆನು.

ಓದುವವರು ಕೆಳಗಡೆ ಗೀಟುಹಾಕಿ ಮುದ್ರಿತವಾಗಿರುವ ಪದಗಳನ್ನು ಬಿಟ್ಟು ಓದಿಕೊಳ್ಳುವುದು. ನಾಟಕದವರು (*) ಮೊದಲಾದ ಗುರುತುಗಳುಳ್ಳ ಪದ್ಯಗಳನ್ನೂ ವಾಕ್ಯಗಳನ್ನೂ ಬಿಟ್ಟು ಅವುಗಳಿಗೆ ಪ್ರತಿಯಾಗಿ ಕೆಳಗಡೆ ಮುದ್ರಿತವಾಗಿರುವ ಅದೇ ಗುರುತಿನ ಪದಗಳನ್ನು ಉಪಯೋಗಿಸಿಕೊಳ್ಳುವುದು.

ಸ ೧೯೧೪ನೇ ಇಸವಿ,
ಸೆಪ್ಟಂಬರ್
ಕವಿತಾವಿಲಾಸಂ–ಮೈಸೂರು.

ಸೋಸಲೆ, ಅಯ್ಯಾಶಾಸ್ತ್ರಿ.

ಶುದ್ಧಾಶುದ್ಧ ಪತ್ರಿಕೆ.

ಪುಟ	ಪಙ್ಕ್ತಿ	ಅಶುದ್ಧ	ಶುದ್ಧ
೧೬	೧೬	‖ ರಾಗ |	* ‖ ರಾಗ |
,,	೨೧	ದಮವಂತಿಯ	ದಮಯಂತಿಯ
೨೦	೨೨	† ‖ ರಾಗ |	† ‖ ರಾಗ | ಜಂಪೆಯೋಟೆ |
೩೬	೨೩	ತಪ್ಪಸ್ನು	ತಪ್ಪನ್ನು
೪೯	೬	(ಅರ್ಧವಸ್ತ್ರವನ್ನು	(ಅದೇ ಅರ್ಧವಸ್ತ್ರವನ್ನು
೬೬	೬	ಜನಧ್ವನಿಯಾಗುವುದು	(ಜನಧ್ವನಿಯಾಗುವುದು)
೯೫	೯	ದರ್ಲಭ	ದುರ್ಲಭ

॥ ಶ್ರೀರಸ್ತು ॥

ಕರ್ಣಾಟಕ ನಳಚರಿತ್ರನಾಟಕಂ

ಪ್ರಥಮಾಂಕಂ

ಶಾ॥ ವಿ॥ ವಿದ್ಯಾದುಗ್ಧಪಯೋಧಿಜೃಂಭಣಶರದ್ರಾಕಾನಿಶಾನಾಯಕಂ
ಸದ್ಯಸ್ಸಂಪರಿಫುಲ್ಲಹಲ್ಲಕಸುಮಸ್ತೋಮಾಭಕಾಯಂತ್ರಯೀ ।
ವೇದ್ಯಂಭಕ್ತಜನಾಮರಕ್ಷಿತಿರುಹಂವಿಘ್ನಾಂಧಕಾರಚ್ಛಟಾ
ಖದ್ಯೋತಂಪರಿಪಾಲಿಕುಂಗಜಮುಖಂ ಶ್ರೀಕೃಷ್ಣರಾಜೇಂದ್ರನಾ ॥೧॥

ನಾಂದ್ಯಂತದೊಳ್ ಸೂತ್ರಧಾರಂ—

ಶ್ಲೋ॥ ಕಾರ್ಕೋಟಕಸ್ಯನಾಗಸ್ಯ ದಮಯಂತ್ಯಾನಳಸ್ಯಚ ।
ಋತುಪರ್ಣಸ್ಯರಾಜರ್ಷೇಃ ಕೀರ್ತನಂಕಲಿನಾಶನಂ ॥

ಎಂದು ದೊಡ್ಡವರು ಹೇಳುವಕಾರಣ ಮಹಿಶೂರಸಂಸ್ಥಾನದ ಮಹಾರಾಜರವರಾದ ಶ್ರೀ ಚಾಮರಾಜೇಂದ್ರ ಒಡೆಯರವರ ಆಜ್ಞಾನುಸಾರವಾಗಿ

(ಮೇಲಿರುವ ಮಂಗಳಪದ್ಯವನ್ನೇ ನಾಟಕದವರೂ ಹೇಳುವುದು)

॥ ರಾಗ । ಮಾಧವಮನೋಹರಿ । ಆದಿತಾಳ ॥

(ಮಹಾಲಕ್ಷ್ಮಿಯೆಂಬಂತೆ)

ಶಿವೇಶಾಹಿವಸುಧಾಧರತನಯೇ । ಶ್ರೀಹರಿಸೋದರಿಸದಾಶ್ರಯೇ । ಶ್ರೀ ॥ಪ॥
ಶಿವಾರ್ಧಾಂಗಿ ಮೃಡಾನಿಮಹಾಶಯೇ । ಪ್ರವಾಳಾಭೆ ಪರಿಹೃತಮಹಾಭಯೇ । ಭವಾ
ನೀದೇವಿಸದಯೆ । ಮಹಾಬಲಶೈಲನಿಲಯೆ । ಮಂಗಳಾಂಗಿಮಾಮವೆ ॥೧॥ ಮ
ಹಾಕಾಳಿ ಮಹೇಶವಿನೋದಿನಿ । ಮಹಾಮಾಯೆ ಮುನಿಹೃದಯವಾಸಿನಿ । ಮಹಾ
ಕರ್ಣಾಟವಿಷಯ । ಮಹೀಪತಿ ಕೃಷ್ಣನೃಪತಿ । ಮಾನಸೇಷ್ಟದಾಯಿನಿ ॥೨॥

ಆಸ್ಥಾನ ಮಹಾವಿದ್ವಾಂಸರಾದ ಕವಿತಿಲಕ, ಸೋಸಲೆ, ಅಯ್ಯಾಶಾಸ್ತ್ರಿಗಳಿಂದ ಕರ್ಣಾಟ ಭಾಷೆಯಲ್ಲಿ ರಚಿಸಲ್ಪಟ್ಟಿರುವ—

ಕಂ|| ಆನಳರಾಜೇಂದ್ರನುಪಾ |
ಖ್ಯಾನಮಶ್ರೀಮಹಿತ ಪಂಡಿತಪ್ರಚುರಸಭಾ ||
ಸ್ಥಾನದೆಸಂಗೀತಂಬೆರ |
ಸಾನಾಡಿವೆನುಚಿತ ನಾಟಕ ಕ್ರಮದಿಂದಂ ||೨||

(ತೆರೆಯಕಡೆಗೆ ನೋಡಿ) ಇದೋ ನಳಮಹಾರಾಜನ ಮಂತ್ರಿಯಾದ ನಯಸಾಗರನೂ ವಿದೂಷಕನಾದ ಮಂಡೂಕನೂ ಸಹ ರಾಜಾಸ್ಥಾನದ ಬಾಗಿಲಲ್ಲಿ ಏನೋ ರಹಸ್ಯವಾಗಿ ಮಾತನಾಡುತ್ತಿರುವರು. ಇಲ್ಲಿ ನಾನಿರುವುದು ಸರಿಯಲ್ಲ. ಮುಂದಣ ಕಾರ್ಯಕ್ಕೋಸ್ಕರ ಹೋಗುವೆನು.

(ತೆರಳಿದನು)

ಇಂತಿದು ಪ್ರಸ್ತಾವನೆ.

ರಾಜಾಸ್ಥಾನ—(ಮಂತ್ರಿ ವಿದೂಷಕರ ಪ್ರವೇಶ)

ಮಂತ್ರಿ—ಅಂತು ನಮ್ಮೊಡೆಯನಾದ ನಳಮಹಾರಾಜನು ಈಗ ಸ್ವಲ್ಪ ದಿವಸದಿಂದಲೂ ಏನೋ ಒಂದು ಚಿಂತೆಯನ್ನು ಮನಸ್ಸಿಗೆ ಹತ್ತಿಸಿಕೊಂಡಿರುವಹಾಗೆ ಕಾಣಿಸುತ್ತಿದೆ. ಏಕೆಂದರೆ, ದಿನೇದಿನೇ ಆತನ ದೇಹವು ಬಡವಾಗುತ್ತಾ ಬರುವುದು ; ಕ್ಷಣೇಕ್ಷಣೇ ನಿಟ್ಟುಸಿರು ಬಿಡುವನು. ಆದರೆ ಆಚಿಂತೆಯು ಸಮುದ್ರದೊಳಗಿರುವ ರತ್ನದಂತೆ ತಿಳಿಯಲಶಕ್ಯವಾಗಿರುವುದು.

ವಿದೂಷಕ—ನಿಜ, ಸಮುದ್ರದಂತೆ ಗಂಭೀರವಾದ ಆತನ ಮನಸ್ಸಿನಲ್ಲಿರುವುದು ಚಿಂತಾರತ್ನವೇಸರಿ.

ಮಂ—ಅದು ಹೇಗೆ ?

ವಿ—ಹೇಗೇನು ! ನೀನು ಚಿಂತೆಗೆ ರತ್ನದ ಸಾಮ್ಯವನ್ನು ಹೇಳಿದಕಾರಣ ಅದು ಚಿಂತಾರತ್ನವೆಂದು ನಾನು ಹೇಳಿದೆ.

ಮಂ—(ನಸುನಕ್ಕು) ಅಯ್ಯಾ ಇಂತಹ ಮಾತಿನ ಚಮತ್ಕಾರಗಳು ನಿನ್ನಲ್ಲಿರುವುದರಿಂದಲೇ ನಮ್ಮ ಮಹಾರಾಜನು ಯಾವಾಗಲೂ ನಿನ್ನನ್ನು ಎಡೆಬಿಡದೆ ಇರುವನು.

ವಿ—ನಯಸಾಗರನೆ ನಮ್ಮಂಥವರು ಯಾವಾಗಲೂ ಸಮೀಪದಲ್ಲೇ ಇದ್ದರೂ ಅರಸಿನ ಮನಸ್ಸು ಮಾತ್ರ ನಿಮ್ಮ ಕೈಯ್ಯಲ್ಲಿರುವುದು.

ಮಂ—ಅರಸಿನ ಮನಸ್ಸು ನಮ್ಮ ಕೈಯಲ್ಲಿದ್ದರೂ ಆ ಮನಸ್ಸಿನಲ್ಲಿರುವ ವಿಶೇಷಗಳು ಮಾತ್ರ ನಿಮಗೆ ತಿಳಿಯುವಹಾಗೆ ನಮಗೆ ತಿಳಿಯುವುದಿಲ್ಲ. ಆದುದರಿಂದಲೇ ನಿನ್ನನ್ನು ನಾನು ಕೇಳಿದೆ.

ವಿ—(ಆತ್ಮಗತ) ಇವನು ನೆಗೆದುಬಿದ್ದರೂ ಆ ರಹಸ್ಯವನ್ನು ನಾನು ಬಾಯಿಬಿಡತಕ್ಕವನಲ್ಲ. (ಪ್ರಕಾಶ) ರಾಜ್ಯಭಾರ ಮಾಡತಕ್ಕ ಅರಸುಗಳ ಮನಸ್ಸು ಅನೇಕ ವಿಷಯಗಳಲ್ಲಿ ಪ್ರವರ್ತಿಸುವುದು. ಈಗ ನಮ್ಮ ಮಹಾರಾಜನ ಮನಸ್ಸು ಒಂದು ಬೇರೆ ವಿಷಯದಲ್ಲಿ ಪ್ರವರ್ತಿಸಿರುವಹಾಗೆ ತೋರುತ್ತಿದೆ.

ಮಂ—ಅದುತಾನೇ ಯಾವುದೆಂದು ನಾನು ಕೇಳುವುದು.

ವಿ—ಅದು ಇಂಥದೆಂದು ಹೇಳುವುದು ಅಸಾಧ್ಯವು.

ಮಂ—ಹಾಗಿದ್ದಲ್ಲಿ ಆ ವಿಷಯವು ಬಹಳ ಶ್ಲಾಘ್ಯವಾದ್ದುದಾಗಿಯೇ ಇರಬಹುದು.

ವಿ—ಅದಕ್ಕೆ ಸಂದೇಹವೆ ? ರಾಜಾಧಿರಾಜ—

(ತೆರೆಯಲ್ಲಿ) ಮಹಾರಾಜನೆ ಈಕಡೆ ದಯಮಾಡಿಸಬೇಕು

ವಿ—ಇದೋ ನಮ್ಮ ಮಹಾರಾಜನು ಬೇಸರಿಕೆಯ ಪರಿಹಾರಾರ್ಥವಾಗಿ ವನವಿಹಾರಕ್ಕೆ ಹೊರಟಿರುವನು. ಈಗ ನನಗವಕಾಶವಿಲ್ಲ. ನಾನು ಹೋಗುವೆನು. (ತೆರಳಿದನು)

ಮಂ—ನಾನು ಎಷ್ಟು ಪ್ರಯತ್ನ ಮಾಡಿದರೂ ಇವನಿಂದ ಆ ರಹಸ್ಯವನ್ನು ತಿಳಿಯಲು ಅಸಾಧ್ಯವಾಯಿತಲ್ಲಾ ! ಆದರೆ ಈಗ ವಿದೂಷಕನು ಹೇಳಿದಮಾತನ್ನೂ ಮಹಾರಾಜನ ರೀತಿಯನ್ನೂ ಮತ್ತು ಆತನು ವನವಿಹಾರಕ್ಕೆ ಹೊರಟಿರುವುದನ್ನೂ ನೋಡಿದರೆ ಅವನ ಯೋಚನೆ ಸ್ತ್ರೀವಿಷಯವಾಗಿರಬಹುದೆ ? ಒಂದುವೇಳೆ ಹಾಗಿದ್ದ ಪಕ್ಷದಲ್ಲಿ ಸೌಂದರ್ಯದಲ್ಲೂ ಗುಣದಲ್ಲೂ ಲೋಕಪ್ರಸಿದ್ಧಳಾದ ದಮಯಂತಿಯೇ ಅವನ ಯೋಚನೆಗೆ ಬಂದವಳಾಗಿದ್ದರೆ ಬಹಳ ಸಂತೋಷವೇಸರಿ. ಈಗ ನಮ್ಮ ಮಹಾರಾಜನಿಗೆ ಬಾಲ್ಯ ಕಳೆದು ಯೌವನ

ವಯಸ್ಸು ಪ್ರಾಪ್ತವಾಗಿರುವುದರಿಂದ ಇಂತಹ ವಿಕಾರಗಳೆಲ್ಲಾ ಉಂಟಾಗಿರುವುದು ಸ್ವಭಾವ.

ಕಂ|| ನಯಶಾಲಿಯಾದೊಡೇಂ ವಿ |
ದ್ಯೆಯೊಳಧಿಕ ಪ್ರಾಜ್ಞನಾದೊಡೇಂ ಮಾನವನಾ ||
ಶಯಮಂ ಸ್ತ್ರೀವಿಷಯಕಚಿಂ |
ತೆಯನಾವಗಮಾಳ್ದ ಯೌವನಂ ಕೆಡುವುದಲೇ ||೩||

(ಜ್ಞಾಪಿಸಿಕೊಂಡು) ಓಹೋ! ಮರೆತಿದ್ದೆ; ವಿದರ್ಭದೇಶದಿಂದ ಬಂದಿರುವ ಸ್ತುತಿಪಾಠಕರಿಗೆ ತಕ್ಕ ಬಹುಮಾನವನ್ನು ಮಾಡಬೇಕೆಂದು ಮಹಾರಾಜನಪ್ಪಣೆಯಾಗಿತ್ತು; ಆ ಕೆಲಸಕ್ಕೆ ನಾನು ಹೋಗುವೆನು.

(ತೆರಳಿದನು)

ವಿಲಾಸವನ—(ರಾಜನೂ ವಿದೂಷಕನೂ ಪ್ರವೇಶಿಸುವರು)

ರಾಜಂ—

*ವೃ|| ತರದಿಂದೊಪ್ಪುವರಲ್ದಪೂಗಿಡುಗಳಿಂ ಪಣ್ತೀರ್ಪದಾಳಿಂಬದಿಂ |
ದರನೇರಿಲ್ಗೊಸವಾವು ಬಕ್ಕೆವಲಸಿಂಪೇರಿಳ್ಳೆಯಿಂ ಬಾಳೆಯಿಂ |
ಅರಲಾಂತೊಪ್ಪುವ ಬಳ್ಳಿಮಂಟಪದಿ ನೊಳ್ಗಂಪಾಂತ ತೆಂಗಾಳಿಯಿಂ |
ಮೆರೆಗುಂ ಪಕ್ಕಿಗಳಿಂಪು ದೀವಿದುಲಿಪಿಂ ದಾಸಂದಮಿಾದೀವನಂ ||೪||

ವಿ—ಮಿತ್ರನೆ ಇದೋ ನೋಡು, ಎರಡುಕಡೆಯಲ್ಲೂ ಸಾಲಾಗಿರುವ ಈ ಮರಗಳು ಮಹಾರಾಜನಾದ ನೀನು ಬಂದೆಯೆಂದು ಗಾಳಿಯಿಂದಲು ಗಾಡುವ ಕೊಂಬೆಗಳೆಂಬ ಕೈಗಳಿಂದ ನಿನ್ನಮೇಲೆ ಹೂವನ್ನು ಎರಚುತ್ತಿರುವುವು.

---

*|| ರಾಗ | ಕಾಪಿಜಿಲ್ಲಾ | ತ್ರ್ಯಶ್ರಜಾತಿ ಏಕತಾಳ ||

(ಬಿಡುಬಿಡುದಾಳವನ್ನು ಎಂಬಂತೆ)

ಮೆರೆಯುತ್ತಲಿರ್ಪುದೀವನಂ | ಸ್ಮರಲೀಲೆಗಾಯತನಂ | ವರಕೋಕಿಲಾಳಿ ಶಾರಿಕಾಶುಕೈಕಜೀವನಂ ||೧|| ರಮಣೀಯಜಾತಿಕೇತಕೀ | ಸುಮಸೌರಭಾಕಲಿತಂ| ಕ್ರಮಶಾಲಿವೃಕ್ಷ ಕಾವಳೀಲತಾಳಿಚಿತ್ರಿತಂ ||೨|| ಲಿಕುಚಾಮ್ರಮುಖ್ಯಸತ್ಫಲ | ಪ್ರಕರಾನ್ವಿತಾವನಿಜಂ | ವಕುಳಪ್ರಸೂನಪಾತ ಮಂಜುಳಸ್ಥಳಂ ನಿಜಂ ||೩||

ರಾ—ಮಂಡೂಕನೆ ಹಾಗಲ್ಲ ಕೇಳು ;

ಕಂ|| ಎಲರಿಂದಲೆವೀವೃಕ್ಷಂ |
ಗಳಶಾಖೆಗಳಿಂದೆ ಬೀಳ್ವ ಪೂಗಳಿವಲ್ಲಂ ||
ಅಲರಂಬಂ ಕಿವಿವರೆಗಂ |
ಸೆಳೆದಧನುಸ್ಸಿಂದೆ ಬಿಡುವ ಕಣೆಗಳಿವಲ್ತೇ ||೫||

ಮಿತ್ರನೆ ದಮಯಂತಿಯ ವಿರಹದಿಂದ ಸಂತಾಪಪಡುತ್ತಿರುವ ನನ್ನ ಮನಸ್ಸನ್ನು ವಿನೋದಪಡಿಸುವುದಕ್ಕಾಗಿ ನಾನಿಲ್ಲಿಗೆ ಬಂದುದು ಮೊದಲೇ ಉರಿಯುತ್ತಿರುವ ಅಗ್ನಿಗೆ ಮತ್ತಷ್ಟು ಅಜ್ಯಾಹುತಿಯನ್ನು ಕೊಟ್ಟ ಹಾಗಾಯ್ತು.

* ವೃ|| ಭುವನಶ್ಲಾಘ್ಯಮೆನಿಪ್ಪ ರೂಪಭರದಿಂ ಸೌಂದರ್ಯಸಂಪತ್ತಿನಿಂ |
ನವಶೃಂಗಾರವಿಲಾಸದಿಂದ ಮುದಯತ್ತಾರುಣ್ಯದಿಂದೆನ್ನಚಿ |
ತ್ತವನಾಕರ್ಷಿಸುತಿರ್ಪುದಾರಗುಣೆಯಂ ಭೀಮಾವನೀಪಾತ್ಮಸಂ |
ಭವೆಯಂ ನೋಡುವೆನೆಂದಿಗೆಂತ ತನುಬಾಣಾಘಾತಮಂ ಸೈಸುವೆಂ||೬||

ವಿ—ಮಹಾರಾಜನೆ ಏತಕ್ಕೆ ಹೀಗೆಲ್ಲಾ ಪೇಚಾಡುವೆ? ನೀನು ನನ್ನನ್ನು ತಕ್ಕ ಮಾನಮರ್ಯಾದೆಗಳಿಂದ ಕಳುಹಿಸಿಕೊಡುವುದಾದರೆ, ನಾನು ಈಗಲೇ ವಿದರ್ಭದೇಶಕ್ಕೆ ಹೋಗಿ ದಮಯಂತಿಯು ನಿನ್ನನ್ನು ವರಿಸುವ ವಿಷಯದಲ್ಲಿ ಸಿದ್ಧಿತಾರ್ಥವನ್ನು ಮಾಡಿಕೊಂಡು ಬಂದುಬಿಡುತ್ತೇನೆ.

ರಾ—ಎಲೈ ಬ್ರಾಹ್ಮಣನೆ ಹಾಗಲ್ಲ ಕೇಳು,

---

*|| ರಾಗ | ಮುಖಾರಿ | ರೂಪಕತಾಳ ||
(ಎಂತುಸಹಿಪೆನಾಂತದುಃಖವ ಎಂಬಂತೆ)

ಎಂತುಸೈಸಲೀಗಕಂತುವ | ಸಂತಾಪವನಾ | ನೆಂತು || ಪ|| ಸ್ವಾಂತಚಿಂತೆ ಯಾಂತುದಿಾತು | ಮುಂತೆಮಾಳ್ಪುದನೇಕಾಣೆಹಾ ||ಅನು|| ರಾಮಣೀಯಕ | ಸೀಮೆಯಾಗಿಹ | ಕೋಮಲಾಂಗಿಯ | ಸೋಮಾಭಿ | ರಾಮಮುಖಿಯ | ಹೇಮ ರುಚಿಯ | ಭೀಮಪುತ್ರಿಯ | ಭೋಗಿಪೆನೆಂದು ||೧|| ಶಂಬರಾರಿಸಿ | ತಂಬಿನೀಪ್ರತಿ | ಬಿಂಬವಾಗಿಹ | ಬಿಂಬೋಷ್ಠಿಯ | ಕಂಬುಗಳೆಯ | ತುಂಬಿಗುರುಳಿ | ನಂಬುಜಾಕ್ಷಿಯ | ನೋಡುವೆನೆಂದು ||೨||

ಕಂ|| ಸ್ಮರಬಾಧಿತನಾದೊಡಮಾ |
ಧರಣಿಪನಂ ಸುತೆಯ ಬೇಡೆನಾಂ ಮಾನಯುತರ್ |
ಪರಣಮನಾದೊಡಮುಳಿವರ್ |
ಪರರಂತಾಂಬೇಳ್ವರಲ್ಲ ನಿಜವಾಂಛಿತಮಂ ||೭||

ವಿ—ಮಹಾರಾಜನೆ ಇತ್ತನೋಡು ಈ ಕಮಲಸರೋವರವು ಎಷ್ಟು ರಮಣೀಯವಾಗಿರುವುದು.

ರಾ—ಆಹ! ಚೆನ್ನಾಗಿ ಹೇಳಿದೆ.

* ವೃ|| ಸಾರಸಸೌರಭಂದಳೆದು ತೀಡುವಮಂದಸಮೀರದಿಂ ಸುಧಾ |
ಸಾರಸಮಾನ ಸಾಮಿಪರಿ ಫುಲ್ಲಸರೋರುಹ ಜಾತಸದ್ರಸಾ |
ಸಾರ ಸಮುತ್ಸುಕಭ್ರಮರ ಝುಂಕೃತಿಯಿಂ ಜಲಖೇಲನೋನ್ಮನ |
ಸ್ಸಾರಸಪಙ್ಕ್ತಿಯಿಂ ಸಖನೆ ನೋಡು ಮನೋಹರವೀಸರೋವರಂ ||೮||

(ನೋಡಿ) ಆಹ! ಮಿತ್ರನೆ—

ಕಂ|| ಲಲಿತಮೃಣಾಳಾಗ್ರದೆಕ |
ಗ್ಗೊಳಿಸುವಕಮಲಂಗಳಲ್ಲಿ ವಿಹರಿಪಹಂಸಂ |
ಗಳಿವಂಬುಜಲಕ್ಷ್ಮಿಗೆನಿ |
ರ್ಮಳಚಾಮರನಿಕರದಂತಗೇನೊಪ್ಪುವುವೋ ||೯||

ವಿ—ಮಹಾರಾಜನೆ ಅದಿರಲಿ, ಇದೊ ಈ ಸರೋವರದ ತೀರದಲ್ಲಿ ಬಹಳ ಸುಂದರವಾದ ಒಂದು ಹಂಸವು ಸಂಚಾರ ಮಾಡುತ್ತಿರುವುದು; ನೋಡು.

---

* || ರಾಗ | ತೋಡಿ || ಏಕತಾಳ ||

(ನಿನಿಸಾ ಗಗಮಾ ಧಾಪಾ | ಪಾ | ಎಂಬಂತೆ ಪಾರ್ಸಿಮಟ್ಟು)

ಕಮಲಾಕರತಾನೇನಿಂತು | ರಮಣೀಯವೊ ಬಲುಸೊಗಸಾಂತು | ದಮಯಂತಿಯ ಕಾಣದೆ ಕಂತು | ವಿಮ ಶಾಸ್ತ್ರಿಯ ಸೈಸುವೆನೆಂತು ||ಪ|| ಸಾರಸರೋರುಹಸೌರಭದಾಳಿ | ಸಾರಿಬರುತ್ತಿದೆ ಮೆಲ್ಲನೆಗಾಳಿ | ಸಾರಸದೊಳುಮಧು | ಸಾರವಸುಧೆಗನು | ಸಾರವನಳಿಸಂ | ಸಾರವುನೆರೆಮನ | ಸಾರಸವಿದುಸರ | ಸಾರವನೊಣನಭಿ | ಸಾರವಗೈವುದು | ಸಾಲಾಗಿ ||೧||

ರಾ—(ನೋಡಿ) ಹೌದು ಮಿತ್ರನೆ ನೀನು ಗದ್ದಲಮಾಡದೆ ಸ್ವಲ್ಪದೂರದಲ್ಲೇ ಇರು; ಇದನ್ನು ನಾನು ಮೆಲ್ಲಗೆ ಹಿಡಿದುಕೊಳ್ಳುತ್ತೇನೆ.

ವಿ—ಆಗಲಿ. (ಸದ್ದುಮಾಡದೆ ದೂರದಲ್ಲಿ ನಿಲ್ಲುವನು)

ರಾ—(ಮೆಲ್ಲಗೆಹೋಗಿ ಹಿಡಿದು ಮೈಸವುರುತ್ತ) ಇಂತಹ ಸುಂದರವಾದ ಹಂಸವನ್ನು ಇದುವರೆಗೂ ನಾನೆಲ್ಲಿಯೂ ನೋಡಿಲ್ಲ.

ಹಂಸ—ಎಲೈ ರಾಜೇಂದ್ರನೆ ನನ್ನನ್ನು ಏತಕ್ಕೆ ಹಿಡಿದುಕೊಂಡೆ? ನಿನ್ನನ್ನು ನೋಡಿ ಧರ್ಮಾತ್ಮನೆಂದು ನಾನು ನಂಬಿ ನಿರ್ಭಯವಾಗಿ ತಿರುಗಾಡುತಿದ್ದೆ; ಇಂತಹ ನನ್ನಲ್ಲಿ ನೀನು ಕ್ಷಾತ್ರವನ್ನು ತೋರಿಸಬಹುದೆ? ನಾನು ನಿನಗೇನಪರಾಧಮಾಡಿದೆ? ಕಾಡಿನಲ್ಲಿ ತಾವರೇಗೆಡ್ಡೆ ಮುಂತಾದುವುಗಳನ್ನು ಆಹಾರಮಾಡಿಕೊಂಡು ನಾನು ಋಷಿವೃತ್ತಿಯಿಂದಿರತಕ್ಕವನು. ಇಂತಹ ನಿರಪರಾಧಿಯಾದ ನನ್ನನ್ನು ವಂಚಿಸಿ ಹಿಡಿದುಕೊಂಡ ನೀನು ಹೇಗೆತಾನೆ ಧರ್ಮಾತ್ಮನೆನಿಸಿಕೊಳ್ಳುವೆ?

ರಾ—ಲೋಕದಲ್ಲಿ ಪಕ್ಷಿಗಳು ಮಾತಾಡುವುದೇ ಆಶ್ಚರ್ಯ! ಅದರಲ್ಲೂ ಈ ಪ್ರಕಾರ ಧರ್ಮಾಧರ್ಮಗಳನ್ನು ತಿಳಿದು ಮಾತಾಡುವುದು ಇನ್ನೂ ಆಶ್ಚರ್ಯ! ಇದರ ಮಾತನ್ನು ಕೇಳಿದರೆ ಎಂಥವರ ಮನಸ್ಸಾದರೂ ಕರಗಿಹೋಗುವುದು.

ವಿ—(ಭಯಸಂಭ್ರಮದಿಂದ) ಮಹಾರಾಜನೆ ಬಿಡು ಬಿಡು ಬಿಡು. ಮೆಲ್ಲಗೆ ತಪ್ಪಿಸಿಕೊಂಡು ಇತ್ತಲಾಗಿ ಬಂದುಬಿಡು. ಅಯ್ಯೋ! ಅಯ್ಯೋ! ಇದೇನೋ! ಭೂತವೋ ಪಿಶಾಚಿಯೊ ಏನೋ ಕಾಣೆ! ಪಕ್ಷಿ ಹೀಗೆಲ್ಲಾ ವಿಪರೀತ ಬುದ್ಧಿಯಿಂದ ಮಾತನ್ನಾಡುವುದನ್ನು ನಾನೆಲ್ಲೂ ಕೇಳಿಲ್ಲ. ಇನ್ನೇನು ಗತಿ!

ರಾ—ಮಿತ್ರನೆ ಭಯಪಡಬೇಡ.

ಹಂ—ಅಯ್ಯೋ! ರಾಜನೆ ನನ್ನನ್ನು ಹಿಂಸಿಸದೆ ಬಿಟ್ಟುಬಿಡು! ವೃದ್ಧಳಾದ ನಮ್ಮ ತಾಯಿಗೆ ನಾನೊಬ್ಬನೇ ಮಗ; ನನ್ನ ಹೆಂಡತಿಯು ಈಗ ತಾನೇ ಮರಿಗಳನ್ನು ಹಾಕಿಕೊಂಡಿರುವಳು. ಅಯ್ಯೋ! ನನ್ನನ್ನು ಕಾಣದೆ ಅವರುಗಳು ಎಷ್ಟು ಕಳವಳಪಡುವರೋ ಕಾಣೆ. ಹಾ!

ದೈವವೆ ಅವರಿಗೆ ನಾನಲ್ಲದೆ ಮತ್ತಾರೂ ರಕ್ಷಕರಿಲ್ಲ. ಹಾ ಹಾ ಮುಂದೇನುಗತಿ! (ರೋದಿಸುವುದು)

ರಾ—ಇದರ ರೋದನವು ಕರ್ಣಕಠೋರವಾಗಿದೆ. (ದುಃಖದಿಂದ ಕಣ್ಣೀರುಮಿಡಿದು) ಎಲೆ ಬುದ್ಧಿಶಾಲಿಯಾದ ಹಂಸವೆ ಭಯಪಡಬೇಡ. ನಿನ್ನ ಸೌಂದರ್ಯವನ್ನು ನೋಡುವುದಕ್ಕೋಸ್ಕರ ಹಿಡಿದುಕೊಂಡೆ, ಇದೋ ಬಿಟ್ಟುಬಿಡುತ್ತೇನೆ ಎಲ್ಲಾದರೂ ಹೋಗಿ ಸುಖವಾಗಿರು. (ಬಿಡುವನು)

ಹಂ—(ರೆಕ್ಕೆ ಕೊಡವಿಕೊಂಡು ಹೊರಡಲು)

ವಿ—ಈಗಲೀಗ ಬದುಕಿದೆ. ಈ ಪೀಡೆ ತೊಲಗಿತು.

ಹಂ—(ಸ್ವಲ್ಪದೂರ ಹೋಗಿ ಮತ್ತೆ ಹಿಂದಕ್ಕೆ ಬರುವುದು)

ವಿ—ಅಯ್ಯೊ! ಪ್ರಾರಬ್ಧ ತಿರಿಗೂ ಬಂತಲ್ಲಾ! ಮಹಾರಾಜನೆ ಇದು ನಿಜವಾಗಿ ಪಕ್ಷಿಯಲ್ಲ; ನಮ್ಮಪ್ಪನಾಣೆಗೂ ಪಕ್ಷಿಯಲ್ಲ, ನನ್ನ ಜನಿವಾರದಾಣೆಗೂ ಪಕ್ಷಿಯಲ್ಲ, ತಿರುಗಿ ನೀನಿದರ ಗೋಜಿಗೆ ಹೋಗಬೇಡ. ನಿನ್ನನ್ನು ಬೇಡಿಕೊಳ್ಳುತ್ತೇನೆ. ಎಲ್ಲಾದರೂ ತಪ್ಪಿಸಿಕೊಂಡು ಹೊರಟುಹೋಗೋಣ ಬಾ. (ಹೊರಡುವನು)

ರಾ—ಮಿತ್ರನೆ ನಿಲ್ಲುನಿಲ್ಲು ಭಯಪಡಬೇಡ. ಮತ್ತೆ ಇದೇತಕ್ಕೆ ಬಂತೊ ನೋಡೋಣ.

ವಿ—ಅಯ್ಯೊ ನಾನು ಹೇಗೆ ಭಯಪಡದೆ ಇರಲಿ! ನಮ್ಮ ತಾಯಿಗೆ ನಾನೊಬ್ಬನೇ ಮಗ.

ಹಂ—ಎಲೈ ಮಹಾರಾಜನೆ ಕ್ಷತ್ರಿಯರಿಗೆ ಬೇಟೆಯಾಡುವುದು ಧರ್ಮವಾಗಿದ್ದರೂ ನೀನು ನನ್ನನ್ನು ಕೊಲ್ಲದೆ ಬಿಟ್ಟುದನ್ನು ನೋಡಿದರೆ ನೀನು ಪರಮ ದಯಾಳುವೆಂದು ತೋರುತ್ತದೆ. ಈ ನಿನ್ನ ಉಪಕಾರಕ್ಕಾಗಿ ಅಲ್ಪವಾದ ನನ್ನ ಪ್ರತ್ಯುಪಕಾರವನ್ನು ತಿರಸ್ಕರಿಸದೆ ಅಂಗೀಕರಿಸು.

ರಾ—ಎಲೆ ಹಂಸವೆ ನಿನ್ನ ಮಾತೇ ನನಗೆ ಬಹಳ ಪ್ರೀತಿಯನ್ನುಂಟುಮಾಡುತ್ತಿರುವುದು. ಇದರಮೇಲೆ ನೀನು ಮಾಡತಕ್ಕ ಉಪಕಾರವನ್ನು ನಾನು ತಿರಸ್ಕರಿಸೇನೆ? ಅದೇನು ಸಂಕೋಚವಿಲ್ಲದೆ ಹೇಳು.

ವಿ—(ಭಯದಿಂದ) ಮುಂದಿನ್ನೇನುಗತಿ ! ಏನು ಮೋಸಮಾಡುವುದೊ ಕಾಣೆ ನಲ್ಲಾ ! ರಾಯನೆ ಅದರ ಮಾತಿಗೆ ನೀನು ಮರುಳಾಗಬೇಡ ; ಮೆಲ್ಲಗೆ ಇತ್ತಲಾಗಿ ಕಾಲಿಗೆ ಬುದ್ಧಿಹೇಳುವುದು ನನಗೆ ಚೆನ್ನಾಗಿ ತೋರುತ್ತದೆ.

ರಾ—ಏತಕ್ಕೆ ಸುಮ್ಮನೆ ಅರುಚಿಕೊಳ್ಳುತ್ತೀಯೆ ? ಸುಮ್ಮನಿರು. ಯಾವುದನ್ನೂ ಕೊನೆತನಕಲೂ ಪರೀಕ್ಷಿಸಬೇಕು.

ಹಂ—ರಾಜೇಂದ್ರನೆ ಕೇಳು, ವಿದರ್ಭದೇಶಾಧಿಪತಿಯಾದ ಭೀಮ ಮಹಾರಾಜನಿಗೆ ದಮಯಂತಿಯೆಂಬ ಮಗಳಿರುವಳು. ಆಕೆ ರೂಪಿನಲ್ಲೂ ಗುಣದಲ್ಲೂ ಲಕ್ಷ್ಮಿಯನ್ನೂ ಮೀರಿರುವಳು. ಅಂತಹ ಸ್ತ್ರೀರತ್ನಕ್ಕೆ ತಕ್ಕ ವರನು ನೀನೇ ಹೊರತು ಮತ್ತೆ ಯಾರೂ ಇಲ್ಲ. ಆಕೆ ನಿನ್ನನ್ನು ವರಿಸದೇಹೋದಲ್ಲಿ ನಿನ್ನ ರೂಪು ಗೊಡ್ಡುಮರದ ಹೂವಿನಂತೆ ನಿಷ್ಫಲವಾದುದು. ಈಗಲೇ ನಾನು ಹೋಗಿ ಆಕೆಯ ಬಳಿಯಲ್ಲಿ ನಿನ್ನ ಗುಣಗಳನ್ನು ಹೊಗಳಿ ಅವಳಿಗೆ ನಿನ್ನಲ್ಲಿ ಅನುರಾಗವುಂಟಾಗುವಂತೆ ಮಾಡುವೆನು. ಇದೇ ನನ್ನ ಪ್ರತ್ಯುಪಕಾರ. (ಹಾರಿ ಹೊರಟುಹೋಯಿತು)

ವಿ—(ಸಮೀಪಕ್ಕೆ ಬಂದು) ರೊಟ್ಟಿ ಜಾರಿ ತುಪ್ಪಕ್ಕೆ ಬಿತ್ತೆಂದು ತಿಳಿದಿರುವೆಯಲ್ಲವೆ ? ಅಯ್ಯೊ ! ಹುಚ್ಚಾ ಹುಚ್ಚಾ ಹಾಗೆ ತಿಳಿಯಬೇಡ ; ಪಕ್ಷಿಯೆಲ್ಲಿಯಾದರೂ ಮಾತನಾಡುವುದುಂಟೆ ? ಇದೇನೋ ಮೋಸವೆಂದು ತಿಳಿ.

ರಾ—ಅಯ್ಯೊ ! ಮಂಕೆ ನೀನೇನು ಬಲ್ಲೆ-ದೇವಲೋಕದ ಹಂಸಪಕ್ಷಿಗಳು ತಾನೆ ಈ ಪ್ರಕಾರ ಮಾತನಾಡತಕ್ಕುವುಗಳೆಂದು ನಾನು ಕೇಳಿದ್ದೆ. ಇದೂ ಅದೇ ಹಂಸಪಕ್ಷಿಯೇ ಹೊರತು ಬೇರೆಯಲ್ಲ.

ವಿ—ಮಿತ್ರನೆ ಹಾಗಾದರೆ ನಾನು ಮೋಸ ಹೋದೆನಲ್ಲಾ ! ಮೊದಲೇ ಈ ಸಂಗತಿ ತಿಳಿದಿದ್ದರೆ ದೇವಲೋಕಕ್ಕೆ ಹೋಗಿರುವ ನಮ್ಮ ತಾಯಿ ತಂದೆಗಳ ಯೋಗಕ್ಷೇಮವನ್ನು ಸ್ವಲ್ಪ ವಿಚಾರಿಸುತ್ತ ಇದ್ದೆ. ತಿಳಿಯದೇಹೋಯಿತು. ಮಾಡುವುದೇನು ! ನಿನ್ನ ಮನಸ್ಸಿಗ ಸಮಾ

ಧಾನವಾಯ್ತಲ್ಲಾ ? ಅರಮನೆಗೆ ಹೊರಡುವ ಯೋಚನೆಯನ್ನು ಮಾಡು.

ರಾ—ಮಿತ್ರನೆ ಸಮಾಧಾನವೆಂದರೇನು ?

ಕಂ|| ವರಹಂಸದ ನುಡಿಯಿಂದಂ |
ವಿರಹದಸಂತಾಪಮೆನಗೆ ಪೆರ್ಚಿದುದಿನ್ನುಂ |
ಬಿರುಗಾಳಿಯಬಿರುಬಿಂದಂ |
ಪರಿಪರಿಯೆನೆಕಾಡುಗಿಚ್ಚು ಪೆರ್ಚುವತೆರದಿಂ ||೧೦||

(ಪಶ್ಚಿಮದಿಕ್ಕನ್ನು ನೋಡಿ) ಓಹೊ !. ಸಂಧ್ಯಾಸಮಯವಾಯ್ತು. ಬಾ ಹೋಗೋಣ. (ತೆರಳಿದರು)

ಕಂಚುಕಿ—(ಪ್ರವೇಶಿಸಿ) (ಕ್ರೀಡಾವನಮಾರ್ಗ)

*ಕಂ| ಮನಮಾಳ್ದೊಡಮತಿಚಿಂತೆಯ |
ತನುವಿದುತಾಂ ಜೀರ್ಣಮಾದೊಡಂವಾರ್ಧಕದಿಂ |
ದನವರತಮಿಂತು ಭಾವಿಪೊ |
ಡೆನಗೀಯಧಿಕಾರಮಧಿಕದುಃಖವಿಕಾರಂ ||೧೧||

ರಾಣಿವಾಸದಲ್ಲಿ ಕೆಲಸ ಮಾಡಿಕೊಂಡಿರುವುದು ಬಹು ಕಷ್ಟ ಬಹು ಕಷ್ಟ. ಇತ್ತಲಾಗಿ ಹೋದರೆ ಒಂದು ಕಷ್ಟ, ಅತ್ತಲಾಗಿ ಬಂದರೆ ಒಂದು ಕಷ್ಟ. ಒಂದು ಮಾತಾಡಿದರೆ ಕಡಮೆ, ಎರಡು ಮಾತಾಡಿದರೆ ಹೆಚ್ಚು. ಕುಮಾರಿಯಾದ ದಮಯಂತಿಯು ಸಖಿಯರ ಸಂಗಡ ಪ್ರಮದಾವನಕ್ಕೆ ಹೋಗಿ ಬಹಳ ಹೊತ್ತಾಯಿತು ; ಇನ್ನೂ ಏತಕ್ಕೆ ಬರಲಿಲ್ಲವೊ ನೋಡಿಕೊಂಡು ಬಾ ಎಂದು ಮಹಾರಾಣಿಯ ಅಪ್ಪಣೆಯಾಯ್ತು. ಆ ಮಕ್ಕಳಿಗಾದರೊ ನನ್ನನ್ನು ಕಂಡರೆ ಸ್ವಲ್ಪವೂ ಲಕ್ಷ್ಯವಿಲ್ಲ. ನನ್ನನ್ನು ಹುಚ್ಚ

---

*|| ರಾಗ | ಕಮಾಚು | ಏಕತಾಳ || (ಬನ್ನಿ ಬನ್ನೀ ಸುಕುಮಾರರೆ ಎಂಬಂತೆ)

ನನಗಿದೇಯಧಿಕಾರವು | ಅನವರತದುಃಖವಿಕಾರವು || ಅನೇಕಸಹಸ್ರಭಯಪ್ರಕಾರವು || ಇದೇಯಧಿಕಾರವು ||೧|| ತನುಜರಾಹತವಾದುದು | ಮನವಧಿಕಚಿಂತೆಯನಾಂತುದು | ದಿನಕ್ಕೆ ದಿನಕ್ಕೆ ಜುಗುಪ್ಸೆಬಂದುದು || ಇದೇಯಧಿಕಾರವು ||೨||

ನನ್ನು ಕಂಡಂತೆ ಪರಿಹಾಸಮಾಡುವರು. ಅವರನ್ನೇನಾದರೂ ಸ್ವಲ್ಪ ಗಟ್ಟಿಯಾಗಿ ಬಂದು ಮಾತೆಂದರೆ ಆಡುವ ಮಕ್ಕಳನ್ನು ಗದರಿಸಿಕೊಳ್ಳುತ್ತಾನೆಂದು ಎಲ್ಲರೂ ನನ್ನಮೇಲೆ ಚಾಡೀ ಹೇಳುತ್ತಾರೆ. ಏನೂ ಎನ್ನದೆ ಸುಮ್ಮನಿದ್ದರೆ ಅವರು ಹೋದದಾರಿಗೆ ಬಿಟ್ಟುಬಿಡುತ್ತಾನೆ ಎನ್ನುತ್ತಾರೆ. ಹೇಗೆ ಹೋದರೂ ಕಷ್ಟ. ಮುಖ್ಯವಾಗಿ ಪರಸೇವೆಯೇ ಬಹಳ ಕಷ್ಟ. ಒಳ್ಳೇದು ಪ್ರಮದಾವನಕ್ಕೆ ಹೋಗಿ ನೋಡುವೆನು. (ತೆರಳದನು)

ಪ್ರಮದಾವನ.

ದಮಯಂತಿ—(ಸಖಿಯರೊಡನೆ ಪ್ರವೇಶಿಸುವಳು)

೧ ಸಖಿ *ಕಂ|| ಕೆಳದೀನೋಡಿತ್ತಲ್ ಚೆಂ |
ದಳಿರಂತಳಿದೆಸೆವ ಮಾವನಿದರಡಿಯೊಳ್ಕಂ |
ಗೊಳಿವುಯ್ಯಲೆಯಂಬಾರಾ |
ನಲವಿಂದಾಡುವೆವುಪಾಡುತುಂಪಾಡುಗಳಂ ||೧೨||

೨ ನೇ— ಕಂ|| ಥಾಳಿಟ್ಟಂಕುಸುಮಾಸ್ತ್ರಂ |
ತ್ರೈಲೋಕ್ಯದವಿಜಯಕೆಂದು ಸೂಚಿಪಕಹಳಾ |
ಕೋಲಾಹಲಮೆಂಬಂತೆವೊ |
ಲಾಲಿಸುಬಗೆವರ್ಪಕುಕಿಲಸೀಕೋಗಿಲೆಯಾ ||೧೩||

---

* ರಾಗ-ಬೇಹಾಗ್ || (ಆದಂಮೇ ಎಂಬಂತೆ) ಏಕತಾಳ ||

[ಕೆಲವರು ಒಂದು ಚರಣ-ಕೆಲವರು ಅರ್ಧಚರಣ ಹೇಳುವರು]

ಬನ್ನಿರೇ ಸಖಿಯರಿರಾ | ಬನ್ನಿರೆಬಿನದಕೆಸುಮುಖಿಯರಿರಾ ||ಪ|| ಚೆಂದಳಿರಾಂತಮಾ | ಕಂದವನೋಡೆ | ಚಂದಿರವದನೇ | ಚಂಚಲನಯನೇ | ಸುಂದರಿಮಲ್ಲಿಗೆ ಮುಗುಳಬಿಡಿಸಿ | ಚಂದದಿಸರವನು ಕಟ್ಟೋಣಬಾರೆ ||೧|| ಎಳೆಯಳಿನೋಡುಮಾಂ | ದಳಿರನುಸವಿದು | ಕಲರವಮೆಸಗುವ | ಕೋಗಿಲೆಗಳನು | ಪಲವೃಫಲಗಳಸವಿದುನಲಿದು | ಉಲಿಯುತಿಹಗಿಳಿ | ಗಳನುನೋಡೆ ||೨|| ಕೂಡುತಲೆಲ್ಲರು | ಪಾಡುತಪದಗಳ | ಹೂಡಿದುಯ್ಯಾಲೆಯೊಳಾಡುವೆವಾವು | ಜೋಡಿಜೋಡಿಯಾಗೊಲಿದುಬಳ್ಳಿ | ಬೀಡಿನೊಳಗೆಣ್ಣೆಕಲ್ಲಾಡೋಣಬಾರ ||೩||

೩ ನೇ— ಕಂ|| ಮುಗುಳಂಬನ ಮಸೆವೆತ್ತಂ |
ಬುಗಳಂತಿರೆ ತೋರುತಿರ್ಪವೊನೆಮಲ್ಲಿಗೆಯಾ |
ಮುಗುಳಂ ತಿರಿತಂದಾವೆಲೆ |
ಸುಗುಣೇ ಬಾರೊಲ್ದು ಕಟ್ಟುವೆವು ಜಡೆಸರಮಂ ||೧೪||

೪ ನೇ— ಕಂ|| ಎಲೆಬಾಲಾಮಣಿ ಬಾರಲ |
ರ್ದಲರ್ಗಳ ನರುಗಂಪಿನಿಂಕರಂತೀವಿರ್ಪೀ |
ಲಲಿತಲತಾಮಂಟಪದೊಳ |
ಗೊಲವಿಂದಾವಣ್ಣೆ ಕಲ್ಲನಾಡುವೆವೀಗಳ್ ||೧೫||

ಹೇಮಪ್ರಭೆ—ಸಖಿ ದಮಯಂತಿ ಇದೊ ಇತ್ತಲಾಗಿ ನೋಡು. ಒಂದು ಸುಂದರವಾದ ಹಂಸಪಕ್ಷಿಯು ಎಲ್ಲಿಂದಲೋ ಹಾರಿಬಂದು ಲತಾ ಮಂಟಪದ ಬಳಿಯಲ್ಲಿ ಸುತ್ತಾಡುತ್ತಿರುವುದು.

ದಮ—(ನೋಡಿ) ಹೌದು ಹೌದು ನೀವೆಲ್ಲರೂ ಸದ್ದುಮಾಡದೆ ಸುಮ್ಮನಿರಿ. ಅದನ್ನು ನಾನು ಮೆಲ್ಲಗೆ ಹಿಡಿದುಕೊಳ್ಳುತ್ತೇನೆ. (ಹಿಡಿಯಲು ಹೋಗುವಳು)

(ಹಂಸವು ತಪ್ಪಿಸಿಕೊಂಡು ಹೋಗುವುದು)

೧ ಸಖಿ—(ದೂರದೃಷ್ಟಿಯಾಗಿ ನೋಡುತ್ತಾ) ಹೇಮಪ್ರಭೆ ಅದೊ ನೋಡು ನೋಡು ಇನ್ನೇನು ಸಿಕ್ಕಿಬಿಟ್ಟಹಾಗಿದೆ.

ಹೇಮ—(ನೋಡಿ) ಅಯ್ಯೋ! ಅದೆಲ್ಲಿ ಸಿಕ್ಕುತ್ತದೆ. ಹೊತ್ತುಹೋಗದು. ಅದರ ಆಸೆಯಿಂದ ರಾಜಕುಮಾರಿಯಾದ ದಮಯಂತಿಯು ಕಾಡು ದಾರಿ ಬಿದ್ದು ಬಹುದೂರ ಹೊರಟುಹೋದಳು.

ತರಂಗಿಣಿ—ಅದಂತು ಸಿಕ್ಕುವಹಾಗಿಲ್ಲ. ನಾನು ಹೋಗಿ ದಮಯಂತಿಯನ್ನು ಹಿಂದಕ್ಕೆ ಕರೆದುಕೊಂಡು ಬರುತ್ತೇನೆ.

ಚಂದ್ರ—ಹಾಗೆ ಮಾಡು ಹಾಗೆ ಮಾಡು ಹೋಗು.

ತರಂ—(ತೆರಳಿದಳು)

ಹೇಮ—ಚಂದ್ರಪ್ರಭೆ ದಮಯಂತಿ ಬರುವತನಕ ನಾವು ಹೂವೆತ್ತುತ್ತಾ ಇರೋಣ ಬಾ.

ಚಂದ್ರ—ಒಳ್ಳೇದು ನಡೆ. (ಹಾಗೆ ಮಾಡುತ್ತಿರುವರು)

೧ ಸಖಿ * ಕಂ|| ಎಲೆಸಖಿ ನೋಡೆಲರಿಂಚಲಿ |
ಪೆಲೆಯೆಲೆಯಾ ಮರೆಯೊಳಿಸೆವ ಸಂಪಗೆಯಲರಂ |
ಪಲವೊಳ್ಗಂಪಾಳ್ದಲರ್ಗೊಂ |
ಚಲಿಸೊಪ್ಪುತ್ತಿರ್ಪ ಗೋರಟೆಯ ನೋಡಿತ್ತಲ್ ||೧೬||

೨ ನೇ † ಕಂ|| ಎಲೆಬಾಲಾಮಣಿ ಯಿತ್ತ |
ಲ್ವಿಲೋಕಿಸೀಲಲಿತಕುಂದಲತೆ ಯುಲರ್ದಲರಿಂ |
ದಳುರ್ದೆತ್ತಿತ್ತಲುಮೇಂ ಕ |
ಣ್ಗೊಳಿಕುಮೊ ಬೆಳ್ದುಗುಲದಿಂದೆ ಬಾಸಣಿಸಿದವೋಲ್ ||೧೭||

೩ ನೇ ‡ ಕಂ|| ಸುಂದರತರಮಾದಾಕೃತಿ |
ಯಿಂದಂ ಬಗೆಬಗೆಯ ಬಣ್ಣದಿಂದಂನರುಗಂ |
ಪಿಂದಮುದೇಂ ಬಗೆಗೊಳ್ವುವೊ |
ಬಂದುಗೆವೂಗಳಿವು ನೋಡುಸಖಿಯತ್ತಿತ್ತಲ್ ||೧೮||

ಕಂ—(ಪ್ರವೇಶಿಸಿ ಕೋಪದಿಂದ) ಎಲೆ ಹೇಮಪ್ರಭೆ, ಇದೇನು ಇನ್ನೂ ಇಲ್ಲೇ ಆಟವಾಡುತ್ತಾ ಇದ್ದೀರಿ! ದಮಯಂತಿಯೆಲ್ಲಿ?

ಹೇಮ—ಆರ್ಯ್ಯೆ, ಅವಳೊಂದು ಹಂಸಪಕ್ಷಿಯನ್ನು ಹಿಡಿಯಬೇಕೆಂದು ಅದು ಹೋದಕಡೆಗೆ ಬೆನ್ನಟ್ಟಿಹೋಗಿದಾಳೆ.

ಕಂ—ಹಂಸಪಕ್ಷಿಯೆಂದರೇನು! ಅದನ್ನು ಹಿಡಿಯುವುದಕ್ಕೆ ಕಾಡುದಾರಿಯಲ್ಲಿ ಹೋಗುವುದೆಂದರೇನು! ಅಲ್ಲೇನಾದರೂ ಅಪಾಯವುಂಟಾ

|| ರಾಗ | ಕಾಂಭೋಜಿ | ಏಕತಾಳ ||
(ನಿನುನಮ್ಮಿತಿವೊ ಎಂಬಂತೆ)

* ನೋಡುನೋಡುಸಖೀ | ನೋಡುಚಂದ್ರಮುಖೀ ||ಪ|| ಬೀಡಳಿಯದವೂ | ದೋಟದಂದವನು ||ಅನು|| ಎಲರಿಂದೆಲೆ ಸಂ | ಚಲಿಸುತ್ತಿರಲು | ಪೊಳೆಯುತ್ತಿವೆ ಪೂ | ಗಳು ಸಂಪಗೆಯೊಳ್ ||೧|| ಲಲನಾಮಣಿಯೆ | ತ್ತಲುಗೋರಟೆಯಾ | ಅಲರ್ಗೊಂಚಲಸೇ | ರ್ದಳಿಸಂಕುಲವ ||೨||

† ತಳೆದವೂಗಳಿಂ ಕ | ಣ್ಗೊಳಿಪಕುಂದಲತೆ | ಬಿಳಿಯಸೀರೆದು ಸಂ | ಗಳಿಸಿದಂತಿಹುದು ||೩||

‡ ಮುಗಮುಗಿಪ್ಪಕಂಪಿಂ | ಸೊಗಸಾದರೂಪಿಂ | ಬಗೆಗೊಳ್ಳುವೀ ಬಂ | ದುಗೆವೂಗಳನ್ನು ||೪||

ದರೇನುಗತಿ? ಬಹು ಚೆನ್ನಾಯ್ತು ಬಹು ಚೆನ್ನಾಯ್ತು! ತರಂಗಿಣಿ ಯೆಲ್ಲಿ?

ಹೇಮ—ಇದೊ, ಇಬ್ಬರೂ ಇತ್ತಲಾಗಿ ಬರುತ್ತಿರುವರು.

ದಮ—(ತರಂಗಿಣಿಯೊಡನೆ ವ್ಯಸನಪಡುತ್ತ ಬರುವಳು)

ಕಂ—ಕುಮಾರಿಗೆ ಜಯವಾಗಲಿ. ಕುಮಾರಿಯೆ ಇದೇನು? ನಿನ್ನನ್ನು ನೋಡಿದರೆ ವ್ಯಸನಪಡುವಹಾಗಿದೆ?

ದಮ—ಆರ್ಯನೆ, ಮನುಷ್ಯರಂತೆ ಮಾತಾಡುವ ಒಂದು ಹಂಸಪಕ್ಷಿ ಬಂದಿತ್ತು. ಎಷ್ಟು ಪ್ರಯತ್ನಮಾಡಿದರೂ ಅದು ನಮ್ಮ ಕೈಗೆ ಸಿಕ್ಕದೆ ಹೊರಟುಹೋಯಿತು.

ಕಂ—ಅದು ಯಾರೊ ಮಾತು ಕಲಿಸಿರತಕ್ಕ ಪಕ್ಷಿಯಾಗಿರಬಹುದು. ಅಂತಹ ಪಕ್ಷಿಗಳು ನಮ್ಮರಮನೆಯಲ್ಲಿ ಎಷ್ಟಿಲ್ಲ. ಅದರ ಮಾತನ್ನು ಕೇಳ ಬೆರಗಾಗಿ ನೀನು ಕಾಡುದಾರಿಯಲ್ಲಿ ಹೋಗಬಹುದೆ?

ತರಂ—(ಆತ್ಮ) ಆ ಹಂಸಪಕ್ಷಿ ಆಡಿದ ಮಾತೇನೊ, ಇವಳು ಯಾತಕ್ಕೆ ವ್ಯಸನಪಡುತ್ತಿದಾಳೊ ಈ ಮುದಿಗೂಬೆಯೇನು ಬಲ್ಲದು.

ಕಂ—ಈಚೆಗೆ ನೀನು ದೊಡ್ಡವಳಾದಮೇಲೆ ಇಂತಹ ವಿನೋದಗಳೇನಾದರೂ ಸಿಕ್ಕಿದರೆ ಸಾಕು; ಹಗಲಿರುಳೂ ಅದೇ ಚಿಂತೆ. ಇನ್ನು ಹೊತ್ತಾಯ್ತು; ಅರಮನೆಗೆ ನಡೆಯಿರಿ.

ಚೇಟಿ—ರಾಜಕುಮಾರಿಯೆ, ಈ ಕಡೆ ದಯಮಾಡಿಸಬೇಕು.

ದಮ— ಕಂ|| ಎಂದಿಗೆಕೈಸೇರ್ಗುಗುಮಾ |
ಸುಂದರಗುಣರೂಪರಾಜಹಂಸಂಸಖಿಪೇ |
ಳಿಂದುಮುಖೀಸ್ಯೈಸುವೆನೆಂ |
ತಂದಿನವರೆಗಂಮನೋಭವಾರ್ತಿಯನಕಟಾ ||೧೯||

(ಎಲ್ಲರೂ ತೆರಳಿದರು)

ಮೊದಲನೆಯ ಅಂಕವು ಮುಗಿದುದು.

ದ್ವಿತೀಯಾಂಕಂ

(ಪರ್ವತನಾರದರ ಪ್ರವೇಶ)

ಸ್ವರ್ಗಮಾರ್ಗ.

ನಾರದರು—

* ಷಟ್ಪದಿ|| ಹರಿಯೆ ಕರುಣಾಲಹರಿಯೇ ನರ |
ಹರಿಯೆ ವೇದೋದ್ಧಾರಿಯೇ ವರ |
ಕಿರಿಯೆ ಮಂದರಶೈಲಧಾರಿಯೆ ಬಲಿಮಖಾತಿಥಿಯೆ |
ಪರಶುಪಾಣಿಯೆ ರಾವಣಾರಿಯೆ |
ಕರತಲೋದ್ಧೃತಗಿರಿಯೆ ಹಲಿಯೇ |
ದುರಿತಹಾರಿಯೆ ಸಲಹುಮಂಗಳ ದೇವತಾಪತಿಯೆ ||೧||

(ಎಂದು ಹೇಳುತ್ತಾ ಬಂದು)

ಎಲೈ ಪರ್ವತನೆ, ನಾವು ಭೂಮಂಡಲವನ್ನೆಲ್ಲಾ ಸುತ್ತಿದ್ದುದಾಯಿತು. ಎಲ್ಲಿಯೂ ಯುದ್ಧದ ಹೆಸರೇ ಇಲ್ಲ. ಇದರಿಂದ ನನ್ನ ಮನಸ್ಸಿಗೆ ಬಹಳ ಬೇಸರವಾಗಿದೆ. ಇಂದ್ರಸಭೆಗಾದರೂ ಹೋಗಿ ಬರೋಣ ಬಾ.

ಪರ್ವತ—ಗುರುಗಳಪ್ಪಣೆಯಾದಂತಾಗಲಿ. (ಇಬ್ಬರೂ ತೆರಳಿದರು)

---

* || ರಾಗ | ವಸಂತ | ತಾಳ | ಮಿಶ್ರಛಾಪು ||

(ಕರೆಯೇತನಗೆ | ಆಪರಿಯೇನೆ ಎಂಬಂತೆ)

ಹರಿಯೇ ಕರುಣಾಲ | ಹರಿಯೆ ಪಾಲಿಪುದೆನ್ನ | ಮರೆಯೆನೀಂಬೇರೆ ನಾ | ನರಿಯೆನುಪೊರೆವರ ||ಪ|| ಇಳೆಸಿರಿಯುರುಪದ | ನಳಿನಸೇವೆಯೊಳಿರೆ | ಪೊಳೆವಹಿತ ಲ್ಪದೆ | ಮಲಗಿರುವಾಶ್ರೀ ||೧|| ದುರುಳದೈತ್ಯನಕೊಂದು | ಪೊರೆಯೆ ಪ್ರಹ್ಲಾದನ | ಮೆರೆವಕಂಬದೊಳವ | ತರಿಸಿದವರನರ ||೨||

ಇಂದ್ರ ಸಭೆ.

(ಇಂದ್ರ, ಅಗ್ನಿ, ಯಮ, ವರುಣ, ನಾರದ, ಪರ್ವತರ ಪ್ರವೇಶ)

ಸ್ತುತಿಪಾಠಕರು—ಜಯಜಯ ತ್ರಿಲೋಕಾಧೀಶ್ವರಾ. (ಎಂದು ಕೈಯೆತ್ತಿ ಹೊಗಳುವರು)

(ಅಪ್ಸರಸ್ತ್ರೀಯರ ನಾಟ್ಯವಾಗುವುದು)

ಇಂದ್ರ—ಎಲೈ ನಾರದರೆ, ಭೂಮಂಡಲದಿಂದ ಅನೇಕ ರಾಜರು ಯುದ್ಧದಲ್ಲಿ ಹತರಾಗಿ ಇಲ್ಲಿಗೆ ಬರುತ್ತಿದ್ದರು. ಈಚೆಗೆ ಅವರ ಸುಳಿವೇ ಇಲ್ಲ. ಇದಕ್ಕೆ ಕಾರಣವೇನು ?

ನಾ—ಮಹೇಂದ್ರನೆ, ವಿದರ್ಭದೇಶಾಧಿಪತಿಯಾದ ಭೀಮಮಹಾರಾಜನಿಗೆ ದಮಯಂತಿಯೆಂಬ ಒಬ್ಬ ಮಗಳಿರುವಳು.

ಕಂ|| ಆಕೆ ಮನೋಜನ ವಿಜಯಪ |
ತಾಕೆ ಮನೋಹಾರಿವದನರುಚಿಧಿಕ್ಕೃತನಾ |
ಕೇಕೆ ಪಲತೆರದೆ ವಿವರಿಸ |
ಲೇಕೆ ಸರೋಜಾಸ್ತ್ರಶಾಸ್ತ್ರಟೀಕೆಯೆನಿಕ್ಕುಂ ||೩||

ಆ ಸುಂದರಿಯನ್ನು ವರಿಸುವುದಕ್ಕಾಗಿ ಭೂಮಂಡಲದಲ್ಲಿರತಕ್ಕ ಅರಸುಗಳೆಲ್ಲಾ ಐಶ್ವರ್ಯದಲ್ಲೂ ಗುಣದಲ್ಲೂ ನಾನು ಹೆಚ್ಚು ತಾನು ಹೆಚ್ಚು ಎಂದು ಗರ್ವಪಡುತ್ತ ಹೇಗಾದರೂ ಆಕೆಯನ್ನು ವರಿಸಬೇಕೆಂದು ಅನೇಕ ಪ್ರಯತ್ನಗಳನ್ನು ಮಾಡುತ್ತ ಯುದ್ಧವನ್ನು ವಿಷಪ್ರಾಯವಾಗಿ ತಿಳಿದಿರುವರು. ಮತ್ತು ಆ ಸ್ತ್ರೀರತ್ನವಿರತಕ್ಕ ವಿದರ್ಭದೇಶವನ್ನೇ ಸ್ವರ್ಗವೆಂದು ತಿಳಿದಿರುವರೇ ಹೊರತು ಈ ಸ್ವರ್ಗವನ್ನು ಸ್ವಲ್ಪವೂ ಲಕ್ಷ್ಯಮಾಡತಕ್ಕವರಾಗಿಲ್ಲ.

ಇಂ—ಏನು ? ಆಕೆ ಅಂತಹ ಸೌಂದರ್ಯವತಿಯೆ ?

ನಾ—ಅಯ್ಯೋ ! ಅಯ್ಯೋ ! ನಾನೇನಹೇಳಲಿ. ಅಂತಹ ರೂಪವತಿಯು ಇಲ್ಲಿರುವ ಅಪ್ಸರಸ್ತ್ರೀಯರಲ್ಲೂ ಇಲ್ಲ.

ಇಂ—ಹಾಗಾದರೆ ಆ ರಮಣೀಮಣಿಯನ್ನು ನಾನು ವರಿಸದೆ ಇದ್ದರೆ ಈ ನನ್ನ ಐಶ್ವರ್ಯವೆಲ್ಲಾ ವ್ಯರ್ಥವಾದುದೇ ಸರಿ.

* ಕಂ|| ಏಪರಿಯಿಂದಾದೊಡಮಾ |
ರೂಪವತೀಲೋಕಮಕುಟ ಮಣಿಯೆನಿಸಿರ್ಪಾ |
ಭೂಪಾಲಸುತೆಯ ಕಯ್ವಿಡಿ |
ವಾಪುಣ್ಯಂ ದೊರೆಗುಮೇನೆಮಗೆ ದಿಗಧಿಪರೇ ||೩||

ನಾ—ನಿಜ,ಕಂ|| ಆವಾಮವಿಲೋಚನೆಯಂ |
ಕೈವಿಡಿಯದ ಭಾಗ್ಯಹೀನಪುರುಷನ ಸಿರಿಯುಂ |
ಯೌವನಮುಂ ಗುಣಗಣಮುಂ |
ಜೀವಿತಮುಂ ಜನ್ಮಮುಂ ನಿರರ್ಥಕಮಲ್ತೇ ||೪||

ಇಂ—ಎಲೈ ಲೋಕಪಾಲರೆ, ನಾವು ನಾಲ್ಕು ಮಂದಿಯೂ ದಮಯಂತೀ ಸ್ವಯಂವರಕ್ಕಾಗಿ ಭೂಲೋಕಕ್ಕೆ ಹೊರಡೋಣ. ನಮ್ಮ ನಾಲ್ಕು ಮಂದಿಯಲ್ಲಿ ಆಕೆ ಯಾರನ್ನು ವರಿಸಿದರೂ ಸರಿ.

ಯಮಾಗ್ನಿ ವರುಣರು—ಮಹೇಂದ್ರನಪ್ಪಣೆಯಾದಂತಾಗಲಿ.

ನಾ—ಮಹೇಂದ್ರನೆ, ಈಗ ಎಲ್ಲಾ ರಾಜರಂತೆ ನಿಷಧದೇಶಾಧಿಪತಿಯಾದ ನಳ ಮಹಾರಾಜನೂ ಅಲ್ಲಿಗೆ ಹೊರಟಿರುವನು. ದಮಯಂತಿಯು ಆತ ನನ್ನು ನೋಡಿದರೆ ಅವನನ್ನು ಹೊರತು ಮತ್ತೆ ಯಾರನ್ನೂ ವರಿ ಸುವುದಿಲ್ಲ. ಇದು ಖಂಡಿತ.

|| ರಾಗ | ಬೇಹಾಗ್ | ಏಕತಾಳ ||

ಸಾ ಸಾ ಸಾ ನಿ ದ ಧ ರಿ ೀ ಸಾ ಸ ನಿ ದ ಪಾಪಾಮ ದ ಪ ಪ ಮ ಮಾಗಾ |
ಆ ಪು ಣ್ಯ- ದೊ ರ ಕೀ ತೇ ನಮಗೆ ದಿ ಕ್ಪಾ- ಲ - ರೆ - - - |
ಗಮಪನಿದ ಸ ನಿ ರಿ ಸ ನಿದಪಾ | ಪ ಮ ದಪಪಮ ಮಾಗಾ ||ಪ||
ರೂಪವತಿಯ ದಮಯಂತಿಯ ನಾವು | ವ ರಿ ಸು- ವಂ - - ಥ ||ಪ||

ಗಾಮ ಪಾಮದಪಮ, ಪ ಗ ಮ ಗ ರಿ ಸ ನಿ |
ದೇವ ತಾಯುವತಿ- ಮಕುಟಮಣಿಯಾದ |
ಸಾಮಗಾಮಪನಿ, ಸ ರಿ ಸ ನಿ ದ ಪ ಮ ಪ ||
ಈ ವಧೂಮಣಿಯ ಕೈ-ವಿಡಿಯುವಂ-ಥ ||೧||

ಇಂ—ಪೂಜ್ಯರೆ, ಹಾಗಾದರೆ ಆಕೆ ಆತನ ಕೈಗೆ ಬೀಳದಹಾಗೆ ಯಾವ ಉಪಾಯವನ್ನು ಮಾಡಬೇಕು ?

ನಾ—ಯಾವ ಉಪಾಯವೇನು ? ಇದೊ-(ಎಂದು ಕರ್ಣೋಪದೇಶಮಾಡಿ) ಇದೇ ಉಪಾಯ.

ಇಂ—ಈ ಉಪಾಯವು ಶ್ಲಾಘ್ಯವಾಗಿದೆ. ಎಲೈ ದಿಕ್ಪಾಲರೆ, ಈಗ ನಾರದರು ಮಾಡಿದ ಕರ್ಣೋಪದೇಶವು ಬಹಳ ಚಮತ್ಕಾರವಾಗಿರುವುದು. ಹೊರಡೋಣ ಬನ್ನಿ.

ಸ್ತುತಿಪಾಠಕರು—ಜಯಜಯ ತ್ರಿಲೋಕಾಧೀಶ್ವರಾ. (ಎಂದು ಹೊಗಳುವರು) (ಎಲ್ಲರೂ ತೆರಳದರು)

(ನಳಸಾರಥಿಯ ಪ್ರವೇಶ)

ವಿದರ್ಭನಗರ ಮಾರ್ಗ.

ಸಾರಥಿ—ಅಹ! "ಷಡ್ಭಿರ್ಮನುಷ್ಯಚಿಂತಾನಾಂ ಸಪ್ತಮಂ ದೈವಚಿಂತನಂ" ಎಂಬ ಹಾಗೆ ನಮ್ಮ ಆಲೋಚನೆಯೇ ಬಂದು, ದೈವಗತಿಯೇ ಬಂದು. ಈಗ ಪ್ರಸಕ್ತವಾಗಿರುವ ದಮಯಂತೀ ಸ್ವಯಂವರಕ್ಕಾಗಿ ಇಂದ್ರಾದಿ ದೇವತೆಗಳು ಕೂಡ ಹೋಗುತ್ತಿರುವರಲ್ಲಾ! ಆಕೆಯ ಸೌಂದರ್ಯವು ಎಂಥದಾಗಿರಬಹುದೊ! ಆ ಸ್ವಯಂವರಕ್ಕಾಗಿಯೇ ವಿದರ್ಭದೇಶಕ್ಕೆ ಹೋಗುತ್ತಿದ್ದ ನಮ್ಮ ಮಹಾರಾಜನಾದ ನಳಚಕ್ರವರ್ತಿಯು ಅವರ ಕಣ್ಣಿಗೆ ಬೀಳಬಹುದೆ! ಬಿದ್ದರೂ ಚಿಂತೆಯಿಲ್ಲ. ಅವರ ಮಾತಿಗೆ ಸಿಕ್ಕಿಕೊಂಡು ಅವರಿಗೆ ದೂತನಾಗಿ ದಮಯಂತಿಯ ಬಳಿಗೆ ಹೋಗಿರುವುದು ಮಾತ್ರ ಬಹಳ ಅನುಚಿತ! ಬಹಳ ಅನುಚಿತ!! (ಸ್ವಲ್ಪ ಯೋಚಿಸಿ) ದೇವತೆಗಳಿಗಾದರೇನು? ಯಾರಿಗಾದರೇನು? ಸ್ತ್ರೀ ವ್ಯಾಮೋಹವೆಂಬುದು ಎಂಥವರಿಗಾದರೂ ದುರ್ಬುದ್ಧಿಯನ್ನುಂಟುಮಾಡುವುದು. ಈಗ ನಮ್ಮ ಮಹಾರಾಜನ ಪರಿವಾರವೆಲ್ಲಾ ಈ ವಿದರ್ಭನಗರದ ಎಲ್ಲೆಕಟ್ಟಿನಲ್ಲೇ ನಿಂತುಬಿಟ್ಟಿರುವುದು. ಆತನು ಬರುವವರೆಗೂ ನಾನೂ ಆತನ ರಥವನ್ನು ಇಲ್ಲೇ ಇಟ್ಟುಕೊಂಡು ಕುದುರೆಗಳಿಗೆ ಸ್ವಲ್ಪ ವಿಶ್ರಾಂತಿಯನ್ನು ಕೊಡುವೆನು. (ಎಂದು ತೆರಳದನು)

ಕುಂಡಿನ ನಗರ.

ನಳಮಹಾರಾಜ— (ಪ್ರವೇಶಿಸಿ)

ಕಂ॥ ಕಾಂತಾಮಣಿಯೆನಿಸಿದ ದಮ |
ಯಂತಿಯ ನಾನೆಂತುಟಾದೊಡಂ ವರಿಸುವೆ ನೆಂ |
ಬಂತಹ ಕುತುಕರಸಂ ನಿಮಿ |
ಷಾಂತರದೊಳ್ಬತ್ತಿಪೋದುದೇಗೈದಪೆನಾಂ ||೫||

ಲೋಕದಲ್ಲಿ ಒಂದು ವಿಷಯದ ಕಾರ್ಯಾಲೋಚನೆಯಿರಲಕ್ಕ ಮನು ಷ್ಯನು ಮತ್ತೊಂದು ಕಾರ್ಯದಲ್ಲಿ ಪ್ರವರ್ತಿಸಿದರೆ ಮೊದಲಿದ್ದ ಕಾರ್ಯಾಲೋ ಚನೆಯೇ ಪ್ರಬಲವಾಗಿ ಮನಸ್ಸಿಗೆ ಹತ್ತುತ್ತಾ ಬರುವುದು. ಆದರೂ ವಿವೇ ಕಿಯಾದವನು ತನ್ನ ವಿವೇಕದಿಂದ ಅದನ್ನು ತಡೆದು ಪ್ರಕೃತಕಾರ್ಯದಲ್ಲಿ ಪ್ರವರ್ತಿಸುವನು. ಆದುದರಿಂದ ಈಗ ನಾನು ಸ್ವಕಾರ್ಯದ ಪರ್ಯಾಲೋಚನೆ ಯನ್ನು ಬಿಟ್ಟು ದೇವತೆಗಳಿಗೆ ಮಾತು ಕೊಟ್ಟಿರುವಂತೆ ಅವರ ಕಾರ್ಯದಲ್ಲಿ ಪ್ರವರ್ತಿಸುವುದು ಧರ್ಮವಾದುದು. ಏತಕ್ಕೆಂದರೆ—

ಕಂ॥ ಸತ್ಯವೆ ಲೋಕಾಧಾರಂ |
ಸತ್ಯವೆ ಪೊತ್ತಿರ್ಕುಮಖಿಲ ಧರ್ಮಂಗಳುಮಂ |
ಸತ್ಯವೆ ತಾಯ್ತಂದೆಗಳುಂ |
ಸತ್ಯವಿಹೀನಂಗೆ ದೊರಕದಿಹಪರವೆರಡುಂ ||೬||

(ನೋಡಿ) ಇದೊ-ಮುಂದೆ ಕಾಣಿಸುವುದೇ ವಿದರ್ಭದೇಶಕ್ಕೆ ಅಲಂ ಕಾರಪ್ರಾಯವಾದ ಕುಂಡಿನ ನಗರವು. ಏಕಾಂಗಿಯಾದ ನಾನು ಯಾವ ರೀತಿಯಿಂದ ಈ ಪಟ್ಟಣವನ್ನು ಪ್ರವೇಶಮಾಡಲಿ. (ಸ್ವಲ್ಪ ಯೋಚಿಸಿ) ಆಹ! ಮರೆತಿದ್ದೆ. ದೇವತೆಗಳು ನನಗೆ ತಿರಸ್ಕರಿಣೀ ವಿದ್ಯೆಯನ್ನು ಉಪ ದೇಶಿಸಿರುವರಷ್ಟೆ. ಅದರಿಂದ ನಾನು ಯಾರಿಗೂ ಕಾಣಿಸಿಕೊಳ್ಳದಂತೆ ನಿರ್ಭ ಯವಾಗಿ ಭೀಮಭೂಪಾಲನ ಅರಮನೆಗೆ ಪ್ರವೇಶ ಮಾಡುವೆನು.

(ಎಂದು ತೆರಳಿದನು)

ಭೀಮಭೂಪತಿಯ ಅರಮನೆ.

ನಳ—(ಪ್ರವೇಶಿಸಿ) ಇದೇ ಭೀಮಭೂಪತಿಯ ಅರಮನೆ. ಇಲ್ಲಿ ಬಾಗಿಲು ಕಾಯುವವರಿಗೆ ತೂಕಡಿಸುತ್ತಿರುವುದೇ ಕೆಲಸವೆನ್ನುವಹಾಗಿದೆ.

ಇಲ್ಲಿ ಯಾರು ಹೋದರೂ ಇವರು ಬೇರೆ ಕಾಣಲಾರರು. ಹೀಗಿರುವಲ್ಲಿ ನಾನು ಅದೃಶ್ಯನಾಗಿ ಇಲ್ಲಿ ಪ್ರವೇಶ ಮಾಡುವುದಕ್ಕೆ ಏನಡ್ಡಿ ! ಇಲ್ಲಿ ದಮಯಂತಿಯ ಅಂತಃಪುರವು ಯಾವುದೋ ನೋಡಿ ತಿಳಿಯುವೆನು. (ಎಂದು ತೆರಳಿದನು)

ದಮಯಂತಿಯ ಅಂತಃಪುರ

ಸಖಿಯರು—(ಒಬ್ಬರಿಗೊಬ್ಬರು ಅಲಂಕಾರಮಾಡುತ್ತ)

* ವೃ|| ಚಾರೌಚಕ್ರಿಯಪೋಲ್ವ ನಿನ್ನಜಡೆಗೀ ಪೂಮಾಲೆಯಂ ಸೂಡುವೆಂ |
ಚಾರೌಕಸ್ತೂರಿಬೊಟ್ಟನಿಂ ವದನಚಂದ್ರಂಗಂಕಮಂ ಕಲ್ಪಿಪೆಂ |
ಚಾರೌಹಂಸಕದಿಂದೆ ಹಂಸಗಮನೇಪಾದಾಬ್ಜಮಂ ಭೂಷಿಪೆಂ |
ಚಾರೌತರ್ಕ್ಕಿಪವೋಲ್ಜನಂ ನಡುಗೆನಾಂಬಂಧಿಪ್ಪೆನೀಕಾಂಚಿಯಂ ||೭||

ದಮ—(ಚಿತ್ರಪಟವನ್ನು ನೋಡುತ್ತ ಸಖಿಯೊಡನೆ)

† ಕಂ|| ಇವನೆನ್ನಮನೋವಲ್ಲಭ |
ನವನಿಯೊಳವತರಿಸಿದಿಂದ್ರನೋಮೇಣ್ಮೂರ್ತಿ |

|| ರಾಗ | ಬೇಹಾಗ್ | ಏಕತಾಳ || (ಮಾಯಲಾಗಿನ ಎಂಬಂತೆ)

ಬಾರೆ ಶೃಂಗಾರಮಾಡುವೆ | ಮಂದಗಮನೇ ||ಪ|| ಕುಂದರದನೇ | ರಾಕೇಂದುವದನೇ ||ಅ|| ಕೋಮಲೆ ನಿನ್ನಯ | ಶ್ಯಾಮಳವೇಣಿಗೆ | ಪೂಮಾಲೆ ಮುಡಿಸುವೆ | ಸರಸಿಯರಸಿ | ಪೊಸ, ಪೂಮಾಲೆಮುಡಿಸುವೆ ಸರಸಿಯರಸಿ ||೧|| ಮೆರೆವ ಮುಖೇಂದು ಕ | ಸ್ತೂರಿಯ ತಿಲಕದಿಂದ | ಕರೆಯಾಂತವೊಲೆಸಗುವೆನು | ಸುತನು | ನಸು, ಕರೆಯಾಂತವೊಲೆಸಗುವೆನು ಸುತನು ||೨|| ಬೆಡಗಿನಕಣೆ ಕೈ | ಗಡರದಕೇಶಕೆ | ಜಡೆಯನು ಹಣಿವೆನು | ಲಿಕುಚಸುಕುಚೆ | ನಿಡು, ಜಡೆಯನು ಹಣಿವೆನುಲಿಕುಚಸುಕುಚೆ ||೩||

† || ರಾಗ | ಏಕತಾಳ || (ಗುಲರಂಗಿನಾಟನ್ಕೆ ಎಂಬಂತೆ)

ಇವನಲೆಯೆನ್ನಯಪ್ರಿಯ | ಸುಂದರಕಾಯ ||ಪ|| ಇವನಿಂದಿರನೋ | ನವಚಂದಿರನೋ | ಕುವಾಲನಯನೇ | ಕುಸುಮಾಯುಧನೋ ||ಅನು|| ಆನಳನಿವನು | ನಾನೇಂ ವರ್ಣಿಪೆನು | ನೀನೋಡುಸಖಿಯೆ | ನೀರಜಮುಖಿಯೆ ||೧|| ಆಸಸಿಯಿವ

ಭವಿಸಿದ ಮನ್ಮಥನೋ ನೀ |
ನವಲೋಕಿಸುಹರಿಣನೇತ್ರೆಯಿತನದಾವಂ ||೮||

ನಳ—(ಬಂದು ನೋಡಿ, ಆತ್ಮ) ಇದೇ ದಮಯಂತಿಯ ಅಂತಃಪುರ, ಈ ತರುಣಿಯರು ದಮಯಂತಿಯ ಸಖಿಯರಾಗಿರಬಹುದು. ಇಲ್ಲಿ ನಾನು ಯಾರಿಗೂ ಕಾಣಿಸಿಕೊಳ್ಳದೆ ಕಳ್ಳನಂತೆ ಬಂದಿರುವೆನು. ಇಲ್ಲಿ ಸ್ವಲ್ಪವೂ ಅಳುಕಿಲ್ಲದೆ ಸ್ವೇಚ್ಛೆಯಿಂದ ತಮ್ಮ ತಮ್ಮ ಕೆಲಸಗಳಲ್ಲಿ ನಿರತರಾಗಿರುವ ಸ್ತ್ರೀಯರನ್ನು ನಾವು ನೋಡತಕ್ಕದು ಅಧರ್ಮವಾದರೂ ದೇವತೆಗಳ ಕಾರ್ಯಾರ್ಥವಾಗಿ ಬಂದಿರುವ ನನಗೆ ಇದರಿಂದ ಪಾಪವುಂಟಾಗಲಾರದು. (ಎಂದು ತಿರುಗಾಡುತ್ತಿರಲು)

(ಇಬ್ಬರು ತರುಣಿಯರು ಎರಡು ಕಡೆಯಿಂದ ಬಂದು ನಳನಿಗೆ ಥಕ್ಕಾಬೀಳುವರು)

ನಳ—(ಆತ್ಮ) ಆಹ! ಪ್ರಮಾದ ಪ್ರಮಾದ! (ಎಂದು ಓಸರಿಸುವನು)

೧ ನೇ ತರುಣಿ—(ಹಿಂಜರಿದು) ಇದೇನಾಶ್ಚರ್ಯ! ಪುರುಷನ ಶರೀರ ಸೋಕಿದಂತಾಯಿತು.

೨ ನೇ ತರುಣಿ—ಎಲೆ ಸಖಿ, ನನಗೂ ಹಾಗೇ ಆಯಿತು. ನಮ್ಮಿಬ್ಬರಿಗೂ ಮಧ್ಯದಲ್ಲಿ ಯಾವುದಾದರೂ ಅದೃಶ್ಯವಾದ ಭೂತವೇನಾದರೂ ತಡೆಯಾಯಿತೊ?

೧ ನೇ ತ—ಎಲೆ ಮುಗ್ಧೆ, ಭೂತವೆಂದರೇನು? ನಮ್ಮನ್ನು ತಡೆಯುವುದೆಂದರೇನು? ಇದೇನೊ ನಮ್ಮಿಬ್ಬರಿಗೂ ಬುದ್ಧಿಭ್ರಮೆಯಾದಂತೆ ತೋರುತ್ತಿದೆ. ಇದನ್ನು ಮತ್ತೊಬ್ಬರಿಗೆ ಹೇಳುವದು ಕೂಡ ನಗೆಗೇಡಾಗಿದೆ. ಇನ್ನೊಂದುವೇಳೆ ಹೀಗೇನಾದರೂ ಆದರೆ ಆಮೇಲೆ ಅದನ್ನು ವಿಚಾರಮಾಡೋಣ. ನಡೆ ನಮ್ಮ ನಮ್ಮ ಕೆಲಸಕ್ಕೆ ಹೋಗೋಣ. (ತೆರಳಿದರು)

ದಮ—(ಸಖಿಯರೊಡನೆ ವಿರಹಸಂತಾಪಪಡುತ್ತ)

ನಾ | ಭಾಸುರವದನಕೆ | ದಾಸಾಯಿತನಲೇ | ದಿಟ್ಟೆಸುಕುಶಲೇ ||೨|| ಈತನ ನಯನಕೆ | ಸೋತಂಬುಜಗಳು | ಆತಂಕದಿವನ | ಮಾತ್ರಯಿಸಿದುವು ||೩||

* ಕಂ|| ಎಲೆಸಖಿವಿವರಿಸುವೆನೆಂದಾ |
ಲಲಿತಾಂಗನನೆಂತು ನೃಪೆನೆತನುಜ್ವರಮಂ ||

ಹೇಮ—ಎಲೆ ಕೆಳದಿ, ಸಂತೈಸಿಕೊ ಸಂತೈಸಿಕೊ. ಸುಮ್ಮನೆ ಪತಕ್ಕೆ ಇಷ್ಟು ಸಂತಾಪಪಡುವೆ ?

ನಳ—(ಕೇಳನೋಡಿ, ಆತ್ಮ) ಆಹ! ಈಗಲೀಗ ನನಗೆ ನೇತ್ರೋತ್ಸವವಾಯಿತು. ನಕ್ಷತ್ರಗಳ ಮಧ್ಯದಲ್ಲಿ ರೋಹಿಣಿಯಂತ ಸಖಿಯರ ಮಧ್ಯದಲ್ಲಿ ಪ್ರಕಾಶಿಸುತ್ತಿರುವ ಈಕೆಯೇ ದಮಯಂತಿ. ಈಕೆಯು ಯಾವ ಪುರುಷನನ್ನು ಹಂಬಲಿಸುತ್ತಿರುವಳೋ ಆತನೇ ಧನ್ಯ.

ದಮ— ‡ ಕಂ|| ನಳನಂಕಾಂಬವರಂ ಕೇ |
ಳ್ನಳಿನಾಕ್ಷಿಯೆ ಕಳೆಯದೀ ಮನೋಭವತಾಪಂ ||೯||

ನಳ—(ಆತ್ಮ) ಅಯ್ಯೋ! ನನ್ನ ವಿಷಯವಾಗಿಯೇ ಸಂತಾಪಪಡುತ್ತಿರುವಳೆ? ಈಗ ನಾನು ಕಾಣಿಸಿಕೊಳ್ಳುವುದು ಹೇಗೆ? ಎಲೆ ಮನಸ್ಸೆ ಕಳವಳ ಪಡಬೇಡ. ಸತ್ಯವನ್ನು ಪರಿಪಾಲಿಸು. (ಸ್ವಲ್ಪ ಯೋಚಿಸಿ) ಇರಲಿ, ತಿರಸ್ಕರಿಣಿಯನ್ನು ತೆಗೆದು ಕಾಣಿಸಿಕೊಳ್ಳುವೆನು.

(ಎಂದು ಸ್ವಲ್ಪ ಧ್ಯಾನಿಸಿ ಎದುರಿಗೆ ಬಂದು)

(ವಿನಯದಿಂದ) ರಾಜಕುಮಾರಿಗೆ ಜಯವಾಗಲಿ.

(ಎಲ್ಲರೂ ಸಂಭ್ರಾಂತೆಯರಾಗುವರು)

ದಮ—(ಥಟ್ಟನೆದ್ದು ಲಜ್ಜೆಯಿಂದ ನೋಡಿ, ಆತ್ಮ)
ಕಂ|| ಇಂದ್ರನೊ ಮೇಣೀತಂ ನವ |
ಚಂದ್ರನೊ ಮೇಣ್ದೇಹವಾಂತ ಮನ್ಮಥನೋ ಮೇಣ್ |
ರುಂದ್ರತರ ರೂಪನಾದವ |
ನೀಂದ್ರನೊ ನಿರ್ಣೈಸಲಾರೆನಿವನಾವನೊತಾಂ ||೧೦|

|| ರಾಗ | ಬೇಹಾಗ್ | ಏಕತಾಳ ||
(ಮಹರಾಜೂಗರಮ್ಮನೆ ಎಂಬಂತೆ)

* ಸ್ಮರಸಂತಾಪವನಾನು | ಸಹಿಸಲಾರೆನು ||ಪ|| ತರುಣಿಯೆ ಪೇಳೇವೆನು ||ಅ||
ಸೇರುವೆನೆಂದಾ | ಮಾರನಿಭಾಂಗನ | ಹಾರಿಣಿ ಕೋಕಿಲವಾಣಿ ||೧|
‡ ನಳಿನದಳಾಕ್ಷಿಯೆ | ನಳನನು ಕಾಣದೆ | ಕಳೆಯದು ನನ್ನದುತಾಪ ||೨||

ಹಂಸಪಕ್ಷಿ ಹೇಳಿದ ಗುರುತಿನಿಂದಲೂ ಚಿತ್ರಪಟದಲ್ಲಿ ನಾನು ನೋಡಿದ ಗುರುತಿನಿಂದಲೂ ಈತನೇ ನನ್ನ ಮನೋವಲ್ಲಭನಾಗಿರಬಹುದೆಂದು ನನ್ನ ಮನಸ್ಸಿಗೆ ತೋರುವುದು. ಒಳ್ಳೇದು. ವಿಚಾರದಿಂದ ತಿಳಿಯುವೆನು. ಎಲೆ ಹೇಮಪ್ರಭೆ, ಪೀಠವನ್ನು ಕೊಡು.

ಹೇಮ—(ಪೀಠವನ್ನು ಕೊಟ್ಟು) ಎಲೈ ಮಂಗಳಾಂಗನೆ, ಈ ಪೀಠವನ್ನು ಅಲಂಕರಿಸಬೇಕು.

ನಳ—(ಕುಳ್ಳಿರ್ದು ದಮಯಂತಿಯನ್ನು ಕುರಿತು) ಎಲೆ ಮಂಗಳಾಂಗಿ, ನೀನು ಕುಳ್ಳಿರಬಹುದು.

ದಮ—(ಕುಳ್ಳಿರ್ದು ಸಖಿಯ ಮುಖವನ್ನು ನೋಡುವಳು)

ಚಂದ್ರಪ್ರಭೆ—ಆರ್ಯನೆ, ಈ ಅಂತಃಪುರವನ್ನು ಆಯುಧಪಾಣಿಗಳಾದ ಬಹು ಮಂದಿ ಕಾವಲುಗಾರರು ಬಂದು ನೊಣವೂ ಒಳಕ್ಕೆ ಬಾರದಂತೆ ಕಾದುಕೊಂಡಿರುವರು. ಇಲ್ಲಿಗೆ ನೀನು ಬಂದ ಬಗೆ ಹೇಗೆ? ಇದು ಹಾಗಿರಲಿ. ಸುಕುಮಾರನಾದ ನೀನು ಯಾವ ವಂಶಕ್ಕೆ ಅಲಂಕಾರನಾಗಿರುವೆ? ಯಾವ ದೇಶದ ಜನವು ನಿನ್ನ ವಿಯೋಗದಿಂದ ಹಂಬಲಿಸುತ್ತಿರುವುದು? ಯಾವ ನಮ್ಮ ಪುಣ್ಯಫಲಕ್ಕೋಸ್ಕರ ನೀನು ನಮಗೆ ದರ್ಶನವನ್ನು ಕೊಟ್ಟೆ?

ನಳ—(ದಮಯಂತಿಯ ಕಡೆ ತಿರುಗಿ) ಎಲೆ ಮಂಗಳಾಂಗಿ, ನಾನು ನಳನೆಂಬುವನು. ದೇವತೆಗಳಿಗೆ ದೂತನಾಗಿ ಇಲ್ಲಿಗೆ ಬಂದಿರುವೆನು.

ದಮ—(ಸಖಿಯ ಕಡೆ ತಿರುಗಿ) ಏನು? ದೇವತೆಗಳಿಗೆ ದೂತನಾಗಿ ಬಂದಿರುವುದೆಂದರೇನು?

ನಳ—(ದಮಯಂತಿಯ ಕಡೆ ತಿರುಗಿ) ಕೇಳು. ಇಂದ್ರ, ಅಗ್ನಿ, ಯಮ, ವರುಣ ಎಂಬ ನಾಲ್ಕು ಮಂದಿ ದೇವತೆಗಳು ನಿನ್ನನ್ನು ಸ್ವಯಂವರದಲ್ಲಿ ವರಿಸುವುದಕ್ಕಾಗಿ ಇಲ್ಲಿಗೆ ಬರುತ್ತಿದ್ದರು. ಮಧ್ಯಮಾರ್ಗದಲ್ಲಿ ಅವರು ಇತ್ತಲಾಗಿಯೇ ಬರುತ್ತಿದ್ದ ನನ್ನನ್ನು ಕಂಡು ನನಗಾಜ್ಞಾಪಿಸಿದುದೇನೆಂದರೆ—"ನೀನು ದಮಯಂತಿಯ ಬಳಿಗೆ ಹೋಗಿ ಆಕೆಯು ನಮ್ಮ ನಾಲ್ಕುಮಂದಿಯಲ್ಲಿ ಯಾರನ್ನಾದರೂ ಒಬ್ಬನನ್ನು ವರಿಸುವಂತೆ ಆಕೆಗೆ ತಿಳಿಯಿಸಿ ಬಾ." ಎಂದು ಆಜ್ಞಾಪಿಸಿರುವರು,

ಅವರ ಮಹಿಮೆಯಿಂದಲೇ ನಾನು ಯಾರಿಗೂ ತಿಳಿಯದಂತೆ ಇಲ್ಲಿಗೆ ಬಂದೆ.

ದಮ—ರಾಜೇಂದ್ರನೆ, ದೇವತೆಗಳಿಗೆ ಸಹಸ್ರಶಃ ನಮಸ್ಕಾರ ಮಾಡುತ್ತೇನೆ, ನಾನು ನಿನ್ನ ಒಡವೆಯೇ ಹೊರತು ಬೇರೆ ಯೋಚಿಸಕೂಡದು. ಲೋಕಪಾಲಕರಾದ ದೇವತೆಗಳೆಂದರೇನು? ಅವರು ಮನುಷ್ಯಮಾತ್ರಳಾದ ನನ್ನನ್ನು ಅಪೇಕ್ಷಿಸುವುದೆಂದರೇನು? ಈ ಕಾರ್ಯವನ್ನು ನೀನೊಪ್ಪಿಕೊಂಡು ಬರಬಹುದೆ? ಪೂರ್ವದಲ್ಲಿ ಹಂಸಪಕ್ಷಿಯು ನಿನ್ನ ಗುಣಗಳನ್ನು ನನ್ನ ಕಿವಿಯ ಮೇಲೆ ಹಾಕಿದಾಗಲೇ ನಾನು ನಿನ್ನನ್ನು ಮನಸ್ಸಿನಲ್ಲಿ ವರಿಸಿಬಿಟ್ಟಿದೇನೆ. ದೇವತೆಗಳೇ ಆಗಲಿ ಮತ್ತು ಅವರಿಗಿಂತಲೂ ಹೆಚ್ಚಾದವರೇ ಆಗಲಿ ಒಬ್ಬ ಪುರುಷನನ್ನು ವರಿಸಿರತಕ್ಕವಳನ್ನು ತಾವು ವರಿಸುವುದಕ್ಕೆ ಅಪೇಕ್ಷಿಸಬಹುದೆ? ಧರ್ಮಜ್ಞನಾದ ನೀನೇ ಹೇಳು.

ನಳ—ಎಲೆ ಸುಂದರೀಮಣಿ, ದೇವತೆಗಳನ್ನು ಮೆಚ್ಚಿಸುವುದಕ್ಕಾಗಿ ಅನೇಕ ಮನುಷ್ಯರು ಎಷ್ಟೋ ಘೋರಘೋರವಾದ ತಪಸ್ಸುಗಳನ್ನು ಮಾಡುತ್ತಾರೆ. ಹೀಗಿರುವಲ್ಲಿ ಲೋಕಪಾಲಕರಾದ ದೇವತೆಗಳೇ ಬಂದು ನಿನ್ನನ್ನು ವರಿಸುವುದಕ್ಕೆ ಅಪೇಕ್ಷಿಸಿದರೆ, ಅದನ್ನು ಹೀಗೆ ತಿರಸ್ಕಾರ ಮಾಡುವೆಯಲ್ಲಾ! ಇದೇನು ಬಿಗುಮಾನವೊ? ಅಥವಾ ಬೆಪ್ಪುತನವೊ?

ದಮ—ರಾಜಾಧಿರಾಜನೆ, ನನಗೇನೂ ಬಿಗುಮಾನವೂ ಇಲ್ಲ. ನಾನೇನೂ ಬೆಪ್ಪಳೂ ಅಲ್ಲ. ಸತ್ಯವಾದ ಮಾತನ್ನು ಹೇಳುತ್ತೇನೆ ಕೇಳು. ನಿನ್ನನ್ನು ಸ್ವಯಂವರದಲ್ಲಿ ವರಿಸುವುದಕ್ಕಾಗಿಯೇ ನಾನು ಅನೇಕ ದೇಶದ ರಾಜರನ್ನು ಇಲ್ಲಿಗೆ ಬರಮಾಡುತ್ತಾ ಇದೇನೆ. ನೀನೂ ದಯವಿಟ್ಟು ನನ್ನನ್ನು ಮದುವೆ ಮಾಡಿಕೊಂಡರಂತು ಸರಿ. ಇಲ್ಲದಿದ್ದರೆ ಈ ನನ್ನ ಪ್ರಾಣವನ್ನು ನಿನ್ನ ಪಾದಕ್ಕೇ ಒಪ್ಪಿಸಿಬಿಡುತ್ತೇನೆ. ಈ ವಿಷಯದಲ್ಲಿ ಲೇಶವೂ ಸಂಶಯವಿಲ್ಲ.

ನಳ—ಎಲೆ ಮುಗ್ಧೆ, ದೇವತೆಗಳ ಪಾದಧೂಳಿಗೂ ನಾನು ಸಮಾನನಾದವನಲ್ಲ. ಇಂತಹ ನನ್ನಲ್ಲಿ ವ್ಯಾಮೋಹದಿಂದ ನೀನು ದೇವತೆಗಳನ್ನು

ತಿರಸ್ಕರಿಸುವುದು ಬಹಳ ಅನುಚಿತ, ಬಹಳ ಅನುಚಿತ. ಇದರ ಮೇಲೆ ದೇವತೆಗಳ ಇಷ್ಟಕ್ಕೆ ವಿರೋಧವಾಗಿ ನಡೆದರೆ ಮನುಷ್ಯ ಮಾತ್ರನಾದ ನಾನು ಕೂಡ ಬದುಕುವುದುಂಟೆ? ಆದಕಾರಣ ನೀನು ಆ ನಾಲ್ಕು ಮಂದಿ ದೇವತೆಗಳಲ್ಲಿ ಯಾರನ್ನಾದರೂ ಒಬ್ಬನನ್ನು ವರಿಸಿ ನನ್ನನ್ನು ಸಂರಕ್ಷಿಸುವಳಾಗು.

ದಮ—ಆ ದೇವತೆಗಳ ಎದುರಿಗೇ ನಾನು ಅವರ ಅಪ್ಪಣೆಯನ್ನು ತೆಗೆದುಕೊಂಡೇ ನಿನ್ನನ್ನು ವರಿಸುತ್ತೇನೆ. ಇದರಿಂದ ನಿನಗೇನೂ ದೋಷವುಂಟಾಗಲಾರದು. ಈ ವಿಷಯದಲ್ಲಿ ನೀನು ಮತ್ತೇನೂ ಶಂಕಿಸತಕ್ಕ ಕಲಸವಿಲ್ಲ.

ನಳ—ಇನ್ನು ನಾನು ಹೇಳತಕ್ಕುದೇನಿದೆ? ನಿನ್ನ ಇಷ್ಟವಿದ್ದಂತಾಗಲಿ. ನನಗೆ ಅಪ್ಪಣೆಯನ್ನು ಕೊಡು. ನಾನು ಹೋಗಿ ಬರುವೆನು.

ದಮ—* ಕಂ|| ನಿನ್ನನಗಲ್ದಾನೆಲೆ ಮನ |
ದನ್ನಾ ಸೈರಿಸುವೆನೆಂತು ಮನದದವಳಲಂ ||
ಸನ್ನುತಗುಣ ಕೇಳ್ನೆಯ್ದಿಲ್ |
ಜೊನ್ನೊಡಲನ ತೋರ್ಕೆಯಿಲ್ಲದೇಂ ಸೈರಿಪುದೇ ||೧೧||

ನಳ—ಎಲೆ ರಾಜಕುಮಾರಿ, ನಿನ್ನ ಮಾತಿಗೆ ನಾನು ಯಾವ ಪ್ರತ್ಯುತ್ತರವನ್ನೂ ಹೇಳಲಾರೆ. ಇನ್ನು ಇಲ್ಲಿಗೆ ಬಂದಂತೆ ತಿರಸ್ಕರಿಣೀಪ್ರಭಾವದಿಂದ ಅದೃಶ್ಯನಾಗಿ ತೆರಳುವೆನು. (ಸ್ವಲ್ಪ ಧ್ಯಾನಿಸಿ ೩-೩ ಹೆಜ್ಜೆ ನಡೆದು) (ಆತ್ಮ) ನಾನು ದೇವತೆಗಳಿಗೆ ಮಾತು ಕೊಟ್ಟಂತೆ ಅವರ ಕಾರ್ಯವನ್ನು ನೆರವೇರಿಸದೆ ಸ್ವಪ್ರಯೋಜನವನ್ನು ನಾಚಿಕೆಯಿಲ್ಲದೆ

---

* || ರಾಗ | ಜಂಝೋಟಿ | ಏಕತಾಳ ||
(ವಿರಸಮುಶಾ ಎಂಬಂತೆ)

ಅಗಲಿರಲಾರೆನು ನಾ | ನಂಬುಜಾಕ್ಷನಿನ್ನ ||ಪ|| ಮೇದಿನೀಪತಿಯೆ ನಾ | ನೀದುಗುಡವಸೈಸೆ || ಸೈದಿಲೆ ಚಂದಿರನನ್ನು | ನೋಡದೇ | ಸೈಪುದೇ | ಬಾಡದೇ | ತಾನಿರ್ಪುದೇ | ನಾ ||೧|| ನೀನುಪೇಕ್ಷಿಸಲೆನ್ನ | ದೇನಪರಾಧನಿನ್ನ | ಧೀನಗೈದಿಹೆನೆನ್ನೀ | ತನುವನೂ | ಮನವನೂ | ಅಸುವನೂ | ಸರ್ವಸ್ವವನ್ನೂ ||೨||

ಅವರಿಗೆ ಹೇಗೆ ತಿಳಿಯಿಸಲಿ! ಆದರೆ ನಡೆದ ಸಂಗತಿಯನ್ನು ಯಥಾ ರ್ಥವಾಗಿ ತಿಳಿಸುವುದು ದೂತನ ಧರ್ಮ. (ಎಂದು ತೆರಳಿದನು) (ದಮಯಂತಿ ಚಿಂತೆಯನ್ನು ನಟಿಸುತ್ತಿರುವಳು)

ವಿದರ್ಭನಗರದ ಬೀದಿ.

ಚರ—(ದುಡುದುಡನೆ ಬಂದು ಎದುರಿಗೆ ಮಂತ್ರಿಯನ್ನು ನೋಡಿ) ಇದೊ, ನಮ್ಮ ಭೀಮಭೂಪತಿಯ ಮಂತ್ರಿಯಾದ ಬುದ್ಧಿಸಾಗರನು ಇತ್ತ ಲಾಗಿಯೇ ಬರುತ್ತಿರುವನು. (ಕೈ ಮುಗಿದು) ಮಂತ್ರಿಶ್ರೇಷ್ಠನೆ, ಮಹಾರಾಜನಪ್ಪಣೆಯಾಗುವುದು.

ಬುದ್ಧಿಸಾಗರ—ಈಗ ಮಹಾರಾಜನೆಲ್ಲಿರುವನು?

ಚರ—ಆಸ್ಥಾನದಲ್ಲಿರುವನು.

ಬು—ಇದೊ, ನಾನೂ ಅಲ್ಲಿಗೇ ಹೊರಟದ್ದೆನು. (ತೆರಳಿದರು)

ಆಸ್ಥಾನ.

ಭೀಮಮಹಾರಾಜ—(ಪ್ರವೇಶಿಸಿ) ನಮ್ಮ ಕುಮಾರಿಯಾದ ದಮಯಂತಿಯನ್ನು ವರಿಸತಕ್ಕ ವಿಷಯದಲ್ಲಿ ಅನೇಕ ದೇಶದ ರಾಜರು ನಾನು ತಾನೆಂದು ಮೇಲಾಡುತ್ತಿರುವರು. ಅದಕ್ಕಾಗಿ ಸ್ವಯಂವರ ಪ್ರಯತ್ನವನ್ನು ಮಾಡಿದೆನು. ಆದರೂ ನನ್ನ ಮಗಳಿಗೆ ತಕ್ಕ ವರನು ದೊರೆಯುತ್ತಾನೆಯೊ ಇಲ್ಲವೊ ಎಂದು ನನ್ನ ಮನಸ್ಸು ಸಂದೇಹ ಪಡುತ್ತಿರುವುದು.

ಬು—(ಬಂದು) ಮಹಾರಾಜನಿಗೆ ಜಯವಾಗಲಿ. ಮಹಾರಾಜನೆ, ಪಟ್ಟಣವನ್ನೆಲ್ಲಾ ಅಲಂಕಾರ ಮಾಡಿಸಿದುದಾಯಿತು. ದೇಶ ದೇಶಾಂತರಗಳಿಂದ ರಾಜರೂ ರಾಜಕುಮಾರರೂ ಸಹ ಬಂದು ಬಂದು ಅವರವರಿಗೆ ಗೊತ್ತುಮಾಡಿರುವ ಬಿಡಾರಗಳಲ್ಲಿ ಇಳಿದುಕೊಳ್ಳುತ್ತಿರುವರು. ನಾಳೇ ಪ್ರಾತಃಕಾಲವೇ ಸ್ವಯಂವರ ಮಹೋತ್ಸವವು ಬೆಳೆಯತಕ್ಕದಾಗಿದೆ.

ಭೀ—ಬುದ್ಧಿಸಾಗರನೆ, ನೀನು ಮೊದಲಾದ ನಮ್ಮ ಮಂತ್ರಿಗಳು ಆಯಾಯ ದೇಶದ ರಾಜರನ್ನೂ ರಾಜಕುಮಾರರನ್ನೂ ಅವರವರಿಗೆ ತಕ್ಕ ಮಾನ

ಮರ್ಯಾದೆಗಳಿಂದಲೂ, ವೈಭವದಿಂದಲೂ ನಾಳೆ ಪ್ರಾತಃಕಾಲ ಸ್ವಯಂವರ ಮಂಟಪಕ್ಕೆ ಕರೆದುಕೊಂಡು ಬರತಕ್ಕದು. ಸ್ವಯಂವರ ಮಂಟಪಕ್ಕೆ ಬಂದವರಿಗೆ ತಕ್ಕ ಮಾನಮರ್ಯಾದೆಗಳನ್ನು ಮಾಡತಕ್ಕ ಕೆಲಸದಲ್ಲಿ ನಾನು ಜಾಗರೂಕನಾಗಿರುವೆನು.

ಋ—ಮಹಾರಾಜನಪ್ಪಣೆಯಾದಂತಾಗಲಿ.

ತೆರೆಯಲ್ಲಿ ಸ್ತುತಿಪಾಠಕರು—

* ಕಂ|| ವರುಣದಿಶಾಮುಖಭಾಗದೆ |
ಸರಸೀರುಹಮಿತ್ರನರುಣಕಿರಣಪ್ರಕರಂ |
ಪರಿಫುಲ್ಲಜಪಾಸುಮಭಾ |
ಝುರಿಯಂತೆಸೆದಪುದು ವಿಜಯಿಸೈರಾಜೇಂದ್ರಾ ||೧೨|

ಭೀ—(ಕೇಳಿ) ಓಹೊ! ಸಂಧ್ಯಾಕಾಲವಾಯಿತು. ಇನ್ನು ಸಂಧ್ಯಾಕರ್ಮವನ್ನು ನೆರವೇರಿಸಲು ಹೊರಡುವೆನು.

(ಎಲ್ಲರೂ ತೆರಳಿದರು)

ಭೃತ್ಯ—ಮಹಾರಾಜನೆ, ಈಕಡೆ ದಯಮಾಡಿಸಬೇಕು.

ಬಯಲು.

(ದೇವತೆಗಳು ಆಕಾಶಯಾನದಿಂದ ಇಳಿದು ಬರುವರು)

ಇಂದ್ರ— ಕಂ|| ಆಮೇನಕೆಮೊದಲಹ ಸುರ |
ಭಾಮೆಯರಂ ತನ್ನರೂಪಿನಿಂ ಧಿಕ್ಕರಿಪಾ |
ಭೀಮಧರಾಪತಿ ಸುತೆಯಂ |
ಕಾಮಿಸಿ ಕೈವಿಡಿಯದಿರ್ದೊಡೆಮಗವಮಾನಂ ||೧೩||

---

* || ರಾಗ | ಹರಿಕಾಂಭೋಜಿ | ಏಕತಾಳ ||

ವಿಜಯಿಸೈಧರಾಧಿಪತೀ | ವಿಜಿತಾರಿಶತಾಕಲಿತಾವನತೀ ||ಪ|| ಸರಸೀರುಹಸಖ | ನರುಣತರದ್ಯುತಿ | ವರುಣನದೆಸೆಯೊಳ್ | ಪರಿಫುಲ್ಲಜಪಾಸುಮಭಾಝುರಿಯಂ | ನೆರೆಪರಪುತ್ಥಲಿ | ಮೆರೆಮೆರೆಯುತ್ತಿದೆ | ತರುಣಿಯುಸೇರ್ವನು | ಪರದಿಗಬಲೆಯನು || ವಿಜಿತಾರಿಶತಾಕಲಿತಾವನತೀ ||೧||

ಅಗ್ನಿ—ಎಲೈ ಮಹೇಂದ್ರನೆ, ನಳನನ್ನು ಹೊರತು ಮತ್ತೆ ಯಾರನ್ನೂ ವರಿಸುವುದಿಲ್ಲವೆಂಬ ದಮಯಂತಿಯ ಸಂಕಲ್ಪವು ಪರ್ವತದಂತೆ ಚಲಿಸದೇ ಇರಬಹುದು. ಈಗ ನಾವೇನುಮಾಡಬೇಕು ?

ಇಂ—ಅಗ್ನಿಯೆ ಕೇಳು, ಇದಕ್ಕೆ ನನಗೊಂದು ಉಪಾಯವು ತೋರುವುದು. ಏನೆಂದರೆ—ಆ ಸ್ವಯಂವರ ಮಂಟಪಕ್ಕೆ ನಳನಂತು ಬರುವನಷ್ಟೆ? ನಾವು ನಾಲ್ಕು ಮಂದಿಯೂ ಆ ನಳನ ರೂಪವನ್ನೇ ತಾಳಿಕೊಂಡು ಅಲ್ಲಿಗೆ ಹೋಗೋಣ. ಆಗ ದಮಯಂತಿಯ ಸಂಕಲ್ಪವೇನಾಗುವುದೊ ನೋಡೋಣ.

ಅಗ್ನಿ—ಆಹ ! ಈ ಉಪಾಯವು ಬಹು ಚಮತ್ಕಾರವಾಗಿದೆ-ಇದು ನನಗೊಪ್ಪಿತು. ಹಾಗೆ ಮಾಡಿ ನೋಡೋಣ. ನಡೆಯಿರಿ ನಡೆಯಿರಿ ನಡೆಯಿರಿ.

(ಎಲ್ಲರೂ ತೆರಳಿದರು)

ರಾಣಿವಾಸದ ಚಾವಡಿ.

(ಹೇಮಪ್ರಭೆ ಚಂದ್ರಪ್ರಭೆಯರ ಪ್ರವೇಶ)

ಚಂದ್ರ—ಎಲೆ ಹೇಮಪ್ರಭೆ, ಈ ಸ್ವಯಂವರ ಕಾಲದಲ್ಲಿ ದೇವೇಂದ್ರನು ನಮ್ಮ ಮಹಾರಾಜನಿಗೆ ಮಂಡಲೇಶ್ವರರಿಗೆ ಯೋಗ್ಯವಾದ ಬಹುಮಾನವನ್ನು ಕಳುಹಿಸಿಕೊಡುವುದಕ್ಕೆ ಕಾರಣವೇನು ?

ಹೇಮ—ಬೇರೆ ಕಾರಣ ಯಾವುದು ? ಆತನೂ ಈ ಸ್ವಯಂವರಕ್ಕೆ ಬರಬಹುದು. ಆಗ ದಮಯಂತಿ ತನ್ನನ್ನೇ ವರಿಸಬೇಕೆಂದು ಕಳುಹಿಸಿಕೊಟ್ಟಿರಬಹುದು.

ಚಂದ್ರ—ಒಂದುವೇಳೆ ಅವನು ಬಂದರೆ ತ್ರಿಲೋಕೇಶ್ವರನಾದ ಅವನನ್ನು ಬಿಟ್ಟು ನಮ್ಮ ಸಖಿಯು ಮತ್ತೊಬ್ಬನನ್ನು ವರಿಸುವುದು ಹೇಗೆ ?

ಹೇಮ—ಎಲೆ ಚಂದ್ರಪ್ರಭೆ, ಲೋಕದಲ್ಲಿ ವರನು ವಿದ್ಯಾಹೀನನಾಗಿದ್ದರೂ, ಮುದುಕನಾಗಿದ್ದರೂ ಐಶ್ವರ್ಯವಂತನೆಂಬ ಗೌರವದಿಂದ ಅಂತಹ ವರನಿಗೆ ತಮ್ಮ ತಮ್ಮ ಹೆಣ್ಣು ಮಕ್ಕಳುಗಳನ್ನು ಕೊಟ್ಟು ಮದುವೆ ಮಾಡತಕ್ಕ ಮೂಢರು ಉತ್ತರೋತ್ತರ ಅನೇಕ ಪ್ರಕಾರವಾದ ದುಃಖಗಳಿಗೆ ಗುರಿಯಾಗುತ್ತಾರೆ. ಇದು ಹಾಗಲ್ಲವಲ್ಲಾ ಸ್ವಯಂವರ

ವಷ್ಟೆ! ಆದುದರಿಂದ ನಮ್ಮ ಸಖಿಯು ತನ್ನ ಮನೋವಲ್ಲಭನು ಯಾರೊ ಅವನನ್ನೇ ವರಿಸಬಹುದು.

ತೆರೆಯಲ್ಲಿ—(ಮಂಗಳವಾದ್ಯ ಧ್ವನಿಯಾಗುವುದು)

ಹೇಮ—(ಕೇಳಿ) ಇದೇನು, ಮಂಗಳಧ್ವನಿ! ದಮಯಂತಿಗೆ ಸ್ವಯಂವರ ಬೆಳೆದಪಾಗಿದೆ.

ತರಂಗಿಣಿ—(ಬೇಗ ಬಂದು) ಸಖಿಯರೆ, ಇನ್ನು ಮಂಗಳದ್ರವ್ಯಗಳನ್ನು ತೆಗೆದುಕೊಂಡು ಹೊರಡಿ ಹೊರಡಿ.

ಹೇಮ--ಯಾರನ್ನು ವರಿಸಿದಳು?

ತರಂ—ತನ್ನ ಮನೋವಲ್ಲಭನನ್ನೇ ವರಿಸಿದಳು.

ಹೇಮ—ಅದು ಹೇಗೆ? ನಡೆದ ಸಂಗತಿಗಳನ್ನೆಲ್ಲಾ ವಿಸ್ತಾರವಾಗಿ ಹೇಳು.

ತರಂ—ಕೇಳು, ಸ್ವಯಂವರ ಮಂಟಪದಲ್ಲಿ ನೆರೆದಿದ್ದ ಅನೇಕ ರಾಜರ ಮಧ್ಯದಲ್ಲಿ ನಳಮಹಾರಾಜನೂ ಬಂದು ಕೂತುಕೊಂಡಿದ್ದನು. ಅವನಂತೆಯೇ ರೂಪವನ್ನು ತಾಳಿಕೊಂಡು ನಾಲ್ಕು ಮಂದಿ ದೇವತೆಗಳೂ ಬಂದು ಕೂತುಕೊಂಡಿದ್ದರು.

ಚಂದ್ರ—ಅವರು ಯಾರು?

ತರಂ—ಯಾರೇನು? ಇಂದ್ರ, ಅಗ್ನಿ, ಯಮ, ವರುಣ.

ಚಂದ್ರ—ಆಶ್ಚರ್ಯ! ಆಶ್ಚರ್ಯ! ನಮ್ಮ ಸಖಿಯು ಅವರನ್ನು ಬಿಟ್ಟು ನಳನನ್ನು ವರಿಸಿದ ಬಗೆ ಹೇಗೆ?

ತರಂ—ಭೂಸ್ಪರ್ಶವೂ, ಬೆವರು ಮೊದಲಾದ ಚಿಹ್ನೆಗಳೂ ಇಲ್ಲದೆ ಇರುವ ಅವರನ್ನು ದೇವತೆಗಳೆಂದು ತಿಳಿದು ನಮಸ್ಕಾರ ಮಾಡಿ ಅವರನ್ನು ಪ್ರಾರ್ಥನೆ ಮಾಡಿದಳು.

ಹೇಮ—ಆ ಕಾಲದಲ್ಲಿ ಇಷ್ಟುಮಟ್ಟಿಗೆ ತಿಳಿಯುವುದು ಬಹು ಕಷ್ಟ. ಅವಳ ಜಾಣತನವು ಬಹಳ ಶ್ಲಾಘ್ಯವಾದುದು. ಆಮೇಲೆ?

ತರಂ—ಆಮೇಲ ಆ ದೇವತೆಗಳು ದಮಯಂತಿಯ ಭಕ್ತಿಗೆ ಮೆಚ್ಚಿ ತಮ್ಮ ನಿಜವಾದ ರೂಪವನ್ನು ತಾಳಿ ಅನುಜ್ಞೆಯನ್ನು ಕೊಟ್ಟರು. ಆಮೇಲೆ ದಮಯಂತಿಯು ನಳಮಹಾರಾಜನ ಕತ್ತಿಗೆ ಸ್ವಯಂವರ ಮಾಲಿಕ

ಯನ್ನು ಹಾಕಿದಳು. ಈ ಲಗ್ನದಲ್ಲೇ ಅವರಿಬ್ಬರಿಗೂ ಪಾಣಿಗ್ರಹಣ ಮಹೋತ್ಸವವು ಜೆಳೆಯುವುದು. ಎಲ್ಲರೂ ಮಂಗಳದ್ರವ್ಯಗಳನ್ನು ತೆಗೆದುಕೊಂಡು ಹೋಗೋಣ ಬನ್ನಿ ಬನ್ನಿ.

(ಎಲ್ಲರೂ ತೆರಳಿದರು)

ವಿವಾಹ ಮಂಟಪ.

ಎಲ್ಲರೂ—(ಸಂತೋಷದಿಂದ ನಳ ದಮಯಂತಿಯರನ್ನು ಪೀಠದಲ್ಲಿ ಕುಳ್ಳಿರಿಸಿ)

* ಕಂ|| ಪರಮೇಶಕೃಪಾಬಲದಿಂ |
ನಿರುಪಾಧಿಕವಿಭವದಿಂದೆ ಪಿರಿದುಂ ಸೊಗದಿಂ |
ನಿರುಪಮರೀದಂಪತಿಗಳ್ |
ಚಿರಕಾಲಂ ಬಾಳುತಿರ್ಕೆ ಧರಣೀತಲದೊಳ್ ||೧೪||
ಕಮಲಾ ಕಮಲಾಕ್ಷರವೋಲ್ |
ಹಿಮವತ್ತನುಜೇಶರಂತೆವೋಲ್ಪೌಲೋಮಿ |
ರಮಣೇಂದ್ರರವೋಲಿಂತೀ |
ದಮಯಂತೀನಳನೃಪಾಲರಿರ್ಕತಿಮುದದಿಂ ||೧೫||
ಪಡಿಯಿಲ್ಲದ ನಂದನರಂ |
ಪಡೆದಾತ್ಮೋಪಮಗುಣಂಗಳಿಂದೊಪ್ಪುವರಂ |
ಪೊಡವಿಯೊಳೀದಂಪತಿಗಳ್ |
ಕಡುಸಂತಸವಾಂತುಬಾಳ್ಗೆ ಶಾಶ್ವತಕಾಲಂ ||೧೬||

(ಎಂದು ಹರಸಿ ಹೂವೆರಚುವರು)

---

*|| ಮಿಶ್ರರಾಗ | ಏಕತಾಳ | ಸೋಟು ||

ಸ್ಥಿರವಾಗಿರಲೀ ಧರಣೀತಲದೊಳ್ | ನಿರುಪಮರೀದಂಪತಿಗಳ್ ||ಪ|| ಪರಮೇಶಕೃಪಾಬಲದಿಂ | ನಿರುಪಾಧಿಕವೈಭವದಿಂ | ಪಿರಿದಾಗಿಹ ಸಂತಸದಿಂ | ಶೋಭಿಸುತ್ತಂ ||೧|| ಪಡೆದಿಂತು ಗುಣಾನ್ವಿತರಂ | ಕಡುಚೆಲ್ವನುತಾಳ್ದಿಹರಂ | ಪಡಿಯಿಲ್ಲದನಂದನರಂ | ಶೋಭಿಸುತ್ತಂ ||೨|| ಕಮಲಾಕಮಲಾಕ್ಷರವೋಲ್ | ಹಿಮವತ್ತನುಜೇಶರವೊಲ್ | ಸುಮನೋಜ್ಞಶಚೀಂದ್ರರವೋಲ್ | ಶೋಭಿಸುತ್ತಂ ||೩||

ನಳ—ಎಲೆ ಪ್ರಿಯೆ, ನೀನು ದೇವತೆಗಳನ್ನು ಕೂಡ ಬಿಟ್ಟು ಮನುಷ್ಯಮಾತ್ರನಾದ ನನ್ನನ್ನು ವರಿಸಿದುದಕ್ಕಾಗಿ ನಾನು ಯಾವಜ್ಜೀವವೂ ನಿನ್ನ ಇಷ್ಟಾನುಸಾರವಾಗಿ ನಡೆದುಕೊಂಡಿರುವೆನು. ಇದು ನಿಜ.

ದಮ—ಆರ್ಯಪುತ್ರನೆ, ನಾನೂ ನಿನ್ನ ಛಾಯೆಯನ್ನೇ ಅನುವರ್ತಿಸಿಕೊಂಡು ನಡೆಯುತಕ್ಕವಳು. ಇದು ನಿಜ.

ಇಂದ್ರ—ಎಲೈ ನಳಮಹಾರಾಜನೆ, ಈ ವಿವಾಹವನ್ನು ನೋಡಿ ನಮಗೆ ಬಹಳ ಸಂತೋಷವಾಯಿತು. ಇದೊ ನಾನು ಕೊಡತಕ್ಕ ವರವನ್ನು ಸ್ವೀಕರಿಸು. ನೀನು ಮಾಡತಕ್ಕ ಯಾಗಗಳಲ್ಲಿ ದೇವತೆಗಳು ಪ್ರತ್ಯಕ್ಷವಾಗಿ ಬಂದು ಹವಿಸ್ಸನ್ನು ಸ್ವೀಕರಿಸಲಿ.

ನಳ—ಮಹೇಂದ್ರನೆ, ಪರಮಾನುಗ್ರಹ.

ಅಗ್ನಿ—ಮಹಾರಾಜನೆ, ನೀನು ಅಪೇಕ್ಷಿಸಿದ ಸ್ಥಳದಲ್ಲಿ ಅಗ್ನಿಯುಂಟಾಗಲಿ. ಇದು ನನ್ನ ವರವು.

ನಳ—ಅಗ್ನಿಯೇ, ಪರಮಾನುಗ್ರಹ.

ಯಮ—ರಾಜೇಂದ್ರನೆ, ಅಡಿಗೆ ಮಾಡತಕ್ಕ ಪದಾರ್ಥಗಳಲ್ಲಿ ನೀನು ಅಪೇಕ್ಷಿಸಿದಂತೆ ರುಚಿಯುಂಟಾಗಲಿ. ಇದು ನನ್ನ ವರವು.

ನಳ—ಎಲೈ ಯಮಧರ್ಮನೆ, ಪರಮಾನುಗ್ರಹ.

ವರುಣ—ಭೂಪತಿಯೆ, ನೀನು ಅಪೇಕ್ಷಿಸಿದ ಸ್ಥಳದಲ್ಲಿ ನೀರು ಬರಲಿ. ಮತ್ತು ನೀನು ಧರಿಸುವ ಹೂವಿನ ಮಾಲಿಕೆಯು ಬಾಡದೆ ಇರಲಿ.

ನಳ—ವರುಣನೆ, ಪರಮಾನುಗ್ರಹ.

(ಎಂದು ಎಲ್ಲರೂ ಮತ್ತೆ ಹರಸಿ ಹೂವೆರಚಿ ತೆರಳುವರು)

ಎರಡನೆಯ ಅಂಕವು ಮುಗಿದುದು.

ತೃತೀಯಾಂಕಂ

ನಗರಮಾರ್ಗ.

(ಕಲಿಪುರುಷನು ದ್ವಾಪರನೊಡನೆ ಪ್ರವೇಶಿಸಿ)

* ಕಂ|| ಕೆಳೆಯನೆ ಕೇಳೈ ದ್ವಾಪರ |
ಲಲನಾಮಣಿಭೈಮಿಯಂ ಸ್ವಯಂವರದೊಳ್ಮಂ |
ಚುಳರೂಪವನಾಂತು ಮರು |
ಳ್ಗೊಳಿಸಿ ಕರಂಬಿಡಿವೆನೊಲ್ದುನಾಂ ಕಲಿಯಲ್ತೇ ||೧||

ಇಂದ್ರಾದಿ ದೇವತೆಗಳು—(ಸ್ವರ್ಗಕ್ಕೆ ಹೊರಡಲು ಬರುತ್ತ ಕಲಿಯನ್ನು ಕಂಡು)

ಇಂ—ಎಲೈ ಕಲಿಯೆ, ಇದೇನು ದ್ವಾಪರನೊಡನೆ ಎತ್ತಲಾಗಿ ಹೊರಟೆ?

ಕಲಿ—ಮಹೇಂದ್ರನೆ, ದಮಯಂತಿಯ ಸೌಂದರ್ಯಾತಿಶಯದಿಂದ ಮೋಹಿತನಾಗಿ ನಾನೂ ದಮಯಂತೀಸ್ವಯಂವರಕ್ಕೆ ಹೋಗುತ್ತಿದ್ದೇನೆ.

ಇಂ ಕಲಿಯೆ, ನಾವೂ ಅಲ್ಲಿಗೆ ಹೋಗಿದ್ದೆವು. ದಮಯಂತೀ ಸ್ವಯಂವರವು ಬೆಳೆಯಿತು.

ಕಲಿ—(ಆತ್ಮ) ಅಯ್ಯೋ! ನನ್ನ ಕುತೂಹಲವೆಲ್ಲಾ ಹುಯ್ಯುತ್ತಿದ್ದ ಮಳೆ ಥಟ್ಟನೆ ನಿಂತುಹೋದ ಹಾಗಾಯಿತಲ್ಲಾ! ಇನ್ನು ಮಾಡುವುದೇನು? (ಪ್ರ) ಯಾರನ್ನು ವರಿಸಿದಳು?

---

* || ರಾಗ | ಮಾಂಡು | ತಾಳ ತ್ರಿಶ್ರಛಾಪು ||

(ಚಲಗರಿರಲೇ ಎಂಬಂತೆ)

ಕಲಿಪುರುಷನಲಾ ನಾನು | ಭಲಾ ನೀನುಮಿತ್ರಾ ಕೇಳ್ ||ಪ|| ಆ ದಮಯಂತಿಯ ನಾನು | ಆಹಾಹಾ | ಮೋದದಿ ವರಿಸುವೇ | ನೀಗ | ಬೇಗ | ಪೋಗುವೆನಾಹಾಹಾ ||೧|| ಸುಂದರರೂಪವ ತಾಳಿ | ಆಹಾಹಾ | ಚಂದದಿ ವರಿಸುವೇ | ನೀಗ | ನಾಗ | ವೇಣಿಯನಾಹಾಹಾ ||೨||

ಇಂ—ನಳಮಹಾರಾಜನನ್ನು ವರಿಸಿದಳು. ಆತನೂ ದಮಯಂತಿಯನ್ನು ಕರೆದುಕೊಂಡು ಈಗತಾನೆ ನಿಷಧದೇಶಕ್ಕೆ ಪ್ರಯಾಣ ಮಾಡಿದನು. ನಾವೂ ಇತ್ತಲಾಗಿ ಬಂದೆವು.

ಕಲಿ—(ಆತ್ಮ) ಅವಳು ವರಿಸಿದುದರಲ್ಲೂ ನನ್ನ ಶತ್ರುವನ್ನೇ ವರಿಸಬೇಕೆ? (ಪ್ರ) ನಿಮ್ಮನ್ನು ಬಿಟ್ಟು ಮನುಷ್ಯಮಾತ್ರನನ್ನು ವರಿಸಿದ ಅವಳು ಸ್ವಲ್ಪವೂ ತಾರತಮ್ಯವನ್ನು ತಿಳಿದವಳಲ್ಲ. ಈ ಅಪರಾಧಕ್ಕೆ ಆ ಮೂಢಳನ್ನು ಶಿಕ್ಷಿಸಬೇಕು.

ಇಂ—ಕಲಿಯೆ ಏತಕ್ಕೆ ಹೀಗೆ ಹೇಳುವೆ?

ಕಂ|| ಧರಣಿಯೊಳಾವನನಾಮ |
ಸ್ಮರಣಂಪಾತಕವನೊರಸಿ ಶುಭವಿಾವುದೊ ಸ |
ಚ್ಚರಿತನೆನಿಪ್ಪಾ ನಳಭೂ |
ವರಮಣಿಯನದಾವಳೊಲ್ದು ವರಿಯಿಸದಿರ್ಪಳ್ ||೨||

ಅಗ್ನಿಯೆ, ಇನ್ನು ನಾವೆಲ್ಲರೂ ಸ್ವರ್ಗಲೋಕಕ್ಕೆ ಹೊರಡೋಣ.

(ಎಂದು ಆಕಾಶಯಾನದಿಂದ ತೆರಳಿದರು)

ಕಲಿ—(ಕೋಪದಿಂದ) ದ್ವಾಪರನೆ ನನ್ನ ಕೈಗೇ ಸಿಕ್ಕದೆ ಇರುವ ನಳನ ಮೇಲೆ ನನಗೆ ಬಹಳ ಆಗ್ರಹವಿರುವುದು. ಅವನಿಗೆ ಪಗಡೆಯಾಟದಲ್ಲಿ ಬಹಳ ಆಸೆಯುಂಟು. ಅವನಲ್ಲಿ ನಾನು ಪ್ರವೇಶಿಸಿ, ಅವನನ್ನು ರಾಜ್ಯಭ್ರಷ್ಟನನ್ನಾಗಿ ಮಾಡಿ ಪಾಪಿಗಳಾದ ಅವರಿಬ್ಬರ ಸೌಖ್ಯಕ್ಕೂ ಕುಂದುಂಟುಮಾಡುತ್ತೇನೆ. ನೀನು ಪಗಡೆ ದಾಳವನ್ನು ಪ್ರವೇಶ ಮಾಡಿ ನನಗೆ ಸಹಾಯ ಮಾಡಬೇಕು.

ದ್ವಾ—ಹಾಗೇ ಆಗಲಿ.

ಕಲಿ—(ಕೋಪದಿಂದ) ಇರಲಿ-ಇರಲಿ!

(ಇಬ್ಬರೂ ತೆರಳಿದರು)

ನಿಷಧದೇಶದಲ್ಲಿ ದಮಯಂತಿಯ ಅಂತಃಪುರ.

ದಮ—(ವಾಸಕಸಜ್ಜಿಕಾಲಕ್ಷಣದಿಂದ ಸಖಿಯರೊಡನೆ ಪ್ರವೇಶಿಸಿ)

* ಕಂ|| ಎನ್ನಮನದನ್ನನಿಂದೇ |
ಕಿನ್ನುಂಶಯನಕ್ಕೆ ಬಾರದಿರ್ಪಂ ಸಭೆಯೊಳ್ |
ತನ್ನಸಖರೊಡನೆ ಬಿನದಿಸು |
ತೆನ್ನಂ ಮರೆದಿರ್ಪನಕ್ಕುಮೋ ಸಖಿಯೇವೆಂ ||೧||

ಕಂ|| ಎಲರಿಂ ಬಾಗಿಲ ತೋರಣ |
ದೆಲೆ ಮಿಡುಕಲುಮಾರ್ಯಪುತ್ರನೆಯ್ತಂದಪನೆಂ |
ದೆಲೆಸಖಿ ಬೆಸೆಗೊಂಡಾ ಬಾ |
ಗಿಲಬಳಿಯನೆ ನೋಡಿನೋಡಿ ಬೇಸರ್ಗೊಂಡೆಂ ||೪||

ಕಂ|| ಇಂದಾಂವಾಸಕಸಜ್ಜಿಕೆ |
ಯಂದದೊಳೌತ್ಸುಕ್ಯವಾಂತುಬಳಲುತ್ತಿರ್ಗಳ್ |
ಕಂದರ್ಪನುರುಶರಾಹತಿ |
ಯಿಂದಂನೆರೆನೊಂದೆನಕಟಸಖಿಯೇಗೆಯ್ವೆಂ ||೫||

ಚತುರಿಕೆ—ಸಖಿ, ದಮಯಂತಿ "ರಾಜಾನೋ ಬಹುವಲ್ಲಭಾಃ" ಎಂಬ ವಚನವನ್ನು ನೀನು ಕೇಳಿಲ್ಲವೋ?

ಧಮ—ಆ ವಚನವು ನನ್ನ ಪತಿಯ ವಿಷಯದಲ್ಲಲ್ಲ. ಕೇಳು,

ಕಂ|| ಕನಸಿನೊಳಾದೊಡಮೆನ್ನಯ |
ಮನದನ್ನಂ ನೆನೆವನಲ್ಲಪರಕಾಮಿನಿಯಂ |
ಎನಿತೆನಗೊಲ್ದಿರ್ಪನೊ ತಾ |
ನನಿತೊಲ್ದಿಲ್ಲವನಖಂಡಸಾಮ್ರಾಜ್ಯದೊಳಂ ||೬||

---

* || ರಾಗ | ಆನಂದಭೈರವಿ | ತಾಳ | ಮಿಶ್ರಛಾಪು ||
(ಯಾಲಾರನಾ ಎಂಬಂತೆ)

ಎನ್ನಮನದನ್ನನದೇ | ಕಿನ್ನೂಬರಲಿಲ್ಲ ಸಖೀ ||ಪ|| ನಿನ್ನೈಗಿನ್ನೀನೆನ್ನುವುದಿ | ದನ್ನು ಶರಚ್ಚಂದ್ರಮುಖಿ ||ಅ|| ಪ್ರಾಣೇಶನು ಸನ್ಮಿತ್ರರಂ | ಮಾಣದೊಡಗೂಡಿರ್ಪ ನೊ | ಕಾಣೇನದ | ಜಾಣೇಸುಮ | ಬಾಣೇಷುವ | ಸೈಸಲಾರೆ ||೧|| ದಾರಿದಾರಿ ನೋಡಿನೋಡಿ | ನಾರೀಮಣೀ ಚಿಂತೆಯಾಂತೆ | ಸೈರಿಸೆನು | ಮಾರನಿಭಾ | ಕಾರ ನ್ನನು | ನಾ ಕಾಣದೆ ||೨||

ಚೇಟಿ—(ಬಹು ತ್ವರೆಯಿಂದ ಬಂದು) ಒಡತಿಯೆ, ಮಹಾರಾಜನು ಕಾಲನ್ನು ಕೂಡ ತೊಳೆದುಕೊಳ್ಳದೆ ಬಹು ತ್ವರೆಯಿಂದ ಸಂಧ್ಯಾಕರ್ಮವನ್ನು ತೀರಿಸಿಕೊಂಡು ಮಂತ್ರಾಲೋಚನ ಸಭೆಗೆ ಬಿಜಯಂಗೈದನೆಂದು ದೇವರ ಮನೆಯುವರಿಂದ ಗೊತ್ತಾಯಿತು.

ದಮ—ಏನು ? ಮಂತ್ರಾಲೋಚನ ಸಭೆಗೆ ಬಿಜಯಂಗೈದನೆ ? ಹಾಗಾದರೆ ಆ ಆಲೋಚನೆಯು ನನ್ನ ಮೈದನಾದ ಪುಷ್ಕರನ ಯುವರಾಜಾಧಿಕಾರಕ್ಕೆ ಸಂಬಂಧಪಟ್ಟುದಾಗಿರಬಹುದು. ಇದೇನೂ ಅಷ್ಟೊಂದು ಅನಿವಾರ್ಯವಾದ ಕೆಲಸವಾಗಿ ಕಾಣಿಸುವುದಿಲ್ಲ. ಇದರಮೇಲೆ ಇನ್ನು ಯಾವ ಆಲೋಚನೆಯಿರಬಹುದೊ ! ಆದರೆ ಆರ್ಯಪುತ್ರನು ಯಾವಾಗಲೂ ಅಶುಚಿಯಾಗುತ್ತಿರಲಿಲ್ಲ. ಈ ದಿವಸ ಕಾಲು ತೊಳೆದುಕೊಳ್ಳದೆ ಸಂಧ್ಯಾಕರ್ಮವನ್ನು ಮಾಡಿರುವುದುಮಾತ್ರ ಚಿಂತಿಸತಕ್ಕ ವಿಷಯವಾಗಿದೆ. ದೇವರು ನಮಗೆ ಒಳ್ಳೆಯದನ್ನು ಮಾಡಬೇಕು.

ತೆರೆಯಲ್ಲಿ—(ಗಳಿಗೇ ಗಂಟೆಯ ಸದ್ದಾಗುವುದು)

ದಮ—(ಕೇಳಿ) ಓಹೊ ! ಆಗಲೇ ರಾತ್ರಿಯಲ್ಲಿ ಎರಡು ಜಾವ ಕಳೆಯಿತು. ಚತುರಿಕೆ ಇನ್ನು ನೀನು ನಿನ್ನ ಕೆಲಸಕ್ಕೆ ಹೋಗಬಹುದು. ನಾನು ಪುರಾತನವಾದ ಈ ಚಿತ್ರಕಥೆಗಳನ್ನು ಓದಿಕೊಳ್ಳುತ್ತ ಆರ್ಯಪುತ್ರನು ಬರುವವರಿಗೂ ಕಾಲವನ್ನು ಕಳೆಯುವೆನು.

ಚತು—ಒಳ್ಳೇದು, ಹಾಗೇ ಆಗಲಿ. (ತೆರಳಿದಳು)

ದಮ—(ಪುಸ್ತಕವನ್ನು ನೋಡುತ್ತಾ ಕುಳ್ಳಿರ್ದಳು)

(ಕಲಿಯ ಪ್ರವೇಶ)—ಬೀದಿ

ಕಲಿ—(ಸಂತೋಷದಿಂದ) ಆಹ ! ನನ್ನ ಇಷ್ಟವೊಂದು ನೆರವೇರಿತು. ನನ್ನ ಶತ್ರುವಾದ ನಳನು ಕಾಲನ್ನು ತೊಳೆದುಕೊಳ್ಳದೆ ಅಶುಚಿಯಾಗಿದ್ದಾಗ ನಾನು ಒಂದು ರೂಪದಿಂದ ಅವನಲ್ಲಿ ಪ್ರವೇಶ ಮಾಡಿದುದಾಯಿತು. ಈಗ ಮತ್ತೊಂದು ರೂಪದಿಂದ ಆತನ ತಮ್ಮನಾದ ಪುಷ್ಕರನ ಬಳಿಗೆ ಹೋಗಿ ಕೈರವನಿಂದ ಅವನಿಗೆ ದುರ್ಬೋಧನೆಯನ್ನು ಮಾಡಿಸುವೆನು. (ತೆರಳಿದನು)

(ಪುಷ್ಕರ ಕೈರವರ ಪ್ರವೇಶ)

ಅರಮನೆ.

ಕೈರವ—ಪುಷ್ಕರನೆ, ಲೋಕದಲ್ಲಿ ತಂದೆಯ ಸ್ವತ್ತಿಗೆ ಗಂಡುಮಕ್ಕಳೆಲ್ಲರೂ ಸಮಭಾಗಿಗಳಾಗಿರುವರು. ಹೀಗಿರುವಲ್ಲಿ ನಿಮ್ಮಣ್ಣನಾದ ನಳನು ಮಾತ್ರ ಅಖಂಡವಾದ ರಾಜ್ಯಾಧಿಕಾರವನ್ನು ಅನುಭವಿಸುತ್ತಿರುವುದು, ನೀನು ಅವನ ಕೈಕೆಳಗೆ ಸೇವಕನಂತೆ ಇರುವುದು ಯಾವ ನ್ಯಾಯ?

ಪುಷ್ಕರ—ಕೈರವನೆ, ಇದೇನು ಹೀಗೆ ಹೇಳುವೆ? ಅವನು ಯಾವಾಗಲೂ ನನ್ನನ್ನು ಪ್ರೀತಿಸುತ್ತ ತಾನು ಬೇರೆ, ನಾನು ಬೇರೆಯೆನ್ನುವಹಾಗಿಲ್ಲವಲ್ಲಾ?

ಕೈ—ಮತ್ತೊಬ್ಬರನ್ನು ವಂಚಿಸಬೇಕೆಂಬವರು ಹೀಗೆತಾನೆ ನಟಿಸುತ್ತಾರೆ. ಇಲ್ಲದಿದ್ದರೆ ಲೋಕವು ಮೆಚ್ಚಬೇಕಲ್ಲಾ! ಲೋಕದಲ್ಲಿ ವಂಚಕರ ನಯಕ್ಕೂ ವಿನಯಕ್ಕೂ ಮರುಳಾಗದವರು ಯಾರು? ನಾನೇಕೆ ಹೇಳಲಿ, ಅವನು ಈ ರಾಜ್ಯದಲ್ಲಿ ತಾನೇ ತಾನಾಗಿದ್ದುಕೊಂಡು ನಿನ್ನನ್ನು ಕಾಡಿಗೆ ಅಟ್ಟಿಬಿಟ್ಟಾಗ ನಿನಗೇ ತಿಳಿಯುವುದು.

ಪು—ಕೈರವನೆ, ಹಾಗಾದರೆ ನಮ್ಮಣ್ಣನು ಈಗ ನನಗೆ ಯುವರಾಜಾಧಿಕಾರವನ್ನು ಕೊಡಬೇಕೆಂದು ಯೋಚಿಸಿರುವುದು ಸುಳ್ಳೆ?

ಕೈ—ಶುದ್ಧ ಸುಳ್ಳು, ಶುದ್ಧ ಸುಳ್ಳು.

ಪು—ಅದು ಹೇಗೆ?

ಕೈ—ಹೇಗೇನು? ಅವನಿಗೆ ಮಕ್ಕಳಾಗುವುದಕ್ಕಿಂತ ಮುಂಚೆ ಈ ಯೋಚನೆಯಿದ್ದರೂ ಇರಬಹುದು; ಈಗ ಮಕ್ಕಳಾದಮೇಲೆ ತನ್ನ ಮಗನಿಗೆ ಯುವರಾಜಾಧಿಕಾರವನ್ನು ಕೊಡದೆ ನಿನಗೆಂದಿಗೆ ಕೊಟ್ಟಾನು! ನಿನ್ನ ಮೇಲೇನಾದರೂ ಒಂದು ತಪ್ಪನ್ನು ಹೊರಿಸಿ ನಿನ್ನನ್ನು ಊರು ಬಿಟ್ಟು ಹೊರಡಿಸುವವರೆಗೂ ಜನಮೆಚ್ಚಿಗೋಸ್ಕರ ಹೀಗೆಲ್ಲಾ ನಟಿಸುತ್ತಿರುವನು.

ಪು—ಮಿತ್ರನೆ, ನೀನು ಹೇಳಿದಹಾಗೆ ಇದ್ದರೂ ಇರಬಹುದು. ಈಗ ನನಗೇ ತಿಳಿಯಿತು ; ಅವನು ಎರಡು ಮೂರು ದಿವಸಗಳಿಂದಲೂ ನನ್ನನ್ನು ಕಂಡರೆ ಮೊದಲಿನಂತೆ ಇಲ್ಲ ; ಏನೋ ಒಂದು ಪ್ರಕಾರ ಇರುವನು ; ಅವನು ಹೇಗಾದರೂ ಇರಲಿ ; ಅವನಿಂದ ನನಗೆ ಬರತಕ್ಕ ರಾಜ್ಯಭಾಗವನ್ನು ನಾನು ಪಡೆದುಕೊಳ್ಳುವುದು ಹೇಗೆ ? ಹೇಳು.

ಕೈ—(ಸ್ವಗತ) ಆಹ ! ಈಗಲೀಗ ಇವನು ನನ್ನ ವಶನಾದನು. ಇನ್ನು ಈ ಪಶುವನ್ನು ಯಾವ ಮಾರ್ಗಕ್ಕೆ ಬೇಕಾದರೂ ತಿರುಗಿಸಬಹುದು. (ಸ್ವಲ್ಪ ಯೋಚನೆಯನ್ನು ನಟಿಸಿ) (ಪ್ರಕಾಶ) ಇದೇನಯ್ಯಾ, ಶುದ್ಧ ಮಂಕನಹಾಗೆ ಕೇಳುತ್ತೀಯೆ ? ರಾಜ್ಯಭಾಗವೆಂದರೇನು ! ಈ ರಾಜ್ಯವೇ ನಿನ್ನದಾಗುವ ಹಾಗೆ ಯೋಚನೆಯನ್ನು ಮಾಡಬೇಕು.

ಪು—(ಉತ್ಸಾಹದಿಂದ) ಮಿತ್ರನೆ, ಅದಕ್ಕೆ ತಕ್ಕ ಉಪಾಯವೇನು ?

ಕೈ—ಬೇರೆ ಉಪಾಯವೇನು ? ನೀನು ಪಗಡೇ ಆಟದಲ್ಲಿ ಶೂರನಾಗಿದ್ದೀಯೆ ; ಅವನ ಸಂಗಡ ಜೂಜು ಕಟ್ಟಿಕೊಂಡು ಪಗಡೇ ಆಡುವುದಕ್ಕೆ ಯತ್ನಿಸು ; ಅದರಿಂದ ಅವನ ಸರ್ವಸ್ವವನ್ನೂ ಗೆದ್ದುಕೊಂಡು ನಿಮಿಷಮಾತ್ರದಲ್ಲಿ ಅವನನ್ನು ರಾಜ್ಯಭ್ರಷ್ಟನನ್ನಾಗಿ ಮಾಡಿಬಿಡಬಹುದು ; ಆಮೇಲೆ ಇಲ್ಲಿಯ ಧೂರತನವು ನಿನ್ನದೇ ಆಗುವುದು. ಅದಕ್ಕೆ ಸಹಾಯನಾಗಿ ನಾನೂ ನಿನ್ನ ಸಂಗಡಲೇ ಬರುತ್ತೇನೆ.

ಪು—ಭಾಪು ಕೈರವನೇ ಭಾಪು, ಈ ಉಪಾಯವು ಬಹಳ ಚೆನ್ನಾಗಿದೆ ;

ಕಂ|| ಜ್ಞಾತಿಯೆನಿಸಿರ್ಪ ನಳನಂ |
ದ್ಯೂತದೊಳಾಂಗೆಲ್ದು ಕಳಿಪಿವನವಾಸಕೆ ಸಂ |
ಪ್ರೀತಿಯೊಳುಪಭೋಗಿಸುವೆಂ |
ಖ್ಯಾತಿಯನಾಳ್ದಿರ್ಪ ನಿಷಧದೇಶದ ಸಿರಿಯಂ ||೭||

ಕೈ—ಹಾಗಾದರೆ ತಡವೇತಕ್ಕೆ ? ನಡೆ.

ಪು—(ಔತ್ಸುಕ್ಯದಿಂದ) ಮಿತ್ರನೆ, ನಿನ್ನಹಾಗೆ ನನಗೆ ಇಷ್ಟುಮಟ್ಟಿಗೆ ಹೇಳತಕ್ಕವರು ಯಾರು ? ಇದೊ ಈಗಲೇ ಹೊರಟೆ, ಬಾ ಹೋಗೋಣ.

(ತೆರಳಿದರು)

ಆಸ್ಥಾನ.

(ನಳ ಪುಷ್ಕರ ಕೈರವಾದಿಗಳ ಪ್ರವೇಶ)

ಪಗಡೇ ಆಟ.

ಪು—(ದಾಳಗಳನ್ನುರುಳಿಸಿ) * ಭಾಪು, ಭಾಪು, ಈಸಲ ನಾನೇ ಗೆಲ್ಲುತ್ತೇನೆ.

೧ನೇ ಮಿತ್ರ—ಹೌದು ಹೌದು, ಈಸಲದ ಆಟ ನಿನಗೇ ಬರುತ್ತದೆ.

ನ—ಹೊ, ಹೊ, ಹೋ, ಇರಲಿ. (ದಾಳಗಳನ್ನುರುಳಿಸಿ) ಭಲಾರೆ, ಭಲಾ, ಈಸಲ ನಾನೇ ಗೆಲ್ಲುತ್ತೇನೆ.

ಕೈ—ಹೌದಯ್ಯಾ, ಹೌದು, ನಿಜ, ನಿಜ, ನೋಡಿಕೊಂಡು ಕಾಯಿ ನಡೆಯಿಸು.

೨ನೇ ಮಿ—(ಸ್ವಲ್ಪ ಕೋಪದಿಂದ) ಇದೇನಯ್ಯಾ, ಹೀಗೆಲ್ಲಾ ಹೇಳಿಕೊಡುವುದು ?

ಕೈ—ನಾನೇನೂ ಈ ಕಾಯನ್ನೇ ನಡಸು, ಆ ಕಾಯನ್ನೇ ನಡಸೆಂದು ಹೇಳಿಕೊಡಲಿಲ್ಲ. ಎಚ್ಚರದಿಂದ ಆಡೆಂದು ಹೇಳಿದೆ. ಇದಕ್ಕೇನು !

ನಳ—ದುಗ, ದುಗ, ದುಗ_(ದಾಳ ಬಿಡುವನು)

ಪು—ದುಗ, ದುಗ, ಹೋಗಿ ದಗ, ದಗ, ಆಯಿತು.

ನ—ಇರಲಿ, ಇರಲಿ, (ಕಾಯಿ ನಡಸುವನು)

ಪು—ಪದಿ, ಪದಿ, ಪದಿ, (ದಾಳ ಬಿಡುವನು)

ನ—ಕದಿ, ಕದಿ, ಕದಿ, ಬೀಳುತ್ತದೆ.

---

* || ರಾಗ | ಶಂಕರಾಭರಣ | ಏಕತಾಳ ||

(ಪಾರ್ಸಿಮಟ್ಟು)

ಪು—ಭಲಭಲಾ, ನೋಡಣ್ಣಾ, ಈಸಲವೇ | ಗೆಲುವೇ | ಭಲವೇ ||ಪ||

ನ—ನೀನೇ ನೆನುವೆ | ನಾನೇ ಗೆಲುವೆ ||

ಪು—ಅದೇನನುಸುರಿದೆ | ಹೊ ನಾನೆಜಯಿಸಿದೆ |

ನ—ದುಗದುಗ, ದುಗದುಗ, ದುಗದುಗ, ದುಗದುಗ |

ಪು—ದಗದಗ, ದಗದಗ, ವದಾದುದು ||೧||

ನ—ಪದಿಪದಿ, ಪದಿಪದಿ, ಪದಿಪದಿ, ಪದಿದಿ |

ಪು—ಕದಿಕದಿ, ಕದಿಕದಿ, ತಾಬೀಳ್ವುದು ||೨||

ಪು—ಇರಲಯ್ಯಾ, ಇರಲಿ-ಈಗ ಹನ್ನೆರಡು ಬಿದ್ದುದೂ ಅನುಕೂಲವೇ ಆಯಿತು. ಇದೊ, ಈ ಜೋಡಿ ಹಾರಿಹೋಯಿತು. (ಕಾಯಿ ನಡ ಸುವನು)

ನ—ಹೋದುರೆಲ್ಲಾ ಹೋಗಲಿ, ನನಗೇನೂ ಯೋಚನೆಯಿಲ್ಲ.

ಕೈ—ಸರಿ, ಈ ಆಟವಾದಹಾಗೆ, ಹೊಸ ಆಟವನ್ನು ಹೂಡಬೇಕು.

ಪು—(ಸಂತೋಷದಿಂದ) ಮಹಾರಾಜನೆ, ಈ ಆಟದಲ್ಲಿ ನಿನ್ನ ಭಂಡಾರವನ್ನು ನಾನು ಗೆದ್ದುಕೊಂಡೆ. ಇನ್ನೊಂದಾಟಕ್ಕೆ ಏನನ್ನು ಒಡ್ಡುವೆ ?

ನ—ಇನ್ನೊಂದಾಟಕ್ಕೆ ನನ್ನ ಅಶ್ವಶಾಲೆಯನ್ನೂ ಗಜಶಾಲೆಯನ್ನೂ ಒಡ್ಡು ತ್ತೇನೆ, ಆಡು.

ಕೈ—ರಾಜಾಧಿರಾಜರು ಆಡುವ ಜೂಜಾಟವೇ ಜೂಜಾಟ.

ನಳ ಪುಷ್ಕರರು—(ಭಲಭಲಾ ಎಂದು ಹೇಳಿಕೊಂಡು ಆಡುತ್ತಾ ಕುಳ್ಳಿ ರುವರು)

ಮಂತ್ರಿಸ್ಥಾನ.

ನಯಸಾಗರ—

ಕಂ|| ಪರತರಧರ್ಮಜ್ಞಂ ಸ |
ಚ್ಚರಿತಂ ಲೋಕಾಪವಾದಭೀತಂ ಸುಗುಣಾ |
ಭರಣಂ ನೀತಿಜ್ಞಂ ನ |
ಮ್ಮರಸಂ ದುರ್ಬುದ್ಧಿಯಾದುದತ್ಯಾಶ್ಚರ್ಯಂ ||೮||

ಲೋಕದಲ್ಲಿ ಜೂಜನ್ನೂ, ಮದ್ಯಪಾನವನ್ನೂ, ಬೇಟೆಯನ್ನೂ ವ್ಯಸನತ್ರಯವೆಂದು ಹೇಳುತ್ತಾ ಇದ್ದರು. ಅದರ ಮಹಿಮೆ ಇಂಥದೆಂದು ಈಗ ಚೆನ್ನಾಗಿ ಗೊತ್ತಾಯಿತು. ಈಗ ನಮ್ಮ ಮಹಾರಾಜನು ಜೂಜಾ ಡುವುದನ್ನು ತಪ್ಪಿಸುವುದಕ್ಕೆ ನಾನು ಮಾಡಿದ ಪ್ರಯತ್ನಗಳೆಲ್ಲಾ ಅರಣ್ಯ ರೋದನವಾಯಿತು. ಭ್ರಾತೃದ್ರೋಹಿಯಾದ ಪುಷ್ಕರನು ನಮ್ಮ ರಾಜ್ಯಾಂಗ ಗಳನ್ನೆಲ್ಲಾ ಒಂದೊಂದಾಗಿ ಗೆದ್ದುಕೊಂಡುಬಿಟ್ಟನು. ಇನ್ನು ಸ್ವಲ್ಪ ಹೊತ್ತಿ ನಲ್ಲೇ ರಾಜ್ಯವನ್ನೂ ಗೆದ್ದುಕೊಂಡುಬಿಡುವನು. ಈಗ ನಾನು ಇನ್ನೇನು ತಾನೇ ಮಾಡಲಿ ! (ಯೋಚಿಸಿ) ಒಳ್ಳೇದು, ಈಗಲೇ ಹೋಗಿ ನಮ್ಮ ಮಹಾ

ರಾಣಿಗೆ ಈ ಸಮಾಚಾರವನ್ನು ತಿಳಿಸಿ ಮುಂದಣ ಆಲೋಚನೆಯನ್ನು ಮಾಡುವೆನು (ತೆರಳಿದನು)

ಅಂತಃಪುರ.

(ಮಕ್ಕಳೊಡನೆಯೂ ಬೃಹತ್ಸೇನೆಯೊಡನೆಯೂ ದಮಯಂತಿಯು ಪ್ರವೇಶ)

ದಮ— ಕಂ|| ಅರಸಂ ಜೂಜೆನೊಳೀಪರಿ |
ಸಿರಿಯಂ ಸೋಲ್ವನೆನುತರಿಯೆ ನಾಂ ಕನಸಿನೊಳ್ಳಂ |
ಸ್ಥಿರಮಲ್ಲ ನೀರಗುಳ್ಳೆಯ |
ತೆರದಿಂಸಿರಿ ಯಾರ್ಗೆ ಪೇಳ್ವೆನೆನ್ನೀವ್ಯಥೆಯಂ ||೯||

ಎಲೆ ಬೃಹತ್ಸೇನೆ, ಈಗ ಮಂತ್ರಿಯು ಹೇಳಿದಂತೆ ಆರ್ಯಪುತ್ರನು ಮೈಮೇಲೆ ಪ್ರಜ್ಞೆಯಿಲ್ಲದೆ ಜೂಜಾಡುತ್ತ ಸರ್ವಸ್ವವನ್ನೂ ಸೋಲುತ್ತಿರುವುದನ್ನು ನೋಡಿದರೆ-ಜೂಜಿಗೆ ಒಡ್ಡತಕ್ಕ ವಸ್ತುಗಳೆಲ್ಲಾ ಮುಗಿದಮೇಲೆ ಈ ಮಕ್ಕಳನ್ನೂ ನನ್ನನ್ನೂ ಕೂಡ ಜೂಜಿಗೆ ಒಡ್ಡುವುದರಲ್ಲಿ ಸಂಶಯವಿಲ್ಲ. ಆದಕಾರಣ ಮೊದಲು ಈ ಮಕ್ಕಳನ್ನು ನಮ್ಮ ತೌರುಮನೆಗೆ ಕಳುಹಿಸಿಕೊಟ್ಟು, ಆಮೇಲೆ ನನ್ನ ಯೋಚನೆಯನ್ನು ಮಾಡಿಕೊಳ್ಳುವೆನು.

ಬೃಹ—ಒಡತಿಯೆ, ಈ ಕಾಲದಲ್ಲಿ ಹೀಗೆ ಮಾಡುವುದು ಬಹಳ ಯುಕ್ತವಾಗಿದೆ.

ದಮ—ಯಾರಲ್ಲಿ ?

ದ್ವಾರಪಾಲಿಕ—(ಬಂದು) ಮಹಾರಾಣಿಯೆ, ಏನಪ್ಪಣೆ ?

ದಮ—ಎಲೆ ಮಯೂರಿಕೆ, ನಮ್ಮ ಸಾರಥಿಯಾದ ವಾರ್ಷ್ಣೇಯನನ್ನು ಈಗಲೇ ಇಲ್ಲಿಗೆ ಬರುವಂತೆ ಹೇಳಿ ಕಳುಹಿಸು.

ದ್ವಾ—ಅಪ್ಪಣೆ. (ತೆರಳಿದಳು)

ದಮ—ಎಲೆ ಬೃಹತ್ಸೇನೆ, ಆರ್ಯಪುತ್ರನಿಗೆ ಪುಷ್ಕರನಿಂದ ಹೇಗೆ ಹೇಗೆ ಸೋಲುಂಟಾಗುತ್ತಿರುವುದೋ ಹಾಗೆಹಾಗೆಲ್ಲಾ ಆಟದಲ್ಲಿ ಕುತೂಹಲವೂ ಹೆಚ್ಚುತ್ತಿರುವುದು. ಇದನ್ನೆಲ್ಲಾ ನೋಡಿದರೆ, ಆರ್ಯಪುತ್ರನ ತಪ್ಪೇನೂ ಕಾಣಿಸುವುದಿಲ್ಲ. ಇದಕ್ಕೆಲ್ಲಾ ದೈವವೇ ಕಾರಣವೆಂದು ತಿಳಿಯಬೇಕಾಗಿದೆ.

ಸಾರಥಿ– (ಬಂದು) ಮಹಾರಾಣಿಗೆ ಜಯವಾಗಲಿ. ಮಹಾರಾಣಿಯೆ, ಏನಪ್ಪಣೆ?

ದಮ–ಎಲೈ ವಾರ್ಷ್ಣೇಯನೆ, ನಮ್ಮ ಪಾಪಶೇಷದಿಂದ ಆರ್ಯಪುತ್ರನು ಈಗ ವಿಷಮಸ್ಥಿತಿಯಲ್ಲಿರುವುದನ್ನು ನೀನು ಬಲ್ಲೆಯಷ್ಟೆ?

ಸಾ–ಬಡತಿಯೆ. ಪಾಪಿಯಾದ ನಾನು ಕಣ್ಣಾರ ನೋಡುತ್ತಲೇ ಇರುವೆನು. ಈ ವಿಷಯದಲ್ಲಿ ಎಷ್ಟು ವ್ಯಸನಪಟ್ಟರೂ ಸ್ವಲ್ಪವಾಗಿದೆ.

ದಮ–ವಾರ್ಷ್ಣೇಯನೆ, ಆರ್ಯಪುತ್ರನು ಹೀಗೇ ಆಡುತ್ತಾ ಇದ್ದರೆ ಈ ರಾಜ್ಯವು ನಮ್ಮ ಕೈತಪ್ಪಿಹೋಗುವುದರಲ್ಲಿ ಸಂದೇಹವಿಲ್ಲ, ಮುಂದೇನಾಗುವುದೊ ತಿಳಿಯದು. ಆದಕಾರಣ, ನೀನು ಈಗಲೇ ಮಹಾರಾಜನ ರಥದಮೇಲೆ ಈ ಎರಡು ಮಕ್ಕಳನ್ನೂ ಕುಳ್ಳಿರಿಸಿಕೊಂಡು ವಿದರ್ಭದೇಶಕ್ಕೆ ಹೋಗಿ ಅಲ್ಲಿ ನಮ್ಮ ತಂದೆಯ ಅರಮನೆಯಲ್ಲಿ ಇವರನ್ನು ಬಿಟ್ಟು ಆಮೇಲೆ ನೀನು ಅಲ್ಲೇ ಬೇಕಾದರೂ ಇರಬಹುದು; ಅಥವಾ ಇನ್ನೆಲ್ಲಿ ಬೇಕಾದರೂ ಹೋಗಿ ಇರಬಹುದು.

ವಾ–ಮಹಾರಾಣಿಯ ಅಪ್ಪಣೆಯಾದಂತಾಗಲಿ.

ದಮ–ಮಕ್ಕಳಿರಾ, ನೀವು ಅಜ್ಜಯ್ಯನ ಊರಿಗೆ ಹೋಗಿ ಬನ್ನಿ. ಈ ವಾರ್ಷ್ಣೇಯನು ಕರೆದುಕೊಂಡು ಹೋಗುವನು.

ಮಕ್ಕಳು–ಅಮ್ಮಾ ನೀವು ಬರುವುದಿಲ್ಲವೆ?

ದಮ–ನಾನು ಆಮೇಲೆ ಬರುತ್ತೇನೆ.

ಮ–ಈಗ ಅಪ್ಪಾಜಿಯೆಲ್ಲಿದಾರೆ?

ದಮ–ಮಕ್ಕಳಿರಾ, ಈಗ ಆರ್ಯಪುತ್ರನನ್ನು ಕಾಣುವುದಕ್ಕೆ ಸಮಯವಿಲ್ಲ. ಹೋಗಿ ಬನ್ನಿ.

ಮ–ಹಾಗೇ ಆಗಲಿ, ಇದೊ ಅಡ್ಡಬೀಳುತ್ತೇವೆ. (ನಮಸ್ಕರಿಸುವರು)

ದಮ–ಕುಶಲದಿಂದ ಚಿರಂಜೀವಿಗಳಾಗಿರಿ.

ವಾ–ರಾಜಕುಮಾರನೆ, ಹೀಗೆ ದಯಮಾಡಿಸಬೇಕು. ರಾಜಕುಮಾರಿಯೆ, ಹೀಗೆ ದಯಮಾಡಿಸಬೇಕು.

ದಮ—(ಮಕ್ಕಳನ್ನು ಅಪ್ಪಿಕೊಂಡು ಮುದ್ದಾಡಿ ಕಣ್ಣೀರು ತುಂಬಿ) ಮಕ್ಕಳಿರಾ, ನನ್ನ ಸ್ವಯಂವರ ಕಾಲದಲ್ಲಿ ಪ್ರಸನ್ನರಾಗಿದ್ದ ದೇವತೆಗಳೆಲ್ಲಾ ನಿಮ್ಮನ್ನು ರಕ್ಷಿಸಲಿ.

(ಕಳುಹಿಸಿಕೊಟ್ಟಳು-ಎಲ್ಲರೂ ತೆರಳಿದರು)

ಆಸ್ಥಾನ.

(ನಳಪುಷ್ಕರಾದಿಗಳ ಪ್ರವೇಶ)

ನಳಪುಷ್ಕರರು—(ಛಲಛಲಾ ಎಂಬ ಪದವನ್ನು ಹೇಳುತ್ತಾ ಪಗಡೇ ಆಡುವರು)

ಪು—ಎಲೈ ನಳನೆ, ಇದೊ, ಈ ಆಟದಲ್ಲಿ ನಿನ್ನ ರಾಜ್ಯವನ್ನೂ ನಾನು ಗೆದ್ದುಕೊಂಡೆ. ಇನ್ನು ನಿನ್ನ ಪತ್ನೀಪುತ್ರರು ಮಾತ್ರ ಉಳಿದಿರುವರು. ಅವರನ್ನೂ ನೀನು ಪಂತಕ್ಕೆ ಒಡ್ಡುವಪಕ್ಷದಲ್ಲಿ ಇನ್ನೊಂದಾಟವನ್ನು ಆಡುತ್ತೇನೆ, ಏನು ಹೇಳುವೆ ?

ನಳ—(ಪ್ರಬುದ್ಧನಾಗಿ) ಏನೆಂದೆ ? (ಎಂದು ಕೋಪದಿಂದೆದ್ದು ಸ್ವಲ್ಪ ಯೋಚಿಸಿ, ಆತ್ಮ) ಕ್ಷಣಮಾತ್ರದಲ್ಲಿ ನಾನು ಹೀಗಾಗುತ್ತೇನೆಂದು ಸ್ವಪ್ನದಲ್ಲೂ ತಿಳಿದಿರಲಿಲ್ಲ. ನನ್ನ ವಿಷಯದಲ್ಲಿ ಪ್ರತಿಕೂಲವಾದ ದೈವವು ತನ್ನ ಸಾಮರ್ಥ್ಯವನ್ನು ತೋರಿಸಿತು. ಈಗ ನಾನು ಇಲ್ಲಿದ್ದುಕೊಂಡು ಯಾವ ಮಾತನ್ನಾಡುವುದೂ ಸರಿಯಲ್ಲ ಈ ರಾಜ್ಯವೂ ಈ ಅರಮನೆಯೂ ಎಲ್ಲಾ ಪುಷ್ಕರನದಾಯಿತು. (ಎಂದು ಮೈಮೇಲಿದ್ದ ಆಭರಣಾದಿಗಳನ್ನು ತೆಗೆದುಹಾಕಿ, ಉಟ್ಟ ಬಟ್ಟೆಯಿಂದ ಹೊರಕ್ಕೆ ಹೊರಟನು, ಎಲ್ಲರೂ ತೆರಳಿದರು.)

ಅಂತಃಪುರ.

(ದಮಯಂತೀಬೃಹತ್ಸೇನೆಯರ ಪ್ರವೇಶ)

ದಮ—ಎಲೆ ಬೃಹತ್ಸೇನೆ, ಆರ್ಯಪುತ್ರನು ಇಷ್ಟಕ್ಕೇ ಆಟವನ್ನು ಬಿಟ್ಟು ಎದ್ದುಬಂದುದು ನನ್ನಭಾಗ್ಯ, ಆರ್ಯಪುತ್ರನ ಛಾಯೆಯನ್ನೇ ಅನುಸರಿಸಿಕೊಂಡು ನಡೆಯುವುದು ನನಗೆ ಧರ್ಮವಾದಕಾರಣ ನಾನೂ ಈ ಮಾಂಗಲ್ಯಹೊರತು ಇನ್ನು ಯಾವ ಆಭರಣವನ್ನೂ ಧರಿಸದೆ ಉಟ್ಟ ಬಟ್ಟೆಯಿಂದಲೇ ಆರ್ಯಪುತ್ರನನ್ನು ಅನುಸರಿಸಿಕೊಂಡು ಕಾಡಿಗೆ ಹೊರಡುವೆನು.

ಬೃ—(ಕಣ್ಣೀರು ಹಾಕುವಳು)

ದಮ—(ವ್ಯಸನಪಡುತ್ತ ಬೃಹತ್ಸೇನೆಯೊಡನೆ ತೆರಳಿದಳು.

ಪಾಟಲೀಪುರ.

ಡಂಗುರದವನು—(ಪ್ರವೇಶಿಸಿ) ಈ ಪಾಟಲೀಪುರದಲ್ಲಿರುವ ಜನಗಳಿಗೆಲ್ಲಾ ತಿಳಿಯಪಡಿಸುವುದೇನೆಂದರೆ—(ತಮ್ಮಟೆ ಹೊಡೆದು) ನಿಷಧದೇಶಕ್ಕೆ ಧೊರೆಯಾದ ಪುಷ್ಕರಮಹಾರಾಜನು ಅಜ್ಞಾಪಿಸಿರುವುದನ್ನು ಎಲ್ಲರೂ ಕೇಳಬೇಕು—ಈಗ ಪಗಡೇ ಆಟದಲ್ಲಿ ರಾಜ್ಯವನ್ನು ಸೋತುಬಿಟ್ಟು ಉಟ್ಟಬಟ್ಟೆಯಿಂದ ಹೆಂಡತಿಯೊಡನೆ ಅರಣ್ಯಕ್ಕೆ ಹೊರಟಿರುವ ನಳನಿಗೆ ಯಾರೂ ಅನ್ನೋದಕಗಳನ್ನು ಕೊಡಕೂಡದು, ಉಪಚಾರ ಮಾಡಕೂಡದು. ಹಾಗೆ ಮಾಡಿದವರು ಮರಣಾಂತಶಿಕ್ಷೆಗೆ ಗುರಿಯಾಗುವರು. ಮತ್ತು ಅವನ ಜೊತೆಯಲ್ಲೂ ಯಾರೂ ಹೋಗಕೂಡದು. (ತೆರಳಿದನು)

ಅರಣ್ಯಮಾರ್ಗ.

(ನಳ ದಮಯಂತಿಯರ ಪ್ರವೇಶ)

ದಮ—(ದುಃಖದಿಂದ)

* ಮ|| ವಿ|| ಅನಿತುಂ ರಾಜ್ಯಸುಖಂಗಳಂ ಕಳೆದು ನಾವೀಚಂದದಿಂ ಘೋರ ಕಾ |
ನನದೊಳ್ವಾಸಿಪೆವೆಂಬುದಂ ಕನಸಿನಲ್ಲಿಪ್ಪರ್ಗಳುಂ ಕಂಡೆವ |
ಲ್ತೆನಲೇಂ ಪಾತಕಿಪುಷ್ಕರಂ ನಿಷಧಪೃಥ್ವೀಮಂಡಲಾಧೀಶನಾ |
ದನೆ ಹಾ ದೈವವೆಯೆಮ್ಮ ಬಾಳಿದುದೇ ನಾನೆಂತಿದಂ ಸೈಸುವೆಂ ||೧೦||

---

* || ರಾಗ | ತೋಡಿ | ರೂಪಕತಾಳ ||

(ಏನಮಾಡಲಿ ಎಂಬಂತೆ)

ಹಾಳುಮಾಡಿದೇ | ನಮ್ಮಾ | ಬಾಳನೇನೀದೈವವೇ | ಪೇಳಲೇಕಿನ್ನೀ ದುಃಖವ | ತಾಳಲಾರೆನಕ್ಕಟಾ | ಹಾ ||೧|| ಅನಿತುಸೌಖ್ಯವಂ | ಬಿಟ್ಟು | ವನದೊಳಿಂತು ಕಷ್ಟವಂ | ಅನುಭವಿಸುವೆವೆಂದು ನಾವು | ಕನಸಿನಲ್ಲು ಕಾಣೆವು | ಹಾ ||೨|| ನಿಷಧದೇಶದಾ | ಸಿರಿಯು | ನಿಮಿಷಮಾತ್ರದಲ್ಲಿಯೆ | ವಿಷಮಬುದ್ಧಿ ಪುಷ್ಕರಂಗೆ | ವಿಷಯವಾಯ್ತು ಶಿವಶಿವಾ | ಹಾ ||೩||

ನಳ--(ದುಃಖದಿಂದ) ಆಹ! ದೈವೇಚ್ಛೆಯು ಆಶ್ಚರ್ಯಕರವಾದುದು.

ಕಂ|| ಅನುಪಮರಾಜ್ಯದ ಸೌಖ್ಯವ |
ನನುಭವಿಸುತೆ ಚಕ್ರವರ್ತಿಪದವಿಯೊಳಿರ್ದೀ |
ಯೆನಗೆ ವನವಾಸ ಮೊದವಿದು |
ದೆನೆ ದೈವಾಜ್ಞೆಯನದಾವನುಲ್ಲಂಘಿಪನೋ ||೧೧||

ಎಲೆ ಸತಿ, ಐಶ್ವರ್ಯವು ಸ್ಥಿರವಲ್ಲ. ಯಾರಿಗೆ ಯಾವ ಕಾಲಕ್ಕೆ ಏನು ಬರುವುದೋ ತಿಳಿಯುವುದಕ್ಕಾಗುವುದಿಲ್ಲ. ದೈವಗತಿಯು ಅನುಕೂಲವಾಗಿದ್ದರೆ ಎಲ್ಲಾ ಅನುಕೂಲವಾಗಿರುವುದು. ಅದು ಪ್ರತಿಕೂಲವಾದರೆ ಎಲ್ಲಾ ಪ್ರತಿಕೂಲವಾಗುವುದು. ಮಿತ್ರರೆಲ್ಲಾ ಶತ್ರುಗಳಾಗುವರು. ಅಮೃತವೇ ವಿಷವಾಗುವುದು.

ದೇವಿ, ಈ ರಾತ್ರಿ ನಾವು ಊರಹೊರಗಿರುವ ಈ ಸರೋವರದಲ್ಲಿ ಜಲಾಹಾರವನ್ನು ಮಾಡಿಕೊಂಡಿದ್ದು ನಾಳೆ ಇದೇ ಮಾರ್ಗವಾಗಿ ಅರಣ್ಯಕ್ಕೆ ಹೋಗೋಣ.

ದಮ--* ಆಗಲಿ, ಹಾಗೇ ಮಾಡೋಣ-(ತನ್ನಲ್ಲಿ ತಾನು)

ಕಂ|| ಪರಿಜನಶತಮೋಲಗಿಸು |
ತ್ತಿರೆ ಗೋಕ್ಷೀರಾನ್ನ ಭೋಜನಂಗೈಯ್ಯುತ್ತಿ |
ರ್ದರಸಂ ನೀರ್ಗೆಳಸುವನೀ |
ಪರಿಯೆನೆ ದೈವೇಚ್ಛೆಯೇಂ ವಿಭಾವಿಸಲರಿದೋ ||೧೨||

(ಎಂದಿಬ್ಬರೂ ತೆರಳಿದರು)

---

*|| ರಾಗ | ಪೀಲು | ತಾಳ | ಮಿಶ್ರಛಾಪು ||
(ಸರಸೀರುಹಾಕ್ಷಿ ಎಂಬಂತೆ)

ದೈವೇಚ್ಛೆಯನ್ನು | ಭಾವಿಸರಾರು | ಈವೇಳೆಯೊಳಿವ | ರಿಂತಪ್ಪರೆಂದು ಹಾ ||ಪ|| ಕ್ಷೀರಾನ್ನವನ್ನು | ಆರೀತಿಕೊಳುತಿರ್ದ | ನೀರನೀಯೆಡೆಜಲಾ | ಹಾರವ ಬಯಸೆ ||೧|| ಪರಿಜನವೋಲೈಸು | ತಿರಲಂತು ವಿಭವದಿ | ಮೆರೆಯುತಿರ್ದೀಮಹೀ | ವರನಿಂತು ಮರುಗೆ ||೨||

ಮೂರನೆಯ ಅಂಕವು ಮುಗಿದುದು.

ಚತುರ್ಥಾಂಕಂ

ಕಾಡುದಾರಿ.

(ದಮಯಂತೀನಳರ ಪ್ರವೇಶ)

ದಮ— * ಕಂ|| ಅಡಿಯಿಡಲಾರೆಂ ಕಲ್ಮು |
ಳ್ಳಿಡಿದಡವಿಯನೆಲದೆ ಪಸಿವುಬಾಯಾರ್ಕೆಗಳಿಂ |
ದಡಿಗಡಿಗಂ ಬಿಸುಸುಯ್ಯುತೆ |
ಕಡುವಿಸ್ತಿಲುಪಟಳಮ ನಕಟಸೈರಿಸಲಾರೆಂ ||೧||

(ಮೂರ್ಛಿಸುವಳು)

ನಳ—ಪ್ರಿಯೆ ಸಂತೈಸಿಕೊ, ಸಂತೈಸಿಕೊ.

ದಮ—(ಮೆಲ್ಲಗೆದ್ದು ನಿಟ್ಟುಸಿರು ಬಿಡುವಳು)

ನಳ—ಎಲೆ ಸತಿ, ನಿನ್ನಂತೆ ನನಗೂ ಹಸಿವು ಬಾಯಾರಿಕೆಗಳು ಹೆಚ್ಚುತ್ತಾ ಇವೆ. ಇಲ್ಲಿ ನಮ್ಮ ಆಹಾರಕ್ಕೆ ಯೋಗ್ಯವಾದ ಮೃಗಗಳೇ ಆಗಲಿ, ಪಕ್ಷಿಗಳೇ ಆಗಲಿ ಯಾವುದಾದರೂ ಸಿಕ್ಕಿದರೆ ಅದರಿಂದ ಈ ಹಸಿವನ್ನು ತೀರಿಸಿಕೊಂಡು ಮುಂದೆ ದೊಡ್ಡ ಕಾಡಿಗೆ ಹೋಗಿ ಗೆಡ್ಡೆ ಗೆಣಸುಗಳನ್ನಾದರೂ ಆಹಾರ ಮಾಡಿಕೊಂಡಿರಬಹುದು. ಈ ಮಾರ್ಗದಲ್ಲಿ ಯಾವುದನ್ನೂ ಕಾಣೆನಲ್ಲಾ! ಏನುಮಾಡಲಿ? (ಸ್ವಲ್ಪ ಯೋಚಿಸಿ) ಒಳ್ಳೇದು. ಈ ಮರಗಳ ಗುಂಪಿನಲ್ಲಿ ಹುಡುಕುವೆನು.

(ಹುಡುಕಿ ನೋಡಿ)

---

* || ರಾಗ | ಪೀಲು | ರೂಪಕತಾಳ ||

ಕಾಲಿಡಲಾರೆನು ಹಾ ಹಾ | ಕಾಡುದಾರಿಯಲ್ಲಿ | ಮೇಲುರಿಯುತ್ತಿಹ ಬಿಸಿಲಿಂ | ಬೆಂದುಹೋದೆ ನಾನು ||ಪ|| ಅಡಿಗಳು ರಕ್ತವಕಾರುವು | ವಡಿಗಡಿಗೆಡಹುವೆನು | ಹಿಡಿದುದು ಕಣ್ಗತ್ತಲೆ ಪಾ | ಳಡವಿಯೊಳಾಹಾಹಾ ||೧|| ಪಸಿವಿಂಬಾಯಾರಿಕೆಯಿಂ | ಬಿಸುಸುಯ್ವೆನುಹಾಹಾ | ಉಸಿರಲ್ಕಾರೆನು ನನ್ನೀ | ಅಸುಪೋಗದು ಹಾಹಾ ||೨||

ಆಹ! ಈ ಮರದ ಕೆಳಗೊಂಬೆಯ ಮೇಲೆ ಚಿನ್ನದ ರೆಕ್ಕೆಗಳುಳ್ಳ ಎರಡು ಹಕ್ಕಿಗಳಿರುವುವು. ಇವುಗಳನ್ನು ಹಿಡಿದರೆ ಇವುಗಳ ಮಾಂಸವು ನಮಗೆ ಆಹಾರಕ್ಕೆ ಅನುಕೂಲವಾಗುವುದು. ಈ ಚಿನ್ನದ ರೆಕ್ಕೆಗಳು ದ್ರವ್ಯವಾಗುವುದು.

(ಹಿಡಿಯಲು ಹೊಂಚುಹಾಕುವನು)

ದಮ—(ದುಃಖದಿಂದ ತನ್ನಲ್ಲಿ ತಾನು) ಅಯ್ಯೋ! ನಮ್ಮ ಕಷ್ಟವನ್ನು ಎಷ್ಟೆಂದು ಹೇಳಲಿ? ಅನೇಕ ಕೋಟಿ ದ್ರವ್ಯವನ್ನು ಜೂಜಿನಲ್ಲಿ ಸೋತು ಈಗ ಆರ್ಯಪುತ್ರನು ಈ ಪಕ್ಷಿಗಳ ಚಿನ್ನದ ಹೊಳಪಿನ ಅಲ್ಪವಾದ ರೆಕ್ಕೆಗಳಿಗೆ ಆಸೆಪಡುವ ಹಾಗಾಯಿತಲ್ಲಾ! ನಮ್ಮ ದುರ್ಗತಿಯು ಎಷ್ಟರಮಟ್ಟಿಗಿರುವುದು.

ನಳ—ನಾನು ಧರಿಸಿರುವ ಈ ಬಟ್ಟೆಯನ್ನು ಬೀಸಿ ಈ ಹಕ್ಕಿಗಳನ್ನು ಹಿಡಿಯುವೆನು. (ಬಟ್ಟೆಯನ್ನು ಮೇಲೆ ಬೀಸುವನು)

ಹಕ್ಕಿಗಳು—(ಬಟ್ಟೆಯನ್ನು ಎತ್ತಿಕೊಂಡು ಹಾರಿ) ಎಲೈ ನಳನೆ, ನಾವು ಪಕ್ಷಿಗಳಲ್ಲ. ಜೂಜಿನಲ್ಲಿ ನಿನ್ನ ಸರ್ವಸ್ವವನ್ನೂ ಗೆದ್ದ ಆ ಪಗಡೇ ದಾಳಗಳೇ ನಾವು. ನಿನ್ನ ಬಟ್ಟೆಯನ್ನೂ ಕಿತ್ತುಕೊಂಡು ಹೋಗುವುದಕ್ಕೋಸ್ಕರಲೇ ಇಲ್ಲಿ ಬಂದಿದ್ದೆವು. (ಹೊರಟುಹೋದುವು)

ನಳ—ಹಾ! ಮುಂದೇನುಗತಿ? ಎಲೈ ಪಾಪಿಯಾದ ನಳನೆ, ನಿನ್ನ ಹೊಟ್ಟೆಯನ್ನು ಹೊರೆದುಕೊಳ್ಳುವುದು ಕೂಡ ನಿನಗೆ ಕಷ್ಟವಾದಮೇಲೆ ಇನ್ನೂ ಏತಕ್ಕೆ ಬದುಕಿರುವೆ? (ಮೂರ್ಛೆಬೀಳುವನು)

ದಮ—ಆರ್ಯಪುತ್ರನೆ, ಏತಕ್ಕೆ ಆತ್ಮನಿಂದೆಯನ್ನು ಮಾಡಿಕೊಳ್ಳುವೆ? ಏಳು, ಏಳು. "ವಿಪದಿ ಧೈರ್ಯಂ" ಎಂದು ದೊಡ್ಡವರು ಹೇಳುವರಲ್ಲವೆ? ಇಂತಹ ಕಾಲದಲ್ಲಿ ಧೈರ್ಯವನ್ನು ತಾಳಬೇಕಲ್ಲದೆ ನಿಮ್ಮಂಥವರು ಹೀಗೆ ದುಃಖಿಸಬಹುದೆ? ಈಗಲೇ ನಾನು ಹೋಗಿ ಈ ಕಾಡಿನಲ್ಲಿ ಹುಡುಕಿ ಯಾವುದಾದರೂ ಫಲವನ್ನು ತಂದುಕೊಟ್ಟು ನಿನ್ನ ಹಸಿವನ್ನು ಪರಿಹಾರ ಮಾಡುತ್ತೇನೆ.

ನಳ—(ಮೆಲ್ಲಗೆದ್ದು) ಪ್ರಿಯೆ, ಹಾಗಾದರೂ ಮಾಡು; ನನಗೆ ಬಹಳ ಸಂಕಟವಾಗುವುದು.

ದಮ—(ಕೈ ಮುಗಿದುಕೊಂಡು) ಎಲೈ ವನದೇವತೆಗಳಿರಾ, ನನ್ನ ಪಾತಿವ್ರತ್ಯವು ಸತ್ಯವಾದುದೇ ಆದರೆ ಈಗ ನನಗೆ ಬೇಕಾದ ಫಲಗಳನ್ನು ಕೊಡಿ. (ಅತ್ತಿತ್ತ ನೋಡಿ) ಇದೊ, ಈ ಕಾಡುಬಾಳೇ ಗಿಡದಲ್ಲಿ ಪಕ್ವವಾದ ಹಣ್ಣುಗಳು ಕಾಣಬರುವುವು. ಅದನ್ನು ತೆಗೆದುಕೊಂಡು ಬರುವೆನು. (ತೆರಳಿದಳು)

ನಳ—ದೇವಿಯು ನನ್ನ ಜೊತೆಯಲ್ಲಿರುವವರಿಗೂ ನಾನು ನಿಶ್ಚಿಂತೆಯಾಗಿ ಪ್ರಾಣವನ್ನು ಬಿಡುವುದಕ್ಕೂ ಆಗುವುದಿಲ್ಲ. ಆದಕಾರಣ ಅವಳನ್ನು ತೌರುಮನೆಗೆ ಕಳುಹಿಸುವ ಯೋಚನೆಯನ್ನು ಮಾಡುತ್ತೇನೆ.

ದಮ—(ಫಲದೊಡನೆ ಬಂದು) ಆರ್ಯಪುತ್ರನೆ, ಈ ಫಲವನ್ನು ಸ್ವೀಕರಿಸು ; ನಾನೂ ತೆಗೆದುಕೊಳ್ಳುತ್ತೇನೆ. (ಕೊಡುವಳು)

(ಇಬ್ಬರೂ ಫಲಾಹಾರ ಮಾಡುವರು)

ನಳ—ಎಲೆ ಸತಿ, ಈಗ ನಮಗೆ ಬಹಳ ಕಷ್ಟದಶೆ ಪ್ರಾಪ್ತವಾಗಿರುವುದು. ಪಕ್ಷಿರೂಪದಿಂದ ನನ್ನ ವಸ್ತ್ರವನ್ನು ಅಪಹರಿಸಿದ ಆ ದಾಳಗಳ ವೈಷಮ್ಯದಿಂದಲೇ ನಾನು ಸಕಲೈಶ್ವರ್ಯವನ್ನೂ ಕಳೆದುಕೊಂಡು ಇಂತಹ ದುರ್ದಶೆಗೆ ಗುರಿಯಾದೆ. ಈಗ ನನ್ನ ಬುದ್ಧಿಯೇ ನನ್ನ ಅಧೀನವಾಗಿಲ್ಲ. ನಾನು ನಿನಗೆ ಹಿತಚಿಂತಕನಾದುದರಿಂದ ನಿನಗೊಂದು ಮಾತನ್ನು ಹೇಳುತ್ತೇನೆ ಕೇಳು, ಈ ಮಾರ್ಗವು ವಿದರ್ಭದೇಶಕ್ಕೆ ಹೋಗುವುದು. ಅಲ್ಲಲ್ಲಿ ಅನೇಕ ಋಷ್ಯಾಶ್ರಮಗಳು ಇರುವುವು.

ದಮ—(ಸ್ವಲ್ಪ ಚಿಂತಿಸಿ ಕಂಬನಿದುಂಬಿ) ಆರ್ಯಪುತ್ರನೆ, ನಿನ್ನಭಿಪ್ರಾಯವು ಗೊತ್ತಾಯಿತು. ಈ ಕಷ್ಟದಶೆಯಲ್ಲಿ ನಿನ್ನೊಬ್ಬನನ್ನೇ ಈ ನಿರ್ಜನವಾದ ಕಾಡಿನಲ್ಲಿ ಬಿಟ್ಟು ನಾನು ತೌರುಮನೆಗೆ ಹೋಗತಕ್ಕವಳಲ್ಲ. ನಾನೂ ನಿನ್ನ ಸಂಗಡಲೇ ಇದ್ದುಕೊಂಡು ನಿನ್ನ ಶ್ರಮವನ್ನು ಪರಿಹಾರಮಾಡುವೆನು.

ನಳ—ಸಕಲ ದುಃಖಗಳಿಗೂ ಪತ್ನಿಯೇ ಪರಮೌಷಧಪ್ರಾಯಳೆಂದು ದೊಡ್ಡವರು ಹೇಳುವರು. ಅದು ನಿಜವಾದ ಮಾತು ; ನನಗೆ ನಿನ್ನನ್ನು ಬಿಡಬೇಕೆಂಬ ಅಪೇಕ್ಷೆಯೇನೂ ಇಲ್ಲ. ಏತಕ್ಕೆ ಸುಮ್ಮನೆ ಶಂಕಿ

ಸುವೆ? ನನ್ನ ಶರೀರವನ್ನಾದರೂ ಬಿಟ್ಟೇನೇ ಹೊರತು ನಿನ್ನನ್ನು ಬೇರ ನಾನು ಬಿಡತಕ್ಕವನಲ್ಲ.

ದಮ—ಹಾಗಾದರೆ, ನಮ್ಮ ತಂದೆಯ ದೇಶಕ್ಕೆ ಹೋಗುವ ದಾರಿಯನ್ನು ನನಗೇತಕ್ಕೆ ತೋರಿಸಿದೆ? (ತನ್ನಲ್ಲಿ ತಾನು) ಹಾಗೇ ಯೋಚನೆಮಾಡಿ ನೋಡಿದರೆ, ಆರ್ಯಪುತ್ರನು ಕಲಿಪುರುಷನ ಆವೇಶದಿಂದಲೇ ತನ್ನ ಐಶ್ವರ್ಯವನ್ನು ಕಳೆದುಕೊಂಡು, ಈಗ ನನ್ನನ್ನೂ ಬಿಡತಕ್ಕ ಯೋಚನೆಯನ್ನು ಮಾಡುವಹಾಗೆ ತೋರುತ್ತಿದೆ. ಆದರಿಂದಲೇ ನನಗೆ ವಿದರ್ಭದೇಶದ ಮಾರ್ಗವನ್ನು ತೋರಿಸಿದನು. (ಪ್ರ) ಆರ್ಯಪುತ್ರನೆ, ಹಾಗೆ ನಿನಗೆ ಇಷ್ಟವಿದ್ದಲ್ಲಿ ನಾವಿಬ್ಬರೂ ಅಲ್ಲಿಗೆ ಹೋಗೋಣ. ನಮ್ಮ ತಂದೆಯು ನಿನ್ನನ್ನು ಬಹಳ ಮರ್ಯಾದೆಯಿಂದ ಕಾಣುವನು.

ನಳ—ಪ್ರಿಯಳೆ, ನಿಮ್ಮ ತಂದೆಯ ಮನೆಯು ನಿನಗೆ ಹೇಗೊ ನನಗೂ ಹಾಗೇ ಸರಿ; ಆದರೆ ಈ ದುರವಸ್ಥೆಯಲ್ಲಿ ನಾನಲ್ಲಿಗೆ ಬರತಕ್ಕವನಲ್ಲ. ಏನು ಕಷ್ಟವಾದರೂ ಈ ಕಾಡಿನಲ್ಲೇ ಅನುಭವಿಸಿಕೊಂಡಿರುತ್ತೇನೆ.

ದಮ—ಹಾಗಾದರೆ ನಾನೂ ನಿನ್ನ ಸಂಗಡಲೇ ಇರುವೆನು.

ನಳ—(ಪಶ್ಚಿಮದಿಕ್ಕನ್ನು ನೋಡಿ) ದೇವಿ—

ಮ|| ವಿ|| ಇದೊ ಸೂರ್ಯಂ ವನವಾಸ ದುಃಖಪತರಂ ನಮ್ಮಿರ್ವರಂ ನೋಡಲಾ |
ದದೆ ಕಣ್ಣಿಂ ಮರೆಯಾದನಸ್ತಗಿರಿಯೊಳ್ ಪದ್ಮಂಗಳೆಮ್ಮಿರ್ವರಾ |
ಹೃದಯಂಬೊಲ್ ಮುಗುಳಾದುವೆಮ್ಮ ಹಗೆಯಾ ಚಿತ್ತಂಬೊಲುಲ್ಲಾಸಮಾ |
ಳ್ದುದು ನೀಲಾಬ್ಜಕುಲಂ ತಮಂ ಮುಸುಕಿತೀ ಮಚ್ಚಿತ್ತಲೋಕಂಗಳಂ||೨||

ನಾವು ಇಲ್ಲೇ ಇದ್ದುಕೊಂಡು ಈ ರಾತ್ರಿಯನ್ನು ಕಳೆಯೋಣ.

ದಮ—ಆರ್ಯಪುತ್ರನೆ, ಮೂರು ದಿವಸದಿಂದಲೂ ನನಗೆ ನಿದ್ರೆಯೂ ಆಹಾರವೂ ಸರಿಯಾಗಿಲ್ಲ. ಮಾರ್ಗಾಯಾಸವು ಬಹಳವಾಗಿದೆ. ಆದಕಾರಣ ನಾನು ಸ್ವಲ್ಪ ಮಲಗಿಕೊಳ್ಳುವೆನು.

ನಳ—ಒಳ್ಳೇದು ಹಾಗೆ ಮಾಡು.

ದಮ—(ತನ್ನಲ್ಲಿ ತಾನು) ಆರ್ಯಪುತ್ರನೂ ಬಹಳವಾಗಿ ಶ್ರಮಪಟ್ಟಿರುವುದರಿಂದ ಈ ನನ್ನ ಬಟ್ಟೆಯಲ್ಲೇ ಅರ್ಧವನ್ನು ಧರಿಸಿಕೊಂಡು ತಾನೂ ಇಲ್ಲೇ ಮಲಗಿಕೊಳ್ಳಬಹುದು. (ಮಲಗುವಳು)

ನಳ—(ನೋಡಿ)

ಕಂ|| ನವಹಂಸತೂಲತಲ್ಪದೆ |
ಪವಡಿಸಿ ಸುಖನಿದ್ರೆಗೈಯುತಿರ್ದೀಸುಕುಮಾ |
ರಿ ವನಾಂತದೆ ನೆಲದೊಳ್ಮಲ |
ಗುವುದಂ ನೋಳ್ಪೆನ್ನ ಕಣ್ಣದೇಕೊಡೆಯದೊಹಾ ||೩||

(ಅರ್ಧ ವಸ್ತ್ರವನ್ನು ಧರಿಸಿ ಮಲಗುವನು)

(ಮೆಲ್ಲಗೆ ಹಾಗೇ ಎದ್ದು ಕುಳ್ಳಿರ್ದು) ಹಾ! ಪೂರ್ವದಂತೆ ಈಗ ನನಗೆ ನಿದ್ರೆಯೂ ಬರುವುದಿಲ್ಲ. ರಾಜ್ಯವನ್ನು ಕಳೆದುಕೊಂಡಿರುವುದೂ ಮಿತ್ರರೆಲ್ಲಾ ನನ್ನನ್ನು ಅಗಲಿರುವುದೂ ಅರಣ್ಯದಲ್ಲಿ ಇಂತಹ ದುರವಸ್ಥೆಯು ಪ್ರಾಪ್ತವಾಗಿರುವುದೂ ಸಹ ನನ್ನ ಸ್ಮರಣೆಗೆ ಬಂದು ಬಂದು ನನಗೆ ದುಃಖವನ್ನು ಹೆಚ್ಚಿಸುತ್ತಿರುವುದು. (ನೋಡಿ) ದೇವಿಗೆ ನಿದ್ರೆ ಚೆನ್ನಾಗಿ ಹತ್ತಿರುವುದು. ಇವಳು ನನ್ನದೆಸೆಯಿಂದ ತಾನೂ ದುಃಖಪಡುವಳು. ನನ್ನನ್ನು ಅಗಲಿದಪಕ್ಷದಲ್ಲಿ ತಮ್ಮ ಸ್ವಜನದ ಬಳಿಗೆ ಹೋಗಿ ಸುಖವಾಗಿರುವಳು. ಆದಕಾರಣ ಗಾಢನಿದ್ರೆಯಲ್ಲಿರುವ ಇವಳನ್ನು ಇಲ್ಲೇ ಬಿಟ್ಟು ನಾನು ಮರೆಯಾಗಿ ಹೊರಟುಹೋಗುವುದೇ ಒಳ್ಳೆಯದು. ಅಥವಾ ಈ ದುಃಖವನ್ನು ಅನುಭವಿಸುವುದಕ್ಕಿಂತ ಎಲ್ಲಾದರೂ ಹೋಗಿ ಪ್ರಾಣತ್ಯಾಗವನ್ನು ಮಾಡಿಬಿಡಲೆ? (ಯೋಚಿಸಿ) "ಜೀವನ್ಭದ್ರಾಣಿ ಪಶ್ಯತಿ" ಎಂದು ದೊಡ್ಡವರು ಹೇಳುವುದರಿಂದ ಅದೂ ಸರಿಯಾಗಿ ಕಾಣಿಸುವುದಿಲ್ಲ. ಇದರಮೇಲೆ ಆತ್ಮಹತ್ಯಾದೋಷ ಬೇರೆ ಬರುವುದು. ಏನುಮಾಡಲಿ? (ಹಾಗೇ ಯೋಚಿಸಿ) ಈಗ ಇವಳನ್ನು ಇಲ್ಲಿ ಬಿಟ್ಟುಹೋಗುವುದೇ ಯುಕ್ತವಾಗಿ ತೋರುವುದು; ಆದರೆ, ನಾನು ದಿಗಂಬರನಾಗಿ ಹೋಗುವುದು ಹೇಗೆ? ಒಳ್ಳೇದು, ಇವಳ ಬಟ್ಟೆಯಲ್ಲೇ ಅರ್ಧವನ್ನು ಕತ್ತರಿಸಿಕೊಂಡು ಹೊರಟುಹೋಗುವೆನು. ಇದನ್ನು ಕತ್ತರಿಸುವುದಕ್ಕೆ ಇಲ್ಲೇನೂ ಆಯುಧವಿಲ್ಲವಲ್ಲಾ! ಏನು ಮಾಡಲಿ? (ಅತ್ತಿತ್ತ ಹುಡುಕುವನು)

ಕಲಿ—(ಪ್ರವೇಶಿಸಿ) ಇವನು ಬಟ್ಟೆಯನ್ನು ಕತ್ತರಿಸುವುದಕ್ಕೆ ಅನುಕೂಲವಾಗಿ ನನ್ನ ಮಾಯೆಯಿಂದ ಒಂದು ಚೂರಿಯನ್ನಿಡುವೆನು.

(ಇಟ್ಟು ತೆರಳಿದನು)

ನಳ—(ನೋಡಿ) ಆಹ! ಇಲ್ಲಿ ಯಾವುದೋ ಒಂದು ಚೂರಿಯು ಬಿದ್ದಿರು ವುದು. ಯಾರೋ ಬೇಟೆಗಾರರು ಮರೆತು ಬಿಟ್ಟುಹೋಗಿರಬ ಹುದು. ಇದರಿಂದ ಈ ಬಟ್ಟೆಯನ್ನು ಕತ್ತರಿಸಿಕೊಳ್ಳುವೆನು. (ಮೆಲ್ಲಗೆ ಕತ್ತರಿಸಿ, ಧರಿಸಿಕೊಂಡು ದಮಯಂತಿಯನ್ನು ನೋಡಿ) ಅಯ್ಯೊ! ನಿದ್ರೆ ಮಾಡುತ್ತಿರುವ ಇವಳನ್ನು ನಾನು ಬಿಟ್ಟುಹೋಗು ವುದು ಹೇಗೆ?

ಕಂ|| ಇನಿತು ದುರವಸ್ಥೆಯೊಳು ಮೆ |
ನ್ನನೆ ತಾನನುಸರಿಸಿಕೊಂಡುಬಂದ ವಿದರ್ಭಾ |
ವನಿಪಾಲಕ ಸುತೆಯಾದೆ |
ನ್ನಿನಿಯಳ ನಾನೆಂತು ವನದೆ ಬಿಟ್ಟುತೆರಳ್ವೆಂ ||೪||

ಹಾ! ಇವಳು ಎಚ್ಚತ್ತಮೇಲೆ ನನ್ನನ್ನು ಕಾಣದೆ ಹುಚ್ಚು ಹಿಡಿದ ವಳಂತೆ ಏನಾಗುವಳೋ ಕಾಣೆನಲ್ಲಾ! ನಾನೂ ಸಮೀಪದಲ್ಲಿ ಇಲ್ಲದ ಮೇಲೆ ಈ ಕೋಮಲಾಂಗಿಯು ಭಯಂಕರವಾದ ಈ ಅರಣ್ಯದಲ್ಲಿ ಹೇಗೆ ಸಂಚಾರ ಮಾಡಿಯಾಳು! ಎಲೆ ಭಾಗ್ಯಶಾಲಿನಿಯೆ, ಪೂರ್ವದಲ್ಲಿ ನಿನ್ನನ್ನು ಸೂರ್ಯನೂ ಗಾಳಿಯೂ ಸಹ ನೋಡದೆ ಇದ್ದರು. ಅಂತಹ ನೀನು ಅರ್ಧ ವಸ್ತ್ರವನ್ನುಟ್ಟುಕೊಂಡು ದಿಕ್ಕಿಲ್ಲದವಳಂತೆ ಈ ಕಾಡಿನಲ್ಲಿ ಮಲಗಿರುವು ದನ್ನು ನೋಡಿ ನಾನು ಹೇಗೆ ಸೈರಿಸಲಿ? ಎಲೆ ರೂಪವತಿಯೆ, ನೀನು ಪತಿ ವ್ರತೆಯಾದಕಾರಣ ನಿನ್ನನ್ನು ಸಕಲ ದೇವತೆಗಳೂ ರಕ್ಷಿಸಲಿ. (ನೋಡಿ ನೋಡಿ ಸ್ವಲ್ಪದೂರ ಹೋಗಿ ಹಿಂದಕ್ಕೆ ಬಂದು) ನನ್ನ ಅರಗಿಣಿಯ ನಗೆ ಮೊಗವನ್ನು ಇನ್ನೊಂದಾವೃತ್ತಿ ಚೆನ್ನಾಗಿ ನೋಡಿಬಿಟ್ಟು ಹೊರಟುಹೋ ಗುವೆನು. (ನೋಡುತ್ತಾ)

* ಚಂ|| ವ|| ಬರಸಿಡಿಲಿಂದುರುಳ್ದಪುರಗೋಪುರ ಶೃಂಗದಪೊನ್ನಬೊಂಬೆಯೋ |
ಸುರಪತಿಶಾಪದಿಂ ಧರೆಗುರುಳ್ದಮರಾಂಗನೆಯೋ ಎನಲ್ಕನೋ |

---

* || ರಾಗ | ಭೈರವಿ || ಏಕತಾಳ ||
(ಮರುವಾತಗುನಾ ಎಂಬಂತೆ)

ರತಿಯಾಕೃತಿಯಾಗಿಹ | ಕಾಂತೆಯಾ ||ಪ|| ಜೊತೆಯನಗಲಿರಲಾರೆನಾಂ | ಕಾಂತೆಯಾ ||ಅ|| ತೊಳಗುವ ನಗೆಮೊಗ | ಆಳಿದಳಿದಿಂದುವ | ಗೆಲಿಡಲದಳಕಾಂತೆ

ಪರತನುರೂಪದಿಂದೆ ರತಿಯಂ ಕಡೆಗಣ್ಚುತೆ ನಿದ್ರೆಯಿಂದೆ ಮೈ |
ಮರೆದೊರಗಿರ್ಪ ಚಂಚದಳಕಾಂತೆಯ ಕಾಂತೆಯನೆಂತಗಲ್ವೆನಾಂ ||೫||

ಪ್ರಿಯಳೆ, ನಿನಗೆ ಮೋಸಮಾಡಿ ಹೋಗುವುದಕ್ಕೆ ನನಗೆ ಕಾಲುಗಳೇ ಬರುವುದಿಲ್ಲವಲ್ಲಾ ! ಏನು ಮಾಡಲಿ ? (ಮೂರ್ಛೆಸುವನು)

ಕಲಿ—(ಪ್ರವೇಶಿಸಿ) ಇನ್ನೆಷ್ಟು ಹೊತ್ತಾದರೂ ಇವನು ಹೀಗೇ ಪೇಚಾಡುತ್ತಿರುವನು. ಆದಕಾರಣ ಇವನು ಶೀಘ್ರವಾಗಿ ಇವಳನ್ನು ಬಿಟ್ಟು ಹೋಗುವಂತೆ ಇವನಿಗೆ ದುರ್ಬುದ್ಧಿಯನ್ನು ಕಲ್ಪಿಸುವೆನು.

(ತೆರಳಿದನು)

ನಳ—(ಎಚ್ಚತ್ತು ಮೆಲ್ಲಗೆದ್ದು) ಇದೇನು ! ನಾನು ಇನ್ನೂ ಇಲ್ಲೇ ಇರುವೆನು. (ಓಡಿಹೋದನು) 7780

ದಮ—(ಎಚ್ಚತ್ತು ಮಗ್ಗುಲನ್ನು ನೋಡಿ) ಆರ್ಯಪುತ್ರನೆಲ್ಲೋ ಕಾಣೆನಲ್ಲಾ ! (ಎದ್ದು) ಆರ್ಯಪುತ್ರಾ, ಆರ್ಯಪುತ್ರಾ, ಎಲ್ಲಿರುವೆ? (ಅತ್ತಿತ್ತ ಹುಡುಕಿ) ಅಯ್ಯೋ ! ಎಲ್ಲೂ ಕಾಣೆನಲ್ಲಾ ! ಹಾ ! ಪ್ರಾಣಕಾಂತನೆ, ಎಲ್ಲಿ ಮರೆಯಾಗಿರುವೆ ? ನಿನ್ನ ಪರಿಹಾಸವು ಸಾಕು ಸಾಕು, ಬೇಗ ನನಗೆ ಮುಖವನ್ನು ತೋರಿಸು. ನಿನ್ನನ್ನು ಬಿಟ್ಟು ಈ ಅರಣ್ಯದಲ್ಲಿ ಒಂದು ಕ್ಷಣವಾದರೂ ನಾನು ಹೇಗೆ ಜೀವಿಸಲಿ ? ಪ್ರಿಯನೆ, ನಿನಗೆ ನಾನೇನು ಅಪರಾಧವನ್ನು ಮಾಡಿದೆ ? ನಿಷ್ಕಾರಣವಾಗಿ ನೀನು ನನ್ನನ್ನು ಬಿಟ್ಟುಹೋಗಬಹುದೆ ? (ತನ್ನ ಬಟ್ಟೆಯನ್ನು ನೋಡಿ) ಅಯ್ಯೋ ! ನನ್ನ ಬಟ್ಟೆಯಲ್ಲಿ ಅರ್ಧವನ್ನು ಕತ್ತರಿಸಿಕೊಂಡು ಹೋಗಿರುವನಲ್ಲಾ ! ಹಾ ! ರಾಜಾಧಿರಾಜನೆ—

ಯಾ | ಕಾಂತೆಯಾ ||೧|| ಸುರಪತಿ ಶಾಪದಿ | ಧರೆಗಿಳಿತಂದಿಹ | ಸುರರಮಣಿಯ ಪೋಲಿಹ | ಕಾಂತೆಯಾ ||೨|| ಬರಸಿಡಿಲಿಂದ ಗೋ | ಪುರದ ಜಂತದಬೊಂಬೆ | ಧರೆಗುರುಳಿದವೋಲಿಹ | ಕಾಂತೆಯಾ ||೩||

* ಮ|| ವಿ|| ಧರಣೀಪಾಲ ಸಹಸ್ರಮೋಲಗಿಸುತಿರ್ಪನ್ನಂ ಮಹಾಸಿಂಹವಿ |
ಷ್ಟರದೊಳ್ಮಂಡಿಸಿ ದೀನಸಂತತಿಯನಿತ್ತಾಚ್ಛಾದನಾನ್ನಂಗಳಂ |
ಪೊರೆಯುತ್ತುಂ ಸುರಪಾಲನಂ ವಿಭವದಿಂ ಮೀರಿರ್ದನೀನುಂ ನರೇ |
ಶ್ವರಚೂಡಾಮಣಿ ಪಾಪಿದೈವವಶದಿಂ ದೌರ್ಗತ್ಯಕೀಡಾದೆಯಾ ||೬||

ಹಾ! ನಾಥನೆ. ಹಾ! ಸ್ವಾಮಿಯೆ, ನೀನು ನನ್ನನ್ನು ಬಿಟ್ಟು ಹೋಗ ಬಹುದೆ? ಧರ್ಮಜ್ಞನಾದ ನೀನು ನನ್ನ ಸ್ವಯಂವರ ಕಾಲದಲ್ಲಿ ನಿನ್ನನ್ನು ನಾನು ಬಿಡತಕ್ಕವನಲ್ಲವೆಂದು ಪ್ರಮಾಣವಾಗಿ ಹೇಳಿದೆ ಯಲ್ಲಾ? ಆ ಮಾತನ್ನು ಯಥಾರ್ಥಮಾಡಿಕೊ; ಹಾ! ಪ್ರಾಣ ಕಾಂತನೇ—

ಕಂ|| ನೀನಿಂತೆನ್ನನಗಲ್ವೊಡ |
ಮಾ ನಿನ್ನಂಜೀವಿಸಿರ್ಪನೇನಿದುಹೋದ್ಯಂ |

ಅಹಾ! ತಿಳಿಯಿತು, ತಿಳಿಯಿತು.

ಕಂ|| ಕಾನನದೆ ಬರಿಸಿನಿದ್ರೆಯ |
ತಾನೆನ್ನುಮನಿಂತು ವಂಚಿಸಿತು ದುರ್ದೈವಂ ||೭||

ಹಾ! ಮೃತ್ಯುವೆ, ಇನ್ನೂ ನನ್ನಲ್ಲೇಕೆ ಕೃಪೆಮಾಡುವೆ? (ಕೋಪದಿಂದ) ಯಾವ ಪಾಪಿಯಾದ ಕಲಿಯು ನಮಗೆ ಇಂತಹ ದುಃಖವನ್ನುಂಟುಮಾಡಿರುವನೋ ಅವನು ನಮಗಿಂತಲೂ ಹೆಚ್ಚಾದ ದುಃಖವನ್ನನುಭವಿಸಲಿ. (ಶಾಪಕೊಟ್ಟು)
ಮುಂದಿನ್ನೇನು ಮಾಡಲಿ? ಒಳ್ಳೆದು, ಈ ಮಾರ್ಗವಾಗಿ ಹುಡುಕಿ ಕೊಂಡು ಹೋಗುವೆನು. (ತೆರಳಿ ಮತ್ತೆ ಬಂದು ಭಯದಿಂದ) ಹಾ! ಈ ಅರಣ್ಯವು ಬಹು ಭಯಂಕರವಾಗಿರುವುದು.

---

* || ರಾಗ | ತೋಡಿ | ರೂಪಕತಾಳ ||
(ವಿಧಿಯೇನಗೈದೆಹಾ ಎಂಬಂತೆ)

ನಿನಗಿಂತು ದುರ್ದಶೆ | ಬಂತೆ ||ಪ|| ಎನಲೇನು, ಪಾಪಿ, ದೈವ, ದಾಕ್ಷಿಣ್ಯ ನು ||ಅ|| ನಿನಿಯಲ್ಲಿನೀಂ ಸುರಪಾಲನಂ | ಜರಿಯುತ್ತದೀನರನಾವಗಂ | ಪೊರೆಯುತ್ತ, ಲಿರ್ದ, ಭಾಗ್ಯ, ಪೋದುದೆ ||೧|| ನರಸಿಂಹಪೀಠದಿಮಂಡಿಸಿ | ನರಲೋಕಪಾಲನ ಸುತ್ತಿರೆ | ಧರೆಯಾಳು, ತಿರ್ದ, ಚಕ್ರ, ವರ್ತಿಗೆ ||೨||

* ಮ||ವಿ|| ಇದೊ ಕಾಡಾನೆಗಳೊಗ್ಗು ಘೀಳಿಡುತೆ ವೃಕ್ಷಾಗ್ರಂಗಳಂ ಬಂಡಿಸು |
ತ್ತಿದಿರೊಳ್ಬಂದಪುದಿತ್ತಲೊಂದು ಪುಲಿಯಾರುತ್ತೈತರುತ್ತಿರ್ಕ್ಕುಮಾ |
ಪೊದರಿಂ ಘುರ್ಘುರಿಸುತ್ತೆ ನಿಟ್ಟಿಸುತುಮೆಯ್ತಂದಪ್ಪುದೊಂದೆಕ್ಕಲಂ |
ಹೃದಯಂನಾಡೆನಡುಂಗುತಿರ್ಪುದೆನಗೀಕಾಂತಾರಮೇಂಘೋರಮೋ||೮||

ಈ ಗೊಂಡಾರಣ್ಯದಲ್ಲಿ, ನನ್ನ ಪತಿಯನ್ನು ಎಲ್ಲಿ ಹುಡುಕಲಿ? (ಮುಂದೆ ನೋಡಿ, ಭಯದಿಂದ) ಅಯ್ಯೊ! ಅಯ್ಯೊ! ಇಲ್ಲೊಂದು ಹೆಬ್ಬಾವು ಬೇರೆ ಬಿದ್ದಿರುವುದಲ್ಲಾ! ಇನ್ನೇನುಗತಿ? ಒಳ್ಳೇದು, ಇತ್ತಲಾಗಿ ಬಳಸಿಕೊಂಡು ಹೋಗುವೆನು. (ಬಳಸಿಕೊಂಡು ಹೋಗುತ್ತ, ಹೆಬ್ಬಾವು ತಿರುಗಲು) ಅಯ್ಯೊ! ಇದು ನನ್ನ ಕಡೆಗೇ ತಿರುಗಿತಲ್ಲಾ! ಮುಂದೇನುಗತಿ? (ಬೇಗನೆ ಹೋಗುವಳು)

ಕಲಿ—(ಪ್ರವೇಶಿಸಿ) ಈಗ ಈ ಹೆಬ್ಬಾವಿನಿಂದ ದಮಯಂತಿಯನ್ನು ನುಂಗಿಸುವೆನು. ಇರಲಿ, ಇರಲಿ! (ತೆರಳಿದನು)

(ಕಿರಾತರು—ಮೃಗಗಳನ್ನು ಅಟ್ಟುತ್ತ ಪ್ರವೇಶಿಸಿ)

೧ † ಕಂ|| ಓಡುತ್ತಿದೆ ನೋಡುತ್ತಿದೆ |
ಯಾಡುತ್ತಿದೆ ಮರಳಿಯೊಂದು ಬೇಗನೆ ವಾಘೀ |

---

* | ರಾಗ | ಕಲಹರಪ್ರಿಯ | ಏಕತಾಳ || (ಪಾರ್ಸಿಮಟ್ಟು)

ಹಾ, ಕಡುಭಯಂಕರವಿದೇಂ | ಪಾಳಡವಿಯು | ಪಸಿದಿಹ ಪುಲಿ | ನಡೆತರುತಿಹುದೀ | ಕಡೆಯೊಳಗೆ | ನ್ನೆದೆ ನಡುಗುತಿಹುದು ||ಪ|| ಇದಕಿದಕೊ ಸಾ, ಲಿಡುತಲೀ | ಪದವಿಯಲಿ | ಮದಿಸಿದ ಗಜಗಳು | ಇದಿರಲಿ ಮರಗಳ, ನುರುಳಿಸು, ತೋ ಹೋಹೊ, ಬರುತ್ತಲಿವೆ ||೧|| ಅಡಿಗಡಿಗೆ ಘುರ್ಘುರಿಸುತ, ರಭಸದಲಿ | ಕಡುಮುಳಿದಿರದಿದೊ | ನಡೆತರುತಿರುವುದು, ಅಡವಿಯ, ವರಾಹ, ವಿದೊಂದಕಲ ||೨||

† || ರಾಗ | ಶಂಕರಾಭರಣ | ಏಕತಾಳ | ನೋಟು ||

ಪಾಸಾಸಸ | ಪಾದಾದದ | ದಪಮಗರಿಸ | ಸರಿಗಮಪಾ
ಸಾಗಾಗಗ | ರೀರೀರಿರಿ | ಪಾನೀನಿನಿ | ಪಾದನಿಸಾ |
೧ ಓಡುತ್ತಿದೆ | ನೋಡುತ್ತಿದೆ | ಯಾಡುತಲಿದೆ ಸಾರಗವು |

ಕೇಡಾಳಿಯ ನೋಡಾಡಿಸಿ |
ಕೋಡಿಂದಂ ಬಿಡದೆ ಘಾತಿಪೆಂಕರ್ಗ್ಗಣೆಯಿಂ ||೯||
೨ ಕೂಗುತ್ತಿದೆ ಬೀಗುತ್ತಿದೆ |
ರೇಗುತ್ತಿದೆಯಿತ್ತಲೊಂದು ಮದಿಸಿರ್ಪಗಜಂ |
ತೂಗಾಡುತ್ತಿರ್ಪಿದನಾಂ |
ಮೂಗೋಲ್ಗಳನಚ್ಚುಕಡಪಿ ಜಂತಂಗೊಳ್ವಂ ||೧೦||
ಅರುತ್ತುಂ ಪಾರುತ್ತುಂ |
ತೋರುತ್ತಿದೆ ದೂರದಲ್ಲಿ ಪುಲಿಯೊಂದತ್ತಲ್ |
ಸಾರುತ್ತಿರ್ಪದನಿದಿರಾಂ |
ತೀರೋಪದೆ ಸದೆದುಕೊಳ್ವೆನದರೊಳ್ಗೊಗಲಂ ||೧೧||

(ಬೇಟೆಗಾಗಿ ಓಡಾಡುತ್ತಿರುವರು)

ತೆರೆಯಲ್ಲಿ—ಅಯ್ಯೋ! ಅಯ್ಯೋ! ನನ್ನನ್ನು ಹೆಬ್ಬಾವು ನುಂಗುತ್ತಿರುವುದು; ಯಾರಾದರೂ ರಕ್ಷಿಸಿರಿ, ರಕ್ಷಿಸಿರಿ ಹರಿಹರಿ. (ಎಂದು ದಮಯಂತಿ ಮೊರೆಯಿಡುವಳು)

ಕಿರಾತರಾಜ—(ಕೇಳಿ) ಇದು ಯಾರು ಮೊರೆಯಿಡುವವರು? (ನೋಡಿ) ಓಹೋ! ಇಲ್ಲೊಂದು ಹೆಬ್ಬಾವುಕಣ್ಲಾ, ಒಬ್ಬ ಹೆಂಗ್ಸನ್ನು ನುಂಗುತಯ್ತೆಕಣ್ಲಾ, ತಲೆಮಾತ್ರ ಕಾಣುತಯ್ತೆ, ಮೈನೆಲ್ಲಾ ನುಂಗ್ಬುಟ್ಟದೆ. ಈ ಆಯುದ್ಧಿಂದ ಈ ಬೊಡ್ಡೀಹೆತ್ತಿದ್ದನ್ನು ಸೀಳಿ, ಇವ್ಳನ್ನು ಬುಡಿಸಿಬುಡುತೀನಿಕಣ್ಲಾ. (ಹಾಗೆ ಮಾಡಿ ಬಿಡಿಸಿ) ಎಲುಡ್ಗಿ ಈ ಅಳ್ದಲ್ಲಿ ನೀರ್ಕುಳ್ಗ ಈ ಅಣ್ಣನ್ನು ತಿಂದ್ಕೊಂಡ್ಬಾ.

ದಮ—ಎಲೈ ಮಹೋಪಕಾರಿಯೇ, ಹಾಗೇ ಮಾಡುವೆನು. (ಹಣ್ಣನ್ನು ತೆಗೆದುಕೊಂಡು ತೆರಳಿದಳು)

ಕೇಡಾಳಿಯ | ನೋಡಾಡಿಸಿ | ತೋಡಿಂದಲಿ | ಕೊಲ್ಲುವೆನು ||೧||
೨ ಕೂಗುತ್ತಿದೆ | ಬೀಗುತ್ತಿದೆ | ರೇಗುತಲಿದೆ | ಮದಗಜವು |
ತೂಗಾಡುವ | ನಾಗೇಂದ್ರನ | ಮೂಗೋಲ್ಗಳ | ನಿಕ್ಕುವೆನು |೨||
೩ ಅರುತ್ತಲಿ | ಹಾರುತ್ತಲಿ | ಸಾರುತಪುಲಿ | ದೂರದಿ |
ತೋರುತ್ತಿದೆ | ಪೂರಾಸದೆ | ದೀರೋಪದೆ | ಬೀಳಿಪೆನು ||೩||

ಕಿ॥ ರಾ—* ಕಂ॥ ಚಂದುಳ್ಳಿಮಡದಿ ಸಿಕ್ಕಿದ |
ಳಿಂದಿವಳಂ ಕೂಡಿಕೊಂಡು ಸಂತಸಬಡುವೇ |
ನಿಂದಿನಬೇಂಟೆಯೆ ಬೇಂಟೆಯಿ |
ದೊಂದೆನ್ನಯ ಜನುಮಕೊಳ್ಳಿತುಕ್ಕೆವಮುಮಾ ॥೧೨॥

(ನೋಡಿ) ಇದೊ, ಆ ಹೆಣ್ಣು ನೀರ್ಮ್ಯಾಗೆ ಚಿನ್ನದ್ಬೊಂಬೆಯಂತೆ ಹೊಳೀತಾ ಬರುತಯ್ತೆ.

ದಮ—(ಸ್ನಾನಮಾಡಿ ಶುದ್ಧಳಾಗಿ ಬರುವಳು)

ಕಿ॥ ರಾ—ಎಲೆ ಚಂತದ್ಬೊಂಬೆ, ಅಣ್ತಿಂದ್ಯಾ ?

ದಮ—ಭದ್ರನೆ, ತಿಂದೆನು.

ಕಿ॥ ರಾ—ನೀನ್ಯಾರು ? ಎಲ್ಲಿಂದ್ಬಂದಿ ? ವಸಿ ಏಳು, ಕೇಳುವೆ.

ದಮ—ನಾನು ವಿದರ್ಭದೇಶಾಧಿಪತಿಯಾದ ಭೀಮಮಹಾರಾಜನ ಮಗಳು. ನಳಮಹಾರಾಜನ ಹೆಂಡತಿ. ಏನೋ ಬಂದು ಕಷ್ಟದಿಂದ ನನ್ನ ಗಂಡ ನೊಡನೆ ಈ ಕಾಡಿಗೆ ಬಂದೆ; ಇಲ್ಲಿ ಆತನು ನನ್ನನ್ನು ಅಗಲಿದನು.

ಕಿ॥ ರಾ—(ಹುಸಿನಗುತ) ಅಗಲ್ದಾನ್ಲ ? ಆ ಮಂಕಸನ್ಮಗ ಬುಟ್ಟುಬುಟ್ರೆ ಒಳ್ಳೇದಾಯ್ತು. ನೀನು ಚಿಸನ್ಪಡ್ಬೇಡ, ಹಿಂಗೆ ಕುಂತ್ಕೊಂಡು ವಸಿ ಸುದಾರ್ಸ್ಕೊ. (ಕೈ ತೋರಿಸುವನು)

ದಮ—ಇತ್ತಲಾಗಿ ಕುಳ್ಳಿರುವೆನು.

ಕಿ॥ ರಾ—ನಾನೂ ಹಂಗೇ ಕುಂತ್ಕೊಳ್ತಿನ್ನಿ.

ದಮ—(ಭಯದಿಂದ, ಆತ್ಮ) ಇವನೇನೊ ! ಕಾಮುಕನಂತೆ ತೋರುವನು. (ಪ್ರ) ಭದ್ರನೆ, ದೂರವಾಗಿರು.

ಕಿ॥ ರಾ—ಎಲ್ಚಿಂದರಿ, ಅದ್ಯಾಕಾ ? ಚೆಚ್ಚಿ ಬೆದರ್ತಿ ? ನನ್ಜೀವವೇ ನಿನ್ನ್ಕೈಲಿ ರುವ್ದಲ್ವಾ ?

---

* ॥ ರಾಗ | ಕಾಪಿಜಿಲ್ಲಾ | ಏಕತಾಳ ॥

(ಪಾರ್ಸಿಮಟ್ಟು-ಸಾಜನ್ಕೆ ಬಂಗಲಿಮೆ ಎಂಬಂತೆ)

ಚಂದುಳ್ಳಿಯಾದ ಹೆಣ್ಣು | ಸಿಕ್ಕಿತಲಾ | ನನಗೀಗ ॥ಪ॥ ಇದಿವಳನುಕೂಡಿ | ಕೊಳ್ಳುವೆ ನಾನು | ಒಳ್ಳೆ ಹೆಣ್ಣು ಸಿಕ್ಕಿತಲಾ | ನನಗೀಗ ॥೧॥ ಇದೊಂದು ಪುಣ್ಯಯೋಗವೆ | ಬಲುಮೇಲು | ಒಳ್ಳೆ ಹೆಣ್ಣು ಸಿಕ್ಕಿತಲಾ | ನನಗೀಗ ॥೨॥ ಇಂತ ಹಬೇಟೆಯು | ಬೇಟೆಯುಂತಲನು | ಒಳ್ಳೆ ಹೆಣ್ಣು ಸಿಕ್ಕಿತಲಾ | ನನಗೀಗ ॥೩॥

ದಮ—(ಆತ್ಮ) ಇವನಿಗೆ ನನ್ನಿಂದಲೇ ಮರಣವಾಗಬೇಕೇನೊ? ಅದರಿಂದಲೇ ದೈವವು ಇವನ ಬಾಯಿಂದ ಈ ಮಾತನ್ನು ಹೊರಡಿಸಿತು. (ಪ್ರ) ಛೀ ಛೀ ದೂರಹೋಗು, ದೂರಹೋಗು. ಅನ್ಯಾಯವಾಗಿ ಕೆಡಬೇಡ.

ಕಿ॥ ರಾ—(ಕೋಪದಿಂದ ನಗುತ್ತ) ನಿನ್ನುಬಿಟ್ಟು ನಾನೆಲ್ಲೋಗಿದ್ದೀನಿ? (ಹತ್ತಿರ ಬರುವನು)

ದಮ—ನಾನು ನಳಮಹಾರಾಜನನ್ನು ಹೊರತು ಮತ್ತೊಬ್ಬ ಪುರುಷನನ್ನು ಮನಸ್ಸಿನಲ್ಲೂ ಸ್ಮರಿಸಿದೆ ಇದ್ದವಳಾದರೆ, ಮೃಗಮಾಂಸದಿಂದ ಜೀವಿಸುವ ಈ ವ್ಯಾಧನು ನಾಶವಾಗಿಹೋಗಲಿ. (ಎಂದು ಶಾಪ ಕೊಟ್ಟೊಡನೆ ಕಿರಾತರಾಜನು ಧಗ್ಗೆಂದು ಉರಿದುಹೋಗುವನು. ಉಳಿದ ಬೇಡರು ಹಾ! ಹಾ! ಎಂದು ಓಡುವರು)

ದಮ—ಲೋಕದಲ್ಲಿ ಜನಗಳು ಯಾರಿಗಾದರೂ ಉಪಕಾರವನ್ನು ಮಾಡಿದರೆ, ಅದರಿಂದ ಬರತಕ್ಕ ಪುಣ್ಯವನ್ನು ಉಳಿಯಿಸಿಕೊಳ್ಳುವುದು ಬಹುಕಷ್ಟ, ಬಹುಕಷ್ಟ. ಅದರಲ್ಲೂ ಸ್ತ್ರೀಯರಿಗೆ ಉಪಕಾರಮಾಡಿ ನಿಸ್ಸ್ಪೃಹರಾಗಿರತಕ್ಕವರು ಬಹಳ ಅಪೂರ್ವ, ಬಹಳ ಅಪೂರ್ವ. ಛೀ, ಈ ಹೆಣ್ಣು ಜನ್ಮವನ್ನು ಸುಡಬೇಕು.

* ಕಂ॥ ತೆಗೆಮಕ್ಕಳುಮಂ ಪತಿಯುಮ |
ನಗಲ್ದು ಕಾನನದೆ ದುಃಖಿಪೆನ್ನಬರ್ದುಂಕೀ |
ಹಗರಣಕೆ ಬಂದುದೇ ಹಾ |
ಜಗದೊಳ್ನಾರಿಯರ ಜನ್ಮವೇ ಬಹುನಿಂದ್ಯಂ ||೧೩||

---

* | ರಾಗ | ನಾದನಾಮಕ್ರಿಯೆ | ತಾಳ | ಮಿಶ್ರಛಾಪು ||
(ಪೋಪೊಮ್ಮನೇಚಲಿಯಾ ಎಂಬಂತೆ)

ಈ ಜನ್ಮವೇ ಕೆಟ್ಟುದು | ಹಾ | ಸ್ತ್ರೀಜನ್ಮವೇ ಕೆಟ್ಟುದು | ಹಾಹಾ ||ಪ|| ದುಃಖ | ಭಾಜನವಾಗಿಹುದು | ಸತ್ಯವಿದು ||ಅ|| ಕಡುಕಷ್ಟದಶೆಯನ್ನು | ಪಡೆದಿಹಪತಿಯನ್ನು | ಅಡವಿಯೊಳಗಲಿಯೂ | ಹಾ | ಜೀವಿಪನ | ನ್ನೀಜನ್ಮವೇ ಕೆಟ್ಟುದು ||೧|| ಮಕ್ಕಳತೊರೆದಗ | ಲ್ದಕ್ಕಟ ಪತಿಯನ್ನು | ದಿಕ್ಕಿಲ್ಲದವಳಂತೆ | ಹಾ | ದುಃಖಿಸುವೆ | ನ್ನೀಜನ್ಮವೇ ಕೆಟ್ಟುದು ||೨|| ಗಂಡನ ನಗಲಿದ | ಹೆಂಡಿರುಜೀವಿಸಿ | ಕೊಂಡಿರಬಲ್ಲರನು | ಹಾ | ಖಂಡಿತವಿ | ದೀಜನ್ಮವೇ ಕೆಟ್ಟುದು ||೩||

ಕೈಹಿಡಿದ ಗಂಡನು ಬಿಟ್ಟಮೇಲೆ ಬದುಕಿರಬಾರದು, ಬದುಕಿರಬಾರದು. ಇನ್ನು ನನ್ನ ಪತಿಯನ್ನು ಎಲ್ಲಿತಾನೇ ಹುಡುಕಲಿ? ಈ ನಿರ್ಜನವಾದ ಅರಣ್ಯದಲ್ಲಿ ಯಾರನ್ನುತಾನೇ ಕೇಳಲಿ? ಒಳ್ಳೇದು, ಈ ಮರಗಳನ್ನೇ ಕೇಳುವೆನು.

* ಕಂ|| ಮರಗಿಡುಗಳಿ ಬೇಡುವೆನೆನ |
ಗಂಪಿಲರಣ್ಯಾದಿಮಲಂಗಿ ಸಿದ್ರಿಸುತುಂ ಮಿ |
ಯ್ಮರೆದಿರ್ದೆನ್ನನಗಲ್ದೆ |
ನ್ನರಸಂ ನಳರಾಜಸಿಂಹನೆತ್ತಂಪೋದಂ ||೧೪||

ಪುನ್ನಾಗಭೂರುಹನೆ ನೀ |
ನೆನ್ನೊಳ್ದಯಗೂಡಿ ಪೇಳ ನಿನ್ನಂತೆವಲಂ |
ಪುನ್ನಾಗನ ನೆನ್ನಯ ಮನ |
ದನ್ನನ ನೀ ಗಹನಮಾರ್ಗದೊಳ್ನೋಡಿದೆಯೇಂ ||೧೫||

ದಯದೋರಶೋಕವೇ ಮ |
ತ್ಪ್ರಿಯನೆತ್ತಂ ತಳರ್ದ ನೀಯರಣ್ಯದೆ ಪೇಳೆ |
ನ್ನಯ ಶೋಕಮಂ ಬಿಡಿಸೆ ನಿ |
ನ್ನಯಪೆಸರಿಳೆಯೊಳಿದು ಸಾರ್ಥಕಂ ತಾನಕ್ಕುಂ ||೧೬||

ಸುರಸಾಲವೆ ನೀನಾದೊಡ |
ಮರಿಪೆನಗೊಲ್ದರ್ಥಿಗಳ್ಗೆ ಸುರಸಾಲಂ ತ |
ನ್ನರಸಂ ನಿಷಧಕ್ಷೋಣೀ |
ಶ್ವರನೆಯ್ದಿದಮಾರ್ಗವಾವುದೀ ಕಾನನದೊಳ್ ||೧೭||

---

*|| ರಾಗ | ಅಸಾವೇರಿ | ತಾಳ | ತ್ರಿಶ್ರಛಾಪು ||
(ವಲಪುದಾಚನಾ ಎಂಬಂತೆ)

ಬೇಡಿಕೊಂಬೆನಿಮ್ಮನು | ಪೇಳಿರೈ | ಬೇರೊಂದಕಾಣೆನು | ಪೇಳಿರೈ ||ಪ|| ಕಾಡೊಳೆನ್ನನು ಬಿ | ಟ್ಟೋಡಿದ ನಳನನ್ನು ಹಾ | ನೋಡಲಿಲ್ಲವೆ ನೀವು | ಈಗ | ನೋಡಲಿಲ್ಲವೆ ನೀವು | ಪೇಳಿರೈ ||ಅ|| ಪುನ್ನಾಗವೆ ಕೇಳು | ನಿನ್ನವೊಲವನೂ | ಪುನ್ನಾಗನೆನಿಸಿರ್ಪನು | ಮಹಿತ | ಪುನ್ನಾಗನೆನಿಸಿರ್ಪನು | ಪೇಳಿರೈ ||೧|| ಮುನ್ನವ ಶೋಕವೆ | ಎನ್ನಶೋಕವನೂಂಕೆ | ಹಾ | ನಿನ್ನನಾಮವು ಯೋಗ್ಯವಹುದು | ಈ ನಿನ್ನನಾಮವು ಯೋಗ್ಯವಹುದು | ಪೇಳಿರೈ ||೨|| ಸುರಸಾಲವೆನೀ ಕಂ | ಡರಿದೆಯ ದೀನರ್ಗೆ | ಸುರಸಾಲನನಳನೃಪನ | ಆ | ಸುರಸಾಲನನಳನೃಪನ | ಪೇಳಿರೈ ||೩||

(ಹಾಗೇ ನೋಡಿ) ಅಯ್ಯೋ ! ಇವು ಯಾವುವೂ ನನ್ನ ಮಾತಿಗೆ ಉತ್ತರವನ್ನೇ ಕೊಡುವುದಿಲ್ಲವಲ್ಲಾ ! ಇನ್ನೇನಕಾನೇನಮಾಡಲಿ ? ಪ್ರಿಯನೇ, ಪ್ರಿಯನೇ, ನನ್ನಸಂಗಡ ಏತಕ್ಕೆ ಮಾತನಾಡದೆ ಇರುವೆ ? ಹಾ ! ಆರ್ಯ ಪುತ್ರನೆ, ನನ್ನನ್ನು ಬಿಟ್ಟು ಎಲ್ಲಿಹೋದೆ ? ನಿನ್ನನ್ನು ಬಿಟ್ಟು ನಾನು ಹೇಗೆ ಜೀವಿಸಲಿ? ಮುಂದೆ ನನಗೇನುಗತಿ? ಹಾ ! ಈಗ ನಾನು ಇನ್ನೆಲ್ಲಿಹೋಗಲಿ ? (ನೋಡಿ) ಇತ್ತಲಾಗಿ ದೂರದಲ್ಲಿ ಯಾವುದೋ ಒಂದು ಋಷ್ಯಾಶ್ರಮವು ಕಾಣಿಸುವಂತಿದೆ ; ಅಲ್ಲಿಗೆ ಹೋಗಿ ವಿಚಾರಿಸುವೆನು. (ತೆರಳದಳು)

ಋಷ್ಯಾಶ್ರಮ.

(ಋಷಿಗಳ ಪ್ರವೇಶ)

ಋಷಿಗಳು—

†|| ತೋಟಕ || ಎಲೆಮಾನಸ ಮಾನವರೂಪವನಾಂ |
ತಿಳಿಯೊಳ್ರಘುರಾಮಸಮಾಹ್ವಯಮುಂ |
ತಳೆದುದ್ಭವಮುಂ ಪಡೆದಾತ್ಮನೊಳೇ |
ನೆಲೆಗೊಂಡಿರುಸೀಂ ಬಿಡದಾವಗಮುಂ ||೧೮||
ಲಲನಾಮಣಿಭೂಮಿಸುತಾ ಸಖನೊಳ್ |
ಖಲರಾಕ್ಷಸವಂಶದವಾನಲನೊಳ್ |
ನಳಿನೇಕ್ಷಣನೊಳ್ಕರುಣಾರ್ಣವನೊಳ್ |
ನೆಲೆಗೊಂಡಿರುಸೀಂ ಬಿಡದಾವಗಮುಂ ||೧೯||

ದಮ—(ಭಯಭಕ್ತಿಗಳಿಂದ, ಪ್ರಲಾಪಿಸುತ್ತ ಮೆಲ್ಲಗೆ ಪ್ರವೇಶಿಸುವಳು)

ಹಾರೀತ—(ನೋಡಿ ವಿನಯದಿಂದ) ಶ್ರೀಗುರು ಸನ್ನಿಧಿಯಲ್ಲಿ ವಿಜ್ಞಾಪನೆ, ಇತ್ತಲಾಗಿ ಯಾವಳೋ ಒಬ್ಬ ಹೆಂಗುಸು ಪ್ರಲಾಪಿಸುತ್ತಾ ಬರುತ್ತಿರುವಳು.

---

†|| ರಾಗ | ಜಂಝೂಟಿ | ಏಕತಾಳ || (ನಂದನಚುಟಕಿ ಎಂಬಂತೆ)

ಮಾನಸವಸರೇ | ಭುವನಾಧಾರೇ | ಮಾನವರೂಪಧರೇಶ್ವರೇ ||ಪ|| ಪರಮ ದಯಾಕರೇ | ಪಾಪವಿದೂರೇ | ಶರಣಾಗತಜನಮಂದಾರೇ ||೧|| ವನರುಹಭವಕೃತ | ವಿನುತಿಪರಂಪರೇ | ಏನಿಹತಖಲರಾಕ್ಷಸವಾರೇ ||೨|| ರಾಮಾಹ್ವಯಧರೇ | ಭೂಮಿಸುತಾವರೇ | ಶ್ಯಾಮಳತನುರುಚಿ ರಣಧೀರೇ ||೩||

ಗುರು—(ನೋಡಿ) ಎಲೈ ಹಾರೀತನೆ, ಆಕೆ ಪುಣ್ಯಚರಿತ್ರನಾದ ನಳಮಹಾರಾಜನ ಧರ್ಮಪತ್ನಿ; ದಮಯಂತಿಯೆಂಬವಳು; ಮಹಾ ಪತಿವ್ರತೆ. ಆ ದಂಪತಿಗಳಿಗೆ ಕಲಿಬಾಧೆಯಿಂದ ಈಗ ಬಹಳ ಕಷ್ಟದಶೆ ಬಂದಿರುವುದು. ಇದನ್ನೆಲ್ಲಾ ನಾವು ಯೋಗದೃಷ್ಟಿಯಿಂದ ತಿಳಿದೆವು. ಒಳ್ಳೇದು, ಆಕೆಯನ್ನು ಬರಹೇಳು. (ಎಲ್ಲರೂ ಕರುಣೆಯಿಂದ ನೋಡುವರು)

ಹಾರೀತ—ಇತ್ತಲಾಗಿ ಬಾಮ್ಮಾ, ಇತ್ತಲಾಗಿ ಬಾ.

ದಮ—(ಭಕ್ತಿಯಿಂದ ತಲೆಬಾಗಿ) ಪೂಜ್ಯರೆ, ಇದೊ ಬಂದೆ. (ಮೆಲ್ಲಗೆ ಬಂದು) ಮಹಾತ್ಮರಿಗೆ ವಂದಿಸುವೆನು.

ಗುರು—ಎಲೆ ಮಗಳೆ, ನಿನಗೆ ಮಂಗಳವಾಗಲಿ. ನೀನು ವ್ಯಸನಪಡಬೇಡ; ಈ ಮಾರ್ಗವು ಚೇದಿದೇಶಕ್ಕೆ ಹೋಗುವುದು. ನೀನು ಅಲ್ಲಿಗೆ ಹೋಗಿ ಚೇದಿರಾಯನ ಅರಮನೆಯಲ್ಲಿ ಕೆಲವುಕಾಲ ಅಜ್ಞಾತವಾಸವನ್ನು ಮಾಡಿಕೊಂಡಿರು. ಮುಂದೆ ನಿನಗೆ ಒಳ್ಳೇ ಸುಖಕಾಲವು ಪ್ರಾಪ್ತವಾಗುವುದು. ಇದನ್ನು ನಾವು ತಪಶ್ಶಕ್ತಿಯಿಂದ ಬಲ್ಲೆವು.

ದಮ—ಪೂಜ್ಯರೆ, ಪರಮಾನುಗ್ರಹ: ತಮ್ಮಪ್ಪಣೆಯಾದಂತೆ ನಡೆದುಕೊಳ್ಳುವೆನು.

ಗುರು— ಕಂ॥ ಎಲೆಮಗಳೇ ನಿನ್ನಯಪತಿ |
ಕಲಿಯಿಂದಂ ಬಿಡಿಸಿಕೊಂಡುಗೆಲ್ದಾಹಗೆಯಂ |
ಸಲಹುವನೀ ಧರಣೀಮಂ |
ಡಲಮಂ ನಿನ್ನೊಡನೆ ಶೀಘ್ರದಲ್ಲಿಯೆ ಸುಖದಿಂ ||೨೦||

(ಆಶ್ರಮವು ಅಂತರ್ಧಾನವಾಯಿತು)

ದಮ—(ನೋಡಿ ಆಶ್ಚರ್ಯಪಟ್ಟು, ಬೆಚ್ಚಿ) ಇದೇನು! ನನಗೇನಾದರೂ ಸ್ವಪ್ನವಾಯಿತೆ? ಹೀಗೆಲ್ಲಾ ಆಗುವುದಕ್ಕೆ ಕಾರಣವೇನು? ಆ ಆಶ್ರಮವೆಲ್ಲಿ? ಆ ಋಷಿಗಳೆಲ್ಲಿ? ಮನೋಹರವಾಗಿ ಹರಿಯುತ್ತಿದ್ದ ಆ ಪುಣ್ಯನದಿಯೆಲ್ಲಿ ಹೋಯಿತು? ಪುಷ್ಪಗಳಿಂದಲೂ ಫಲಗಳಿಂದಲೂ ಭರಿತವಾಗಿದ್ದ ಆ ವೃಕ್ಷಗಳು ಎಲ್ಲಿ ಮರೆಯಾದುವು? ಆಹಾ!

ಏನೋ ಪರಮಾಶ್ಚರ್ಯವಾಗಿದೆ. (ಸ್ವಲ್ಪ ಯೋಚಿಸಿ) ಹಾಗೇ ನೋಡಿದರೆ, ಇದೇನೋ ನನಗೆ ಶುಭಸೂಚಕವಾದ ದೈವಾನುಗ್ರಹದಂತೆ ತೋರುವುದು. ಒಳ್ಳೇದು, ಈಗ ಆ ತಪೋವನದಲ್ಲಿದ್ದ ಕುಲಗುರುಗಳು ಅಪ್ಪಣೆ ಕೊಟ್ಟಿರುವಂತೆ ಈ ಮಾರ್ಗದಲ್ಲೇ ಚೇದಿನಗರವನ್ನು ವಿಚಾರಿಸಿಕೊಂಡು ಹೋಗುವೆನು. (ಸ್ವಲ್ಪ ನಡೆದು, ನೋಡಿ) ಓಹೋ! ಇತ್ತಲಾಗಿ ನದಿಯನ್ನು ದಾಟಿಕೊಂಡು ಯಾವುದೂ ಒಂದು ಜನಗಳ ಗುಂಪು ಬರುತ್ತಿರುವುದು. ಅವರು ಎತ್ತಲಾಗಿ ಹೋಗುವರೋ ವಿಚಾರಿಸುವೆನು.

(ಸುಜವಾಸನಾದ ಶುಚಿಯೊಡನೆ ವರ್ತಕರು ಬರುವರು)

ದಮ—ಅಯ್ಯಾ, ನೀವು ಯಾರು?

ವರ್ತಕರು—(ಹಿಂಜರಿದು ಅಲ್ಲಲ್ಲಿ ನಿಲ್ಲುವರು)

ಶುಚಿ—ಎಲೌ ಮಂಗಳಾಂಗಿಯೆ, ನಾವು ವರ್ತಕರು. ಚೇದಿ ದೇಶದಲ್ಲಿ ಲಾಭವನ್ನು ಸಂಪಾದಿಸುವುದಕ್ಕೋಸ್ಕರ ಹೋಗುತ್ತಿದ್ದೇವೆ. ನೀನು ಯಾರು? ಮನುಷ್ಯಳೊ? ಯಕ್ಷಿಯೋ? ರಾಕ್ಷಸಿಯೋ? ಈ ಅರಣ್ಯದಲ್ಲಿ ಒಬ್ಬಳೇ ಇರುವುದಕ್ಕೆ ಕಾರಣವೇನು?

ದಮ—ಅಯ್ಯಾ, ನಾನು ಯಕ್ಷಿಯೂ ಅಲ್ಲ, ರಾಕ್ಷಸಿಯೂ ಅಲ್ಲ. ಮನುಷ್ಯಳು. ಈ ಕಾಡಿನಲ್ಲಿ ನನ್ನ ಪತಿಯು ನನ್ನನ್ನು ಅಗಲಿದನು. ನಾನು ಎಲ್ಲೆಲ್ಲಿ ಹುಡುಕಿದರೂ ಆತನು ಸಿಕ್ಕಲಿಲ್ಲ. ಈ ಮಾರ್ಗದಲ್ಲೇನಾದರೂ ಸಿಕ್ಕಿಯಾನೇನೋ ಎಂದು ಹುಡುಕಿಕೊಂಡು ಹೋಗುತ್ತಿರುವೆನು. ಅರ್ಧ ವಸ್ತ್ರವನ್ನು ಧರಿಸಿಕೊಂಡಿದ್ದ ಆತನನ್ನು ನೀವು ಬಂದ ಮಾರ್ಗದಲ್ಲೇನಾದರೂ ಕಂಡಿರಾ?

ಶುಚಿ—ಎಲೌ ಮಂಗಳಾಂಗಿಯೆ, ನಾವು ಬಂದ ದಾರಿಯಲ್ಲಿ ಆನೆ, ಸಿಂಹ, ಹುಲಿ, ಕರಡಿ, ಮೊದಲಾದ ಮೃಗಗಳನ್ನು ಮಾತ್ರ ನೋಡಿದೆವು. ಇಲ್ಲಿ ನಿನ್ನೊಬ್ಬಳನ್ನು ಹೊರತಾಗಿ ಮತ್ತೆ ಯಾವ ಮನುಷ್ಯಮಾತ್ರದವನನ್ನೂ ನಾವು ನೋಡಲಿಲ್ಲ. ಯಕ್ಷಾಧಿಪತಿಯಾದ ಮಣಿಭದ್ರಸ್ವಾಮಿಯು ನಮ್ಮನ್ನೆಲ್ಲಾ ರಕ್ಷಿಸಲಿ. (ತಮ್ಮವರನ್ನು ನೋಡಿ)

ಎಲ್ಲರೂ ನಡೆಯಿರಿ, ನಡೆಯಿರಿ. ಹೊತ್ತಾಯಿತು. ಮುಂದೆ ಹೋಗೋಣ. ನಮ್ಮ ಆನೆಗಳೂ, ಕುದುರೆಗಳೂ, ಒಂಟೆಗಳೂ, ಬಂಡಿಗಳೂ ಎಲ್ಲಾ ಜಾಗ್ರತೆಯಾಗಿ ಹಿಂದೆ ಬರಲಿ.

ವರ್ತಕರು—ಇದೋ ಜಾಗ್ರತೆಯಾಗಿಯೇ ಬರುತ್ತಾ ಇವೆ. ನಾವು ಮುಂದೆ ಹೋಗೋಣ. (ಹೊರಟರು)

ದಮ—ನಾನೂ ಇವರನ್ನೇ ಅನುಸರಿಸಿಕೊಂಡು ಚೇದಿನಗರಕ್ಕೆ ಹೋಗುವೆನು. (ತೆರಳಿದಳು)

ಶುಚಿ—(ವರ್ತಕರೊಡನೆ ಪ್ರವೇಶಿಸಿ) ಎಲೈ ಧನೇಶನೆ, ಸಾಯಂಕಾಲವಾಯಿತು. ಇದೋ ಮುಂದೆ ಕಾಣುವುದೇ ಪದ್ಮಸೌಗಂಧಿಕ ಸರೋವರವು.

ಕಂ|| ನಳನಳಿಪ ತೃಣೋತ್ಕರದಿಂ |
ಫಳತರುತತಿಯಿಂದೆ ಕಾಷ್ಠಸಂಚಯದಿಂ ನಿ |
ರ್ಮಳಜಲದಿಂ ಕೂಡಿರ್ಪೀ |
ಸ್ಥಳನೆಮಗನುಕೂಲವಾಗಿ ತೋರ್ಪುದು ತಂಗಲ್ ||೨೧||

ಆದಕಾರಣ ಈ ಸರೋವರದ ತೀರದಲ್ಲೇ ಈ ರಾತ್ರಿಯನ್ನು ಕಳೆಯೋಣ. ಇದರ ಪಶ್ಚಿಮಭಾಗದಲ್ಲಿ ನಮ್ಮ ವರ್ತಕರೆಲ್ಲಾ ಇಳಿದುಕೊಳ್ಳಲಿ. ಆ ಸ್ಥಳದ ಎದುರಿಗೇ ಸುಮಾರು ನೂರುಮಾರು ದೂರದಲ್ಲಿ ನಮ್ಮ ಆನೆಗಳೂ, ಕುದುರೆಗಳೂ, ಒಂಟೆಗಳೂ, ಬಂಡಿಗಳೂ ಇಳಿಯಲಿ. ಈಗ ಬೆಳಕಿರುವಾಗಲೇ ನಮ್ಮ ಕಾಲ್ನಡೆಗಳಿಗೆಲ್ಲಾ ಹುಲ್ಲೂ, ಸೊಪ್ಪೂ, ತಿಂಡೀ, ಕೊಟ್ಟು ನೀರು ತೋರಿಸಿ ಕಟ್ಟುವುದು. ಆಮೇಲೆ ಗಾಢಾಂಧಕಾರವು ಕವಿಯುಬಿಡುವುದು. ನೀವೆಲ್ಲರೂ ರಾತ್ರಿ ನಿಯಮವನ್ನು ತೀರಿಸಿಕೊಂಡು ವ್ಯಾಪಾರದ ಸರಕುಗಳನ್ನೆಲ್ಲಾ ರಾಶಿರಾಶಿಯಾಗಿಡಿಸಿಕೊಂಡು, ಸುತ್ತಲೂ ಮಲಗಿರಬೇಕು. ನಾನೂ ನಿಮ್ಮಗಳ ಮಧ್ಯದಲ್ಲೇ ಮಲಗಿರುವೆನು. ನಾಳೆ ಹೊತ್ತಿಗೆ ಮುಂಚೆ ಇಲ್ಲಿಂದ ಮುಂದಕ್ಕೆ ಹೊರಡಬೇಕು.

ವರ್ತಕರು—ಸ್ವಾಮಿಯ ಅಪ್ಪಣೆಯಾದಂತಾಗಲಿ. (ತೆರಳಿದರು)

ದಮ—ನಾನೂ ಇತ್ತಲಾಗಿ ದೂರವಾಗಿ ಈ ಮರದ ಕೆಳಗೆ ಮಲಗಿರುವೆನು. (ತೆರಳಿದಳು)

ಅರ್ಧರಾತ್ರಿಯ ಸಮಯ.

ತೆರೆಯಲ್ಲಿ—(ಏಕಕಾಲದಲ್ಲಿ ಆನೆಗಳು ಘೀಳಿಡುವುವು, ಕುದುರೆಗಳೋಡಾಟದ ಸದ್ದಾಗುವುದು, ಜನಗಳು ಹಾಹಾಕಾರ ಮಾಡುವರು)

೧ ನೇ ವರ್ತಕ—(ಮಲಗಿದ್ದಹಾಗೆ ತ್ವರೆಯಿಂದ ಓಡಿಬಂದು) ಹಾ! ಹಾ! ಎಲ್ಲರೂ ಏಳಿ, ಏಳಿ! ಇತ್ತಲಾಗಿ ಬನ್ನಿ! ಬನ್ನಿ!

ವರ್ತಕರು—(ಮಲಗಿದ್ದಹಾಗೆ ಭಯಸಂಭ್ರಮದಿಂದ ಓಡಿಬಂದು) ಏನು? ಏನು? ಏನು?

೧ ನೇ ವರ್ತಕ—ಅಯ್ಯೊ! ಅಯ್ಯೊ! ಕಾಡಾನೆಗಳ ಗುಂಪು ಬಂದು ನಮ್ಮಾನೆಗಳ ಸಂಗಡ ಹೋರಾಡುತ್ತಾ ಗದ್ದಲಮಾಡುತ್ತಿವೆ. ನಮ್ಮ ಕುದುರೆಗಳೆಲ್ಲಾ ಕಿತ್ತುಕೊಂಡು ಓಡಾಡುತ್ತಿವೆ. ಆ ಗಲಭೆಯಲ್ಲಿ ಸಿಕ್ಕಿದ ಆಳುಗಳು ಹತರಾದರು. ಇತ್ತಲಾಗಿ ಬನ್ನಿ, ಬನ್ನಿ!

ತೆರೆಯಲ್ಲಿ—(ಮೊದಲಿನಂತೆ ಗದ್ದಲವಾಗುವುದು)

೨ ನೇ ವ—(ಓಡಿ ಬಂದು) ಅಯ್ಯೊ! ಅಯ್ಯೊ! ಆನೆಗಳು ನುಗ್ಗಿ, ಇತ್ತಲಾಗಿ ಮಲಗಿದ್ದ ಕೆಲವರನ್ನು ತುಳಿದುಬಿಟ್ಟುವು. ನಮ್ಮ ಸ್ವಾಮಿಯೆಲ್ಲಿ? ಹಾ! ಹಾ!

ವರ್ತಕರು—ಅಯ್ಯೊ! ಚಿಕ್ಕಪ್ಪಾ! ಚಿಕ್ಕಪ್ಪಾ!
ಅಯ್ಯೊ! ತಮ್ಮಾ! ತಮ್ಮಾ!
ಅಯ್ಯೊ! ಅಣ್ಣಾ! ಅಣ್ಣಾ!
ಅಯ್ಯೊ! ಬಾವಾ! ಬಾವಾ!

(ಎಲ್ಲರೂ ದೊಂಬಿಮಾಡುತ್ತಾ ಗೋಳಾಡುವರು)

ದಮ—(ಭಯಸಂಭ್ರಮದಿಂದ ಬಂದು) ಅಯ್ಯೊ! ಇದೇನುಕೇಡೋ ಕಾಣೆನಲ್ಲಾ! ಇತ್ತಲಾಗಾದರೂ ತಪ್ಪಿಸಿಕೊಂಡು ಹೋಗುವೆನು.

(ತೆರಳಿದಳು)

ಕುಚಿ—(ಓಡಿ ಬಂದು) ಹಾ! ಹಾ! ಎಲ್ಲರೂ ಇತ್ತಲಾಗಿ ಓಡಿಬನ್ನಿ, ಓಡಿಬನ್ನಿ! ಇಲ್ಲಿ ಬೆಂಕಿಯನ್ನು ಒಟ್ಟಿಸಿದೇನೆ. ಹೊದೆಗಳನ್ನು ಹೊತ್ತಿಸಿರಿ, ಹೊತ್ತಿಸಿರಿ!

೩ ನೇ ವ—ಹೋ ! ಹೋ ! ಕಾಡಾನೆಗಳೆಲ್ಲಾ ಓಡಿಹೋದುವು. ನಿಲ್ಲಿ, ನಿಲ್ಲಿ.

(ಕಾಡುಗಿಚ್ಚು ಹೊತ್ತುವುದು)

೪ ನೇ ವ—ಅಯ್ಯೋ ! ಅಯ್ಯೋ ! ಇತ್ತಲಾಗಿ ಕಾಡುಗಿಚ್ಚು ಹೊತ್ತಿತು. ಇದೋ ನೋಡಿರಿ. ನಮ್ಮ ರತ್ನಗಳನ್ನು ತುಂಬಿರುವ ಪೆಟ್ಟಿಗೆಗಳು ಉರಿಗೆ ಸಿಕ್ಕಿಬಿಟ್ಟವೆ. ಇತ್ತಲಾಗಿಎಳೆದುಕೊಳ್ಳಿರಿ, ಎಳೆದುಕೊಳ್ಳಿರಿ.

ಕುಚೆ—ಅಯ್ಯೋ ! ಅಯ್ಯೋ ! ಇನ್ನೇನುಗತಿ ! ನಾವೆಲ್ಲಾ ಮುಳುಗಿಹೋದೆವು. ಬೇಗ ಬನ್ನಿ, ಬೇಗ ಬನ್ನಿ ! ಪೆಟ್ಟಿಗೆಗಳನ್ನೂ, ಗಟ್ಟಿಗಳನ್ನೂ ತೆಗೆಯಿರಿ, ತೆಗೆಯಿರಿ ! ಇತ್ತಲಾಗಿ ಎಳೆದುಕೊಳ್ಳಿರಿ. ಬೇಗ ಬನ್ನಿ ! ಬೇಗ ಬನ್ನಿ ! ಅತ್ತಲಾಗಿ ಹೊಗೋಣ. (ತೆರಳಿದರು)

ದಮ—(ಭಯಸಂಭ್ರಮದಿಂದ ಬಂದು) ಅಯ್ಯೋ ! ಅಯ್ಯೋ ! ಇತ್ತಲಾಗಿ ಕಾಡುಗಿಚ್ಚು ಬೇರೆ ಹೊತ್ತಿತಲ್ಲಾ ! ಇನ್ನೇನುಗತಿ ?

* ಕಂ|| ತನುಜಾತರ ದೂರಸ್ಥಿತಿ |
ವನವಾಸಂ ಪತಿಯಗಲ್ಕೆಯಿನಿತಲ್ಲದೆ ಬೇ |
ರೆನೆಗೆ ನೆರವಾದವರ್ತಕ |
ಜನಕಿಂತಾಗುವರೆ ಕೇಡು ಮದ್ದುರ್ವಿಧಿಯಿಂ ||೨೨||

ಅತ್ತಲಾಗಾದರೂ ಹೋಗುವೆನು. (ಹೊರಟು ನೋಡಿ) ಓಹೋ ! ಈ ವರ್ತಕರ ಯಜಮಾನನು ತಮ್ಮವರೊಡನೆ ಬಹಳವಾಗಿ ಚಿಂತಿಸುತ್ತಾ ಇತ್ತಲಾಗಿ ಬರುತ್ತಿರುವನು. ಇವರೆದುರಿಗೆ ನಾನಿರುವುದು ಸರಿಯಲ್ಲ. ಈ ಮರಗಳ ಗುಂಪಿನಲ್ಲಿ ಮರೆಯಾಗುವೆನು. (ಮರೆಯಾದಳು)

(ಕಾಡುಗಿಚ್ಚು ಆರಿತು)

---

*|| ರಾಗ | ಯಮನ್ ಕಲ್ಯಾಣಿ | ತಾಳ | ಮಿಶ್ರಛಾಪು ||
(ಹಾಸುತೆ ನಿನ್ನಬಿಟ್ಟು ಎಂಬಂತೆ)

ಏನಿದಿಂತತಿಘೋರ | ಹಾನಿಯಾಯ್ತಾಹಾ ||ಪ|| ಅರಿರಾಜ್ಯವನಪ | ಹರಿಸಲ್ಕೆ ಕಾಡಿಗೆ | ಪರಿತಂದೀಭಯಪರಂ | ಪರೆಗೀಡಾದೆನೆಹಾ ||೧|| ಅಕಟಾ ಎನ್ನಪಾತಕದಿಂದಕೇಡಿಂತು | ಪ್ರಕಟಿತವಾಯ್ತು ವ | ರ್ತಕಸಂಘದೊಳುಹಾ ||೨|| ಹತದೈವದಗನ್ನ | ಗತಕಕ್ಕದೊಂದೂ | ಪ್ರತಿಕೃತಿಯೇ ಎನ್ನ | ಮತಿಗೆ ತೋರದುಹಾ||೩||

ಕುಚೆ—(ವರ್ತಕರೊಡನೆ ಪ್ರವೇಶಿಸಿ) ಇನ್ನುಯಾರೂ ಭಯಪಡಬೇಡಿ, ಕಾಡು ಗಿಚ್ಚು ಶಾಂತವಾಯಿತು. ಎಲೈ ಧನಕೋಟಿಯೆ, ನಮಗೆ ಯಾವಾ ಗಲೂ ಇಲ್ಲದ ಇಂತಹ ಕೇಡುಂಟಾಗುವುದಕ್ಕೆ ಕಾರಣವೇನು ?

ಧನಕೋಟಿ—ಸ್ವಾಮಿಯೆ, ನಾವು ಬರುವಾಗ ದಾರಿಯಲ್ಲಿ ನಿಂತಿದ್ದ ಆ ಹೆಂಗುಸು ಯಾವ ಯಕ್ಷಿಯೋ, ರಾಕ್ಷಸಿಯೋ, ಪಿಶಾಚಿಯೋ ಗೊತ್ತಿಲ್ಲ. ಅವಳು ನಮ್ಮ ಹಿಂದೆಯೇ ಬಂದಳು. ಅವಳ ಮಾಯೆಯಿಂದಲೇ ಹೀಗೆಲ್ಲಾ ಆಗಿರುವುದೆಂದು ನನಗೆ ತೋರುವುದು.

ಒನೇ ವ—ಈಗ ಅವಳೇನಾದರೂ ನಮ್ಮ ಕೈಗೆ ಸಿಕ್ಕಿದರೆ ನಮ್ಮ ಗುಂಪನ್ನೇ ನಾಶಮಾಡಿದ ಅವಳಮೇಲೆ ಧೂಳನ್ನು ಹುಯ್ದು ತೃಣಕಾಷ್ಠಗ ಳಿಂದಲೂ, ದೊಣ್ಣೆಗಳಿಂದಲೂ ಹೊಡೆದು ದುರ್ದೇವತಾಸ್ವರೂಪ ಳಾದ ಅವಳನ್ನು ಇಲ್ಲೇ ಸಂಹರಿಸಿಬಿಡುವೆವು.

ಕುಚೆ—ಸ್ವಲ್ಪ ಸಿಧಾನಿಸಿರಿ. (ಯೋಚಿಸುವನು)

ದಮ—(ಕೇಳಿ, ಮರೆಯಲ್ಲಿ) ಅಯ್ಯೋ ! ಇವರ ಕಣ್ಣಿಗೆ ಬಿದ್ದರೆ, ಈ ಘಾತು ಕರು ನನ್ನನ್ನು ಸಂಹರಿಸದೆ ಬಿಡುವುದಿಲ್ಲ. ಈಗಲೇ ಈ ಮರ ಗಿಡುಗಳ ಮರೆಯಲ್ಲಿ ಇನ್ನೊಂದು ಕಾಡಿಗೆ ಓಡಿಹೋಗುವೆನು.

(ತ್ವರೆಯಿಂದ ತೆರಳುವಳು)

ಕುಚೆ—ಎಲೈ ಬಿಲಬಿಲನೆ, ಆ ಹೆಂಗುಸು ಯಾವಳಾದರೂ ಆಗಲಿ. ನಾವು ವರ್ತಕರಾಗಿ ಅಂತಹ ಘಾತುಕಕೃತ್ಯಕ್ಕೆ ಪ್ರವರ್ತಿಸಬಾರದು. ಇವರಮೇಲೆ ಸ್ತ್ರೀಹತ್ಯ ಮಾಡುವುದು ಬಹಳ ಕೆಟ್ಟಕೆಲಸ, ಬಹಳ ಕೆಟ್ಟಕೆಲಸ. ಮುಖ್ಯವಾಗಿ ನಾವು ಈಸಲ ಪ್ರಯಾಣ ಮಾಡು ವಾಗ ನಮ್ಮ ಕುಲದೇವತೆಯಾದ ಮಣಿಭದ್ರಸ್ವಾಮಿಯನ್ನೂ, ಕುಬೇರನನ್ನೂ ಪೂಜಿಸದೆ, ವ್ಯಾಪಾರಕಾಲವು ಮೀರಿಹೋಗುವು ದೆಂದು ತ್ವರೆಯಿಂದ ಹೊರಟು ಬಂದೆವು. ಈ ನಮ್ಮ ಅಪರಾಧವೇ ದಾರಿಯಲ್ಲಿ ಇಂತಹ ಕೇಡುಂಟಾಗುವುದಕ್ಕೆ ಕಾರಣವಾಯಿತೆಂದು ನನಗೆ ತೋರುವುದು ಇದರಮೇಲೆ ನಾವು ಹೊರಟಾಗ ಅಪಶಕು ನಗಳು ಬೇರೆ ಆದುವು ; ಅದೊಂದನ್ನೂ ಲಕ್ಷ್ಯಮಾಡದೆ ನಾವು ಧನಲಾಭವೊಂದರಲ್ಲೇ ದೃಷ್ಟಿಯನ್ನಿಟ್ಟುಕೊಂಡು ಹೊರಟುಬಂದೆವು.

ಲೋಕದಲ್ಲಿ ಯಾರೇ ಆಗಲಿ ಪೂರ್ವಾಚಾರವನ್ನೂ, ಹಿರಿಯರ ಮಾತನ್ನೂ ಮೀರಿ ನಡೆಯಬಾರದು.

ಕಂ|| ಆರುಂ ಲೋಕದೆ ಪೂರ್ವಾ |
ಚಾರಮುಮಂ ಹಿರಿಯರೊರೆವಹಿತವಾದಮುಮಂ |
ಮೀರುವುದು ತಕ್ಕುದಲ್ಲಂ |
ಮೀರಲ್ಕುಂವಾಗದಿಂದು ಕೇಡಿಂತು ದಿಟಂ ||೨೩||

ಇನ್ನು ಚಿಂತಿಸಿ ಫಲವಿಲ್ಲ. ಈಗ ಇಲ್ಲಾದರೂ ನಾವೆಲ್ಲರೂ ನಮ್ಮ ಯಕ್ಷಾಧಿಪತಿಯಾದ ಮಣಿಭದ್ರಸ್ವಾಮಿಯನ್ನು ಭಕ್ತಿಯಿಂದ ಪೂಜಿಸಿ ಪ್ರಾರ್ಥನೆ ಮಾಡಿಕೊಂಡು ಹೊರಡಬೇಕು. ನೀವೆಲ್ಲರೂ ವ್ಯಾಪಾರದ ಸರಕುಗಳನ್ನೆಲ್ಲಾ ನೋಡಿಕೊಂಡು ಇರಿಸಿಕೊಳ್ಳಿರಿ. ಅತ್ತಿತ್ತ ಕಿತ್ತುಕೊಂಡು ಹೋಗಿರುವ ಆನೆಗಳನ್ನೂ, ಕುದುರೆಗಳನ್ನೂ, ಒಂಟೆಗಳನ್ನೂ, ಎತ್ತುಗಳನ್ನೂ, ಒಂದು ಕಡೆಗೆ ಸೇರಿಸುವಂತೆ ಆಳುಗಳಿಗೆ ಆಜ್ಞಾಪಿಸಿರಿ. ನಾನೂ ಈ ವಿಪತ್ತಿನಿಂದ ದುಃಖಪಡುತ್ತಿರುವ ನಮ್ಮ ಜನಗಳನ್ನೆಲ್ಲಾ ಸಮಾಧಾನಪಡಿಸಿಕೊಂಡು ಪ್ರಯಾಣಕ್ಕೆ ಸಿದ್ಧನಾಗುವೆನು.

(ಎಲ್ಲರೂ ತೆರಳಿದರು)

ಪಮ--- (ಪ್ರವೇಶಿಸಿ)

* ಕಂ|| ಈವನಮತಿ ಭೀಕರಮೇ |
ಗೈವೆಂ ಮುಂದೆತ್ತಲೈದುವೇನೆನ್ನನದೇ |
ಕಾವನ ಕರಿಗಳ್ಸುತ್ತಳಿಯದೆ |
ತಾವುಳಿದುವೊ ತಿಳಿದೆನಳಿವು ಕಾಲಾಧೀನಂ ||೨೪||

---

* || ರಾಗ | ಕಾನ್ನಡ | ಏಕತಾಳ ||
(ಬನ್ನಿಲೇಕೆಗಾನಾಭೋಡೋ ಎಂಬಂತೆ)

ಆವಪಾಪ ಗೈದೆನೋ ನಾ | ನಾವಜನ್ಮದಲ್ಲಿಪಿಂದೆ ||ಪ|| ಈ ವಿಧಿಯೊಳು ದುಃಖಿಪೆನ್ನಾ | ಜೀವವೇಕೆಪೋಗದೋ ಹಾ ||೧|| ತುಳಿದುಕೊಂದುದಿಲ್ಲವೇಕೀ | ಹಳುವದಾನೆಗುಂಪದೆನ್ನಾ | ಅಳಿವುಕಾಲ ಬಂದಹೊರತೀ | ಯಿಳೆಯೊಳಾರ್ಗುಮಿಲ್ಲತಿಳಿದೇ ||೨|| ಮಾನಸವನು ಭೀತಿಗೊಳಿಪೀ | ಕಾನನದೊಳಗೆತ್ತಲೀಗ | ನಾನು ಪೋಪೆನಿಂತುಚಿಂತಾ | ಧೀನೆಯಾಗದೇಗೈದಪೆನು ||೩||

(ನೋಡಿ) ಓಹೋ ! ಇಲ್ಲೆಲ್ಲಾ ಆನೆಗಳೂ, ಕುದುರೆಗಳೂ, ಒಂಟೆಗಳೂ, ಹೋಗಿರುವಂತೆ ಅವುಗಳ ಹೆಜ್ಜೇ ಗುರುತು ಕಾಣಿಸುತ್ತಿರುವುದು. ಆ ವರ್ತಕರೆಲ್ಲಾ ಈ ಮಾರ್ಗವಾಗಿ ಮುಂದಕ್ಕೆ ಪ್ರಯಾಣ ಮಾಡಿರುವಹಾಗಿದೆ. ನಾನೂ ಈ ದಾರಿಯಲ್ಲೇ ಮುಂದಕ್ಕೆ ಹೊರಡುವೆನು. (ಹೊರಟು)

ತೆರೆಯಲ್ಲಿ—ಒಂಟೊಂಟಿಯಾಗಿ ಹಿಂದೆ ಯಾರೂ ನಿಲ್ಲದೆ ಎಲ್ಲರೂ ಗುಂಪಾಗಿ ಬನ್ನಿ. ಜನಧ್ವನಿಯಾಗುವುದು.

ದಮ—(ಕೇಳಿ, ನಿಂತು ಭಯದಿಂದ) ಅಯ್ಯೋ ! ಆ ವರ್ತಕರ ಗುಂಪು ನನ್ನನ್ನೇ ಅರಸಿಕೊಂಡು ಬಂದಹಾಗಿದೆಯಲ್ಲಾ ! ಇನ್ನೇನುಗತಿ ? ಒಳ್ಳೇದು. ಈ ಹೊದರಿನಲ್ಲಿ ಮರೆಯಾಗುವೆನು. (ಮರೆಯಾಗುವಳು)

(ಬ್ರಾಹ್ಮಣರ ಗುಂಪು ಪ್ರವೇಶಿಸಿ)

೧ ನೇ ಬ್ರಾ—ಎಲಾ ಮೈತ್ರೇಯನೆ, ಎಲ್ಲಿರುವೆಯೊ ? ಹಿಂದೆ ನಿಲ್ಲಬೇಡ ; ನಮ್ಮ ಜೊತೆಯಲ್ಲೇ ಬಾರೊ. ಇದು ಆನೇ ಕಾಡು, ಯಾರೂ ದಾರಿಯನ್ನು ಬಿಟ್ಟು ಅತ್ತಿತ್ತ ಚದರಬೇಡಿ. ಒಟ್ಟಿಗೆ ಬನ್ನಿ.

ದಮ--(ಕೇಳಿ ಮೆಲ್ಲಗೆ ಬಂದು ನೋಡಿ, ಆತ್ಮ) ಓಹೋ ! ಇವರು ವರ್ತಕರಲ್ಲ. ತೀರ್ಥಯಾತ್ರೆಗೆ ಹೋಗುತ್ತಿರುವ ಬ್ರಾಹ್ಮಣರು. ಇನ್ನು ನಿರ್ಭಯವಾಗಿ ಇವರನ್ನೇ ಅನುಸರಿಸಿಕೊಂಡು ನಾನು ಹೋಗುವೆನು. (ಸ್ವಲ್ಪ ಮುಂದೆ ಬಂದು) ಪೂಜ್ಯರಿಗೆ ವಂದಿಸುವೆನು.

೨ ನೇ ಬ್ರಾ—ನೀನು ಯಾರಮ್ಮಾ ? ಒಬ್ಬಳೇ ಕಾಡಿನಲ್ಲಿ ಏತಕ್ಕಿರುವೆ ?

ದಮ—ಸ್ವಾಮಿ ನಾನು ಕ್ಷತ್ರಿಯ ಸ್ತ್ರೀ ; ಏನೋ ಒಂದು ನಿಮಿತ್ತದಿಂದ ನನ್ನ ಪತಿಯೊಡನೆ ಈ ಕಾಡಿಗೆ ಬಂದೆನು. ಇಲ್ಲಿ ಆತನು ನನ್ನನ್ನು ಅಗಲಿದನು. ಎಲ್ಲೆಲ್ಲಿ ಹುಡುಕಿದರೂ ಸಿಕ್ಕಲಿಲ್ಲ. ಈಗ ನಾನು ಚೇದಿನಗರಕ್ಕೆ ಹೋಗಬೇಕಾಗಿರುವುದು. ನಿಮ್ಮಗಳ ಪ್ರಯಾಣವು ಎತ್ತಲಾಗಿಯೊ ?

೧ ನೇ ಬ್ರಾ—ಎಲೆ ಮಗಳೆ, ನಾವೂ ಚೇದಿನಗರಕ್ಕೇ ಹೋಗತಕ್ಕವರು. ನೀನು ಭಯಪಡಬೇಡ, ನಮ್ಮ ಹೆಂಗುಸರೂ ಇರುವರು. ನೀನೂ ಅವರ ಜೊತೆಯಲ್ಲೇ ಬಾ.

ದಮ—ನನಗೆ ಬಹಳ ಸಹಾಯವಾಯಿತು ; ಇದೋ ಬರುವೆನು.

೧ ನೇ ಬ್ರಾ—ಎಲಾ ಲಾಮಕಾಯನ, ಈಕೆಯೂ ನಮ್ಮ ಹೆಂಗುಸರ ಸಂಗಡ ಬರಲಿ, ಅವರಿಗೆ ಹೇಳು.

ಲಾಮ—ಹಾಗೇ ಆಗಲಿ. (ಹೆಂಗುಸರನ್ನು ನೋಡಿ) ಅಮ್ಮಾ, ಈಕೆಯೂ ನಿಮ್ಮ ಸಂಗಡಲೇ ಬರಬೇಕಂತೆ.

ಹೆಂಗುಸರು—ಬರಲಿ, ಬರಲಿ, ಅಮ್ಮಾ ನಮ್ಮ ಸಂಗಡ ಬಾ ; ನಮಗೂ ಮಾತನಾಡುವುದಕ್ಕೆ ಯಾರೂ ಇರಲಿಲ್ಲ.

ದಮ—ತಾಯಿ, ಇದೋ ಬರುವೆನು.

ಯಜ್ಞದತ್ತರು—ಸ್ವಾಮಿ ಸೂರ್ಯದತ್ತರೆ, ಇದೇನು! ಈಕೆ ಯಾರೋ, ಏನೋ, ಎಂಥವಳೋ, ಒಂದೂ ತಿಳಿಯದೆ ಸುಮ್ಮನೆ ಈಕೆಯನ್ನು ನಮ್ಮ ಜೊತೆಯಲ್ಲಿ ಕರೆದುಕೊಂಡು ಹೋಗುವುದು ಹೇಗೆ?

ಸೂರ್ಯದತ್ತರು—ಯಜ್ಞದತ್ತರೆ, ಕೇಳಿ.

ಕಂ|| ಈಕೆ ಪದಾಂಬುಜಲಕ್ಷ್ಮೀ |
ಲೋಕನದಿಂ ಮುಸುಕನಿಟ್ಟತಲೆಯಿಂ ಮಿತವಾ |
ದೀ ಕೋಮಲವಚನದಿಂ ನೀ |
ಲೋಕಕೆ ನಿಜವಂಶದುನ್ನತಿಯ ಸೂಚಿಸುವಳ್ ||೨೫||

ಆದಕಾರಣ ಈಕೆಯನ್ನು ನೋಡಿದರೆ ಸದ್ವಂಶದಲ್ಲಿ ಹುಟ್ಟಿದ ಪತಿವ್ರತೆಯಂತೆ ಕಾಣುವಳು. ಏನೋ ಒಂದು ಕಷ್ಟದಶೆಯಿಂದ ಅರಣ್ಯಪ್ರವೇಶ ಮಾಡಿರಬಹುದು.

ಯ| ದ—ಈಕೆಯ ಸ್ವರೂಪವನ್ನು ನೋಡಿದರೆ, ನೀವು ಹೇಳಿದಂತೆಯೇ ತೋರುವುದು ; ಆದರೆ-ಗಂಡನು ಈ ಮಹಾರಣ್ಯದಲ್ಲಿ ಈಕೆಯನ್ನು ಅಗಲುವುದಕ್ಕೆ ಕಾರಣವೇನು ?

ಸೂ| ದ—ಅದನ್ನು ಬೇಕಾದರೆ ವಿಚಾರಿಸೋಣ. ಎಲೆ ಮಗಳೆ, ನಿನ್ನ ಪತಿಯು ನಿನ್ನನ್ನೇತಕ್ಕೆ ಬಿಟ್ಟುಹೋದನು ?

ದಮ—ಸ್ವಾಮಿ ನನ್ನ ಪತಿಯು ಈ ಅರಣ್ಯದಲ್ಲಿ ನಾನು ಕ್ಲೇಶಪಡುತ್ತಿರುವುದನ್ನು ನೋಡಿ, "ನೀನು ನನ್ನಸಂಗಡ ಇರಬೇಡ ; ನಿಮ್ಮ ತೌರುಮನೆಗೆ ಹೋಗು" ಎಂದು ಹೇಳಿದನು. ಅದಕ್ಕೆ ನಾನು ಒಪ್ಪದಿರಲು,

ತಾನು ಬಿಟ್ಟುಹೋದರೆ-ನಾನು ಹಾಗೇ ಮಾಡೇನೆಂದು ಯೋಚಿಸಿಕೊಂಡು ಹೀಗೆ ಮಾಡಿರುವಹಾಗೆ ತೋರುವುದು.

ಸು| ದ—ಈ ಮಾತು ಒಪ್ಪತಕ್ಕುದಾಗಿದೆ; ಇದ್ದರೂ ಇರಬಹುದು.

ಯ| ದ—ಈ ಕಥೆಯನ್ನು ಕಟ್ಟಿಕೊಂಡು ನಮಗೇನುಸ್ವಾಮಿ? ಹಾಗೇ ನೋಡಿದರೆ, ಈಕೆಯೇನೊ ಅನಾಥಳಂತೆಯೇ ನನಗೂ ತೋರುವುದು. ಇನ್ನೇನು ಚೇದಿನಗರವೂ ಹತ್ತಿರವಾಯಿತು. ಬಂದರೂ ಬರಲಿ, ಬಿಡಿ. ಇನ್ನೆಲ್ಲರೂ ನಡೆಯಿರಿ ಹೊತ್ತಾಯಿತು.

ಹೆಂ—ಬಾಮ್ಮಾ ಬಾ, ಗಂಡುಸರ ಮಾತೇ ಹಾಗೆ. ನೀನು ಭಯಪಡಬೇಡ, ನಮ್ಮ ಜೊತೆಯಲ್ಲೇ ಬಾ.

ದಮ—ತಾಯ್ದಿರಾ, ಇದೊ ಬರುವೆನು.

ಎಲ್ಲರೂ—ನಾರಾಯಣ, ನಾರಾಯಣ. (ತೆರಳಿದರು)

ಚೇದಿನಗರ.

(ಹುಡುಗರ ಪ್ರವೇಶ)

೧ ನೇ ಹು—(ಗೋಲೀ ಹಿಡಿದುಕೊಂಡು) ಬಾರೋ ಸುಬ್ಬ, ಕಂಚವೊ? ಬಿಲ್ಲೀಸೊ?

೨ ನೇ ಹು—ಬಿಲ್ಲೀಸು ಬೇಡಾಕಣೊ, ಕಂಚ. ಇಂಟೇ ನೋಡಿದೆಯೇನೊ? (ಗೋಲೀ ತೋರಿಸುವನು)

೧ ನೇ ಹು—ನನ್ನ ಗೋಲೀ ಕೊಡೊ. (ಕೈ ಹಿಡಿಯುವನು)

೨ ನೇ ಹು—ಹೋಗು ಹೋಗೊ, (ಕೈಬಿಡಿಸಿಕೊಂಡು) ಇಂಟೇ ನೋಡಿದೆಯೇನೊ. ಇರಲಿ, ಇರಲಿ, ಆಮೇಲೆ ಕೊಡುತ್ತೇನೆ ಅದು.

೧ ನೇ ಹು—(ಅ) ಈವೊತ್ತು ಈ ಗೋಲಿಯನ್ನೂ ಕಿತ್ತುಕೊಂಡು ಕಳುಹಿಸಿಬಿಡುತ್ತೇನೆ (ಪ್ರ) ಆಡಪ್ಪಾ, ಹಾಗೇ ಆಗಲಿ ಬದ್ದು ತೋಡೋಣ ಬಾ. (ಬದ್ದು ತೋಡುವರು)

೩ ನೇ ಹು—ಬಾರೋ, ಬಾರೊ, ಮಾಲಿಂಗು, ನಾವು ಇತ್ತಲಾಗಿ ಬಿಲ್ಲೀ ಆಡೋಣ.

೪ ನೇ ಹು—ಸೈಕಣೊ, ಹಾಗೇ ಮಾಡೋಣ.

೧ ನೇ ಹು—ಇಲ್ಲಿ ಬರಬೇಡಕಣೊ, ಅತ್ತಲಾಗಿ ಹೋಗೊ.

(ತಳ್ಳುವನು)

೨ ನೇ ಹು—ಅದೇಕೊ? ನೀನೇ ಅತ್ತಲಾಗಿ ಹೋಗೊ.

(ತಾನೂ ತಳ್ಳುವನು)

೪ ನೇ ಹು—ಸುಬ್ಬೊ, ಸುಬ್ಬೊ, ಏತಕ್ಕೆ ಜಗಳವಾಡುತೀಯೊ? ವೀರಭದ್ರಪ್ಪಾ ಸುಮ್ಮನಿರೋ, (೧ ನೆಯವನನ್ನು ನೋಡಿ) ನಾವು ಇತ್ತಲಾಗಿ ಆಡಿಕೊಂಡರೆ ನಿಮಗೇನೊ? ಎಷ್ಟು ದೂರ ಬಿಟ್ಟಿದೆ?

೩ ನೇ ಹು—ನಮ್ಮ ಕಡೆಗೆ ನಿಮ್ಮ ಗೋಲಿ ಬಂದರೆ ನಾನು ಕೊಡುವುದಿಲ್ಲ.

೨ ನೇ ಹು—ನಮ್ಮ ಕಡೆಗೆ ನಿಮ್ಮ ಗೋಲಿ ಬಂದರೆ ನಾನೂ ಕೊಡುವುದಿಲ್ಲ.

೩ ನೇ ಹು—ಹಾಗೇ ಆಗಲಿ, ಆಡಿ. (ಎಲ್ಲರೂ ಆಡುವರು)

೫ ನೇ ಹು—(೬ ನೇ ಹುಡುಗನೊಡನೆ ಚೆಂಡಿನೊಡನೆ ಬಂದು) ಗುಂಡಪ್ಪಾ, ನೀನು ನಿಂತುಕೊಂಡು ಪುಟಚೆಂಡನ್ನು ಎಷ್ಟು ಹೊಡೆಯುತ್ತೀಯೊ?

೬ ನೇ ಹು—ಇನ್ನೂರು ಹೊಡೆಯುತ್ತೇನೆ ಕಣೊ.

೫ ನೇ ಹು—ನಾನು ಮೂನ್ನೂರು ಹೊಡೆಯುತ್ತೇನೆ.

೬ ನೇ ಹು—ಹೊಡೆ ನೋಡೋಣ. (ಪುಟಚೆಂಡಾಡುವರು)

೪ ನೇ ಹು—ಹೋ! ಈ ಆಟವನ್ನು ನಾನು ಕೊಡುವುದಿಲ್ಲ. ಗೆರೆಯ ಆಚೆ ನಿಂತುಕೊಂಡು ಕೀಚು.

೫ ನೇ ಹು—ಹೋಗು ಹೋಗೋ! ಸೋತುಬಿಟ್ಟೆನೆಂದು ಈ ಆಟವನ್ನು ತೆಗೆದೆಯೊ? ಇರಲಿ, ನನ್ನ ರಡಾಂಗ್ಟೇ ಕೊಡು. (ಕೈಹಿಡಿದು ಇಬ್ಬರೂ ಜಗಳವಾಡುವರು)

ದಮ— (ಪ್ರವೇಶಿಸಿ)

* ಕಂ|| ಎಂತರಮನೆಯಂಪೊಕ್ಕಾ |
ನಂತಪುರಂಬುಗುವೆ ನೀಮಹಾಪತ್ತನದೊಳ್ |

---

* || ರಾಗ | ಹಿಂ-ಕಾಪಿ | ರೂಪಕತಾಳ ||

(ಜಲಿಯಾನೇ ಈವಿರಹ ಎಂಬಂತೆ)

ಅಹಹಾ ಈ ದುರ್ದಶೆಯನು | ಸಹಿಸಲಾರೆನು ||ಪ|| ಬಹುಕಠೋರವಾದ ದೈವ | ಮಹಿಮೆ ಮೀರಲಾಗದು ||ಅ|| ಬಂದೆನೀಪುರಕ್ಕೆಮುನಿಪ | ನೆಂದತೆರದೊಳು |

ಚಿಂತಿಸುತೆನ್ನೀ ದುರ್ದಶೆ |
ಯಂತಿಳಿಪುವೆನಾರ್ಗದೆಂತು ಜೀವಿಪೆನಕಟಾ ||೨೬||

(ಶೋಕಿಸುತ್ತ ಬರುವಳು)

೩ ನೇ ಹು—(ನೋಡಿ) ಎಲೇಲೇ ! ಅತ್ತಲಾಗಿ ಹೋಗು. ಇಲ್ಲಿ ಬರಬೇಡ.

ದಮ—ಆಗಲಿ, ಇತ್ತಲಾಗಿ ಹೋಗುವೆನು. (ಓರೆಯಾಗಿ ಹೋಗುವಳು)

೪ ನೇ ಹು—ಇತ್ತಲಾಗೇಕೆಬಂದೆಯೆ ? ಅತ್ತಲಾಗಿ ಹೋಗು !

ದಮ—ಇಲ್ಲೂ ಬರಬೇಡವೆ ? ಅತ್ತಲಾಗಾದರೂ ಹೋಗುವೆನು. (ಓರೆಯಾಗಿ ಹೋಗುವಳು)

೨ ನೇ ಹು—ನಾವಾಡುವ ಕಡೆಗೇಕೆ ಬಂದೆಯೆ ? ಹೋಗು ಅತ್ತಲಾಗೆ.

ದಮ—ಇನ್ನೆತ್ತಲಾಗಿ ಹೋಗಲಪ್ಪಾ ?

೨ ನೇ ಹು—ಹಿಂದಕ್ಕೇ ಹೋಗು.

ದಮ—ಅಯ್ಯೊ ! ಇನ್ನೆಲ್ಲಿ ಹೋಗಲಿ ? (ಚಿಂತಿಸುತ್ತ ಅತ್ತಿತ್ತ ತಬ್ಬಿಬ್ಬಾಗಿ ನಡೆಯುವಳು)

೧ ನೇ ಹು—(ನೋಡಿ) ರಾಮೂ, ರಾಮು ಅವಳು ಯಾವಳೊ ಹುಚ್ಚಿ ಕಣೊ; ಇವಳು ನಡೆಯುವದನ್ನು ನೋಡು.

೨ ನೇ ಹು—ಹೌದು ಹೌದುಕಣೋ ; ಸೀರೆಯನ್ನು ಅರ್ಧ ಹರಿದುಬಿಟ್ಟು ಉಟ್ಟುಕೊಂಡಿದಾಳೆ ನೋಡೊ.

೪ ನೇ ಹು—ಹುಚ್ಚಿಯೇನೊ ? ಇತ್ತಲಾಗಿ ಬನ್ನಿರೊ, ಬನ್ನಿರೊ ; ಮಣ್ಣೆರಚಿರೊ.

ಎಲ್ಲರೂ—ಹೋ ? ಹುಚ್ಚೀ ! ಹುಚ್ಚೀ ! (ಮಣ್ಣೆರಚುತ್ತ ಮುತ್ತಿಕೊಂಡು ಹಾಸ್ಯಮಾಡುತ್ತ ಗಲಭೆಮಾಡುವರು)

ದಮ—ಅಯ್ಯೋ ? ಈ ಹುಡುಗರು ನನ್ನನ್ನು ಗೋಳಾಡಿಸುವರಲ್ಲಾ ! ನನಗೆ ಯಾರೂ ರಕ್ಷಕರಿಲ್ಲವೆ ? ರಕ್ಷಕರಿಲ್ಲವೆ ? (ಮೊರೆಯಿಡುವಳು)

ನಿರಾ,ನಂದಮನದೊಳು | ಮುಂದೆಸುಗಿಯದಿಲ್ಲಿಜೀವಿ | ಪಂದವೇನೊಕಾಣೆನು ||೧||
ಒರೆವೆನಾರಿಂಗೆನ್ನಮನದೊ | ಳಿರುವದುಃಖವ | ಲಜ್ಜಾ, ಭರಿತ ದೈನ್ಯವ | ಅರಮನೆಯೊಳು ಪೆಂಡಿರಂತಃ | ಪುರವನೆಂತುಸೇರಲಿ ||೨||

ಅರಮನೆ.

(ಉಪ್ಪರಿಗೆಯಲ್ಲಿ ಚೇಟಿಯೊಡನೆ ರಾಜಮಾತೆಯ ಪ್ರವೇಶ)

ರಾ। ಮಾ—(ನೋಡಿ) ಎಲೆ ಮತಿಮತಿ, ಬೇಗ ಹೋಗು, ಆ ಹುಡುಗರು ಮುತ್ತಿಕೊಂಡು ಅಟ್ಟಾಡುತ್ತಿರುವ ಆ ಹೆಂಗುಸು ಯಾರೊ! ಬಹು ದೀನವಾಗಿ ಮೊರೆಯಿಡುತ್ತಿರುವಳು. ಅವಳ ರೂಪವನ್ನು ನೋಡಿದರೆ ಹುಚ್ಚಿಯಂತೆ ಕಾಣುವುದಿಲ್ಲ; ಯಾವಳೋ ಉತ್ತಮ ಸ್ತ್ರೀಯಂತೆ ಕಾಣುವಳು. ನಮ್ಮ ದೌವಾರಿಕರಿಗೆ ಹೇಳಿ ಆ ಗಲಭೆಯನ್ನು ತಪ್ಪಿಸಿ ಆಕೆಯನ್ನು ಇಲ್ಲಿಗೆ ಕರೆದುಕೊಂಡು ಬಾ.

ಚೇಟಿ—ಅಪ್ಪಣೆ. (ತೆರಳಿದಳು)

ಹುಡುಗರು—ಹೋ ಹುಚ್ಚೀ! (ಚಪ್ಪಾಳೆ ತಟ್ಟುತ್ತಾ ಗಲಭೆ ಮಾಡುವರು)

ದೌವಾರಿಕ—(ಬಂದು ಕೋಪದಿಂದ) ಎಲಾ ತುಂಟಹುಡುಗರಾ, ಅತ್ತ ನಡೆಯಿರಿ, ಅತ್ತ ನಡೆಯಿರಿ. (ಹೆದರಿಸಿ ಅಟ್ಟಿಬಿಟ್ಟು) ಎಲವ್ವಾ ಇತ್ತಲಾಗಿ ಬಾ; ನಮ್ಮ ಮಹಾದೇವಿಯರ ಅಪ್ಪಣೆಯಾಗಿದೆ.

ದಮ—ಭದ್ರನೆ, ಇದೊ ಬರುವೆನು. (ಮೆಲ್ಲಗೆ ಬಾಗಿಲಿಗೆ ಬರುವಳು)

ಚೇಟಿ—(ಬಾಗಿಲ ಬಳಿ ನಿಂತು) ಇತ್ತಲಾಗಿ ಬಾರಮ್ಮಾ.

ದಮ—(ಚೇಟಿಯೊಡನೆ ತೆರಳಿ ವಿನಯದಿಂದ) ಮಹಾಮಾತೃಶ್ರೀಯರಿಗೆ ವಂದಿಸುವೆನು.

ರಾ। ಮಾ—ಎಲೆ ಮಗಳೆ, ನೀನು ಯಾರು? ಎಲ್ಲಿಂದ ಬಂದೆ?

ದಮ—ಮಹಾದೇವಿಯೆ, ಕೇಳಬೇಕು; ನಾನು ಉತ್ತಮಜಾತಿಯಲ್ಲಿ ಹುಟ್ಟಿದವಳು; ಮತ್ತು ಪತಿವ್ರತೆಯಾದವಳು; ನನ್ನ ಪತಿಯು ಜೂಜಾಡಿ ಸರ್ವಸ್ವವನ್ನೂ ಕಳೆದುಕೊಂಡು ಒಂದೇ ಬಟ್ಟೆಯನ್ನುಟ್ಟು ನನ್ನೊಡನೆ ಅರಣ್ಯಕ್ಕೆ ಬಂದನು; ಅಲ್ಲಿ ಬುದ್ಧಿವಿಕಾರವುಂಟಾಗಿ ಆ ಬಟ್ಟೆಯನ್ನೂ ಹೋಗಲಾಡಿಸಿಕೊಂಡು, ರಾತ್ರಿ ಮಲಗಿದ್ದಾಗ ನನ್ನ ಅರ್ಧವಸ್ತ್ರವನ್ನು ಕತ್ತರಿಸಿಕೊಂಡು ಎಲ್ಲೋ ಹೊರಟು ಹೋದನು; ನಾನು ಎಲ್ಲೆಲ್ಲಿ ಹುಡುಕಿದರೂ ಸಿಕ್ಕಲಿಲ್ಲ; ಆತನು ಸಿಕ್ಕುವವರೆಗೂ ನಾನು ಎಲ್ಲಾದರೂ ಅಂತಃಪುರ ಸ್ತ್ರೀಯರಿಗೆ

ಅಲಂಕಾರ ಮಾಡಿಕೊಂಡು ಗೌಡಿಯಾಗಿ ಜೀವಿಸಿಕೊಂಡಿರತಕ್ಕವಳು.

ರಾ। ಮಾ—(ಕನಿಕರದಿಂದ) ಎಲೆ ಮಗಳೆ, ವ್ಯಸನಪಡಬೇಡ ; ನೀನು ನಮ್ಮ ರಾಜಕುಮಾರಿಯಾದ ಸುನಂದಾದೇವಿಗೆ ಅಲಂಕಾರ ಮಾಡಿಕೊಂಡು ನಮ್ಮರಮನೆಯಲ್ಲೇ ಇರು ; ನಿನ್ನಲ್ಲಿ ನನಗೆ ತುಂಬಾ ಪ್ರೀತಿಯುಂಟಾಗಿರುವುದು ; ನಿನ್ನ ಗಂಡನನ್ನು ಹುಡುಕುವುದಕ್ಕಾಗಿ ನಮ್ಮ ಭೃತ್ಯರನ್ನು ಕಳುಹಿಸಿಕೊಡುವೆನು. ಬಂದುವೇಳೆ ನಿನ್ನ ಗಂಡನೇ ನಿನ್ನನ್ನು ಹುಡುಕಿಕೊಂಡು ಇಲ್ಲಿಗೆ ಬಂದರೂ ಬಂದಾನು ! ನೀನು ಶೀಘ್ರವಾಗಿ ನಿನ್ನ ಪತಿಯನ್ನು ಸೇರುವೆ. (ಚೇಟಿಯನ್ನು ನೋಡಿ) ಮತಿಮತಿ ಸುನಂದೆಯನ್ನು ಕರೆದುಕೊಂಡು ಬಾ.

ಚೇಟಿ—ಅಪ್ಪಣೆ. (ತೆರಳಿದಳು)

ದಮ—ಮಹಾದೇವಿಯೆ, ನಿಮ್ಮ ಆದರಣೆಗೆ ನಾನು ಕೃತಜ್ಞಳು. ನಾನು ಇಲ್ಲಿರಬೇಕಾದರೆ ನನ್ನ ನಿಯಮವನ್ನು ಕೇಳಬೇಕು.

ರಾ। ಮಾ—ಅದೇನು ? ಸಂಕೋಚವಿಲ್ಲದೆ ಹೇಳು.

ದಮ—ನಾನು ಪರೋಚ್ಛಿಷ್ಟವನ್ನು ಭೋಜನ ಮಾಡತಕ್ಕವಳಲ್ಲ. ಪರಪುರುಷನೊಡನೆ ಮಾತನಾಡತಕ್ಕವಳಲ್ಲ. ನನ್ನ ಪತಿಯ ಸಮಾಚಾರವನ್ನು ತಿಳಿಯುವುದಕ್ಕಾಗಿ ಬ್ರಾಹ್ಮಣರ ಸಂಗಡ ಬೇಕಾದರೆ ಮಾತನಾಡುವೆನು. ಈ ನಿಯಮವನ್ನು ನಡಸಿಕೊಟ್ಟರೆ ನಾನಿಲ್ಲಿ ವಾಸಮಾಡಿಕೊಂಡಿರುವೆನು.

ರಾ। ಮಾ—ಹಾಗೇ ಆಗಲಿ, ಈ ನಿಯಮವು ಶ್ಲಾಘ್ಯವಾಗಿಯೇ ಇರುವುರು. ನೀನು ಹೇಳಿದಂತೆಯೇ ನಡಸಿಕೊಡುವೆನು.

ಸುನಂದೆ—(ಚೇಟಿಯೊಡನೆ ಬಂದು ವಿನಯದಿಂದ) ಮಾತೆ ವಂದಿಸುವೆನು.

ರಾ। ಮಾ—ನಿನಗೆ ಮಂಗಳವಾಗಲಿ, ಎಲೆ ಸುನಂದೆ, ಈಕೆ ನಿನ್ನಷ್ಟೇ ವಯಸ್ಸುಳ್ಳವಳಾದಕಾರಣ ನಿನಗೆ ಅಲಂಕಾರ ಮಾಡಿಕೊಂಡು ನಿನ್ನ ಜೊತೆಯಲ್ಲೇ ಇರುವಳು ; ಇವಳನ್ನು ನಿನ್ನ ಸಖಿಯನ್ನಾಗಿ ಮಾಡಿಕೊಂಡಿರು.

ಸುನಂದೆ—ಮಾತೆ ನನಗೆ ಬಹಳ ಸಂತೋಷ; ಹಾಗೇ ಆಗಲಿ. ಎಲೆ ಸಖಿ ಬಾ.

ದಮ—ಕುಮಾರಿಯೆ, ಇದೊ ಬರುವೆನು. (ಹೊರಟು ತನ್ನಲ್ಲಿ ತಾನು)

ಕಂ॥ ನಿಂದೇಂದ್ರೈವಾನುಗ್ರಹ |
ದಿಂದೀಪರಿ ಯೊಂದುನೆಲೆಗೆ ಮತ್ಪತಿಯಂ ನಾ |
ನೆಂದೀಕ್ಷಿಪೆ ನೊಂದುವನವ |
ನೆಂದೆನ್ನಂ ಬಿಡಿಸಿಕೊಂಡು ಕಲಿಯಿಂದಕಟಾ ||೨೭||

(ಎಲ್ಲರೂ ತೆರಳಿದರು)

ನಾಲ್ಕನೆಯ ಅಂಕವು ಮುಗಿದುದು.

ಪಂಚಮಾಂಕಂ.

ಬೆಟ್ಟದಪ್ಪಲು ಕಾಡು.

(ನಳನ ಪ್ರವೇಶ)

ಮ|| ವಿ|| ಹಗೆಸಿಂಹಾಸನದಲ್ಲಿ ಮಂಡಿಸಿದುದಂ ಕಣ್ಣಾರೆ ಹಾ ನೋಡಿದೇಂ |
ದುಗುಡಂದಾಳ್ದುವನಾಂತದಲ್ಲಿ ಪಿರಿದುಂ ಕಷ್ಟಂಗಳಂ ಸೈಸಿದೇಂ |
ಮಿಗೆಮಾರ್ಗಶ್ರಮಮೆನ್ನನಂಬಿ ಮಲಗಿರ್ದಾಕಾಂತೆಯುಂ ಕಾಣೊಳಾ |
ಬಗೆಯಿಂ ವಂಚಿಸಿಬಿಟ್ಟುಬಂದೆನಕಟಾ ಇನ್ನುಂಬದುರ್ಕಿರ್ಪೆನೇ ||೧||

(ಮೂರ್ಛಿಸಿ, ಮೆಲ್ಲಗೆಚ್ಚತ್ತು)

ಅಯ್ಯೋ! ನಾನು ಇತ್ತಲಾಗಿ ಹೊರಟು ಬಂದಮೇಲೆ ನನ್ನ ಪ್ರಾಣ ಕಾಂತೆಯು ಎದ್ದು ನನ್ನನ್ನು ಕಾಣದೆ ಎಷ್ಟು ದುಃಖಪಟ್ಟಳೊ! ಎಲ್ಲೆಲ್ಲಿ ನನ್ನನ್ನು ಹುಡುಕಿದಳೊ! ಕೊನೆಗೆ ಎಲ್ಲಿಯೂ ನನ್ನನ್ನು ಕಾಣದೆ ಪ್ರಾಣ ತ್ಯಾಗವನ್ನೇ ಮಾಡಿಕೊಂಡುಬಿಟ್ಟಳೋ, ಅಥವಾ ಯಾವುದಾದರೂ ದುಷ್ಟ ಪ್ರಾಣಿಗಳಪಾಲೇ ಆಗಿಬಿಟ್ಟಳೋ. ಯಾವುದೂ ತಿಳಿಯದಲ್ಲಾ! (ಸ್ವಲ್ಪ ಯೋಚಿಸಿ) ಬಂದುವೇಳೆ ಆ ಪತಿವ್ರತಾಶಿರೋಮಣಿಯು ನನ್ನನ್ನು ಹುಡುಕಿ ಹುಡುಕಿ ಎಲ್ಲೂ ಕಾಣದೆ, ಆ ಭಯಂಕರವಾದ ಕಾಡಿನಲ್ಲೇ ಅಲೆಯುತ್ತಿದ್ದರೂ ಇರಬಹುದು. ಈ ಸಮಯದಲ್ಲಿ—

* ಕಂ|| ಮತಿಹೀನನೆನಿ ನೆನ್ನಿಂ ವಂ |
ಚಿತೆಯಾಗರಸರಸಿ ಕಾಣದೆನ್ನಂ ಭಯಕಂ |

---

* || ರಾಗ | ಹಿಂ-ಕಾಪಿ | ಏಕತಾಳ ||

(ಮಾತೆಯೇನಪೇಳಿದೆ ಎಂಬುದರ ಮಾದರಿ)

ಕಾಣದೆಂತು ಸೈಸಲಿ | ಪ್ರಾಣಕಾಂತೆಯಾ | ಎನ್ನಾ | ಪ್ರಾಣಕಾಂತೆಯಾ||ಪ|| ವನಮಾರ್ಗದಲ್ಲಿ ನ | ನ್ನನೆ ನಂಬಿಕೊಂಡಿರ್ದ| ಪ್ರಾಣಕಾಂತೆಯಾ| ಎನ್ನಾ | ಪ್ರಾಣ ಕಾಂತೆಯಾ||೧|| ಮತಿಯಿಲ್ಲದೆನ್ನಿಂ ವಂ | ಚಿತೆಯಾದನಾಥೆಯಾ | ಪ್ರಾಣಕಾಂತೆ

ಪಿತೆಯಾಗಿ ಶೋಕಿಸುವ ಜೀ |
ವಿತಕಾಂತೆಯು ಕಾಣದೆಂತು ಸೈಸುವೆ ನಕಟಾ ||೨||

ಈಗ ನಾನು ಹಿಂದಕ್ಕೆ ಹೋಗಿ ನೋಡೋಣವೆಂದರೆ, ನಾನು ಬಂದ ದಾರಿಯೇ ನನಗೆ ಗೊತ್ತಿಲ್ಲದೆ ಬಹುದೂರ ಬಂದುಬಿಟ್ಟಿದೇನೆ. ಏನು ಮಾಡಲಿ? (ತನ್ನನ್ನು ನೋಡಿ) ಛೀ ದುರಾತ್ಮನಾದ ನಳನೆ, ಮಾಡಬಾರದ ಕೆಲಸವನ್ನು ಮಾಡಿ ಇನ್ನೂ ಏತಕ್ಕೆ ಬದುಕಿರುವೆ? ಛೀ ಪಾಪಿ, ಎಲ್ಲಾದರೂ ಒಂದು ಕಾಡುಗಿಚ್ಚಿನಲ್ಲಾದರೂ ಬಿದ್ದು ಪ್ರಾಣವನ್ನು ಕಳೆದುಕೊಳ್ಳಬಾರದೆ? ಹಾ! (ಮೂರ್ಛಿಸುವನು)

ಕಲಿ—(ಪ್ರವೇಶಿಸಿ) ಈಗ ಇಲ್ಲೊಂದು ಕಾಡುಗಿಚ್ಚನ್ನು ಎಬ್ಬಿಸುತ್ತೇನೆ. ಮುಂದೇನಾಗುವುದೋ ನೋಡುವೆನು. (ತೆರಳಿದನು)

ತೆರೆಯಲ್ಲಿ—(ಛಟಛಟಾ ಎಂದು ಸದ್ದಾಗುವುದು)

ನಳ—(ಎಚ್ಚತ್ತಿದ್ದು ನೋಡಿ) ಓಹೊ! ಇತ್ತಲಾಗಿ ಕಾಡುಗಿಚ್ಚು ಹೊತ್ತಿದ ಹಾಗಿದೆ. ಈ ಶರೀರವನ್ನು ಯಜ್ಞೇಶ್ವರನಿಗೆ ಸಮರ್ಪಣೆ ಮಾಡಿಬಿಡುವೆನು. (ಎನ್ನುವಷ್ಟರಲ್ಲಿ)

ಕಾರ್ಕೋಟಕ ಸರ್ಪ—(ಧಗಧಗಿಸುವ ಕಾಡುಗಿಚ್ಚಿನ ಮಧ್ಯದಲ್ಲಿ) ಅಯ್ಯಾ ಪುಣ್ಯಾತ್ಮನೆ, ಬೇಗ ಬಾ, ಬೇಗ ಬಾ. ಈ ಕಾಡುಗಿಚ್ಚಿನಿಂದ ನನ್ನನ್ನು ತಪ್ಪಿಸಿ ರಕ್ಷಿಸು, ರಕ್ಷಿಸು.

ನಳ—(ಕೇಳಿ) ಇಲ್ಲಿ ಯಾರೋ ಮೊರೆಯಿಡುವಂತಿದೆ. ಯಾರಾದರೇನು? ದುಃಖಿತರನ್ನು ರಕ್ಷಿಸುವುದು ನನ್ನ ಧರ್ಮ. ಭಯಪಡಬೇಡ, ಭಯಪಡಬೇಡ. ಇದೊ ನಾನು ಬಂದೆ, ಬಂದೆ. (ಸ್ವಲ್ಪ ಮುಂದೆ ಹೋಗಿ ನೋಡಿ) ಅಹ! ಈ ಉರಿಯ ಮಧ್ಯದಲ್ಲಿ ಯಾವದೋ ಒಂದು ಮಹಾಸರ್ಪವು ಸಿಕ್ಕಿಕೊಂಡಿರುವುದು.

ಕಾರ್ಕೋಟಕ—ಎಲೈ ಪುಣ್ಯಾತ್ಮನೆ, ಈ ವಿಪತ್ತಿನಿಂದ ನನ್ನನ್ನು ತಪ್ಪಿಸು, ತಪ್ಪಿಸು.

ಯಾ | ಎನ್ನಾ | ಪ್ರಾಣಕಾಂತೆಯಾ ||೨|| ಕುರರಿಯಂತಡವಿಯೊಳ್ | ನೆರೆಶೋಕಿಸುತ್ತಿರ್ಪಾ | ಪ್ರಾಣಕಾಂತೆಯಾ | ಎನ್ನಾ | ಪ್ರಾಣಕಾಂತೆಯಾ ||೩||

ನಳ—(ನೋಡಿ) ಇದೇನೊ ನಾಗಲೋಕದ ಸರ್ಪವಾಗಿರಬಹುದು. ಒಳ್ಳೇದಿರಲಿ. ಇದೊ ನಾನು ಈಚೆಗೆ ಎತ್ತಿಹಾಕುವೆನು. ಭಯಪಡಬೇಡ. (ಕಿಚ್ಚನ್ನು ಹೊಕ್ಕು ಸರ್ಪವನ್ನು ಎತ್ತಿಕೊಂಡು ಹೋಗುವನು)

ತೆರೆಯಲ್ಲಿ—ಹಾ ! ಹಾ ! (ನಳನ ಶಬ್ದವಾಗುವುದು)

ನಳ—(ರೂಪವಿಕಾರವನ್ನು ಪಡೆದು ಪ್ರವೇಶಿಸಿ) ಅಯ್ಯೊ ! ಆ ಸರ್ಪವು ನಾನು ಕೈಯಲ್ಲಿ ತೆಗೆದುಕೊಂಡೊಡನೆ ನಿನ್ನ ಹೆಜ್ಜೆಗಳನ್ನು ಎಣಿಸಿಕೊಂಡು ನಡೆಯೆಂದು ನನಗೆ ಹೇಳಿತು. ನಾನು ತಿಳಿಯದೆ ಏಕಂ, ದ್ವೇ, ತ್ರೀಣಿ, ಚತ್ವಾರಿ, ಪಂಚ, ಷಟ್, ಸಪ್ತ, ಅಷ್ಟ, ನವ, ಎಂದು ಹೇಳಿ, ಆಮೇಲೆ ದಶ ಎಂದು ಹೇಳಿದೊಡನೆ ನನ್ನ ಮಾತಿನಿಂದಲೇ ಅದು ನನ್ನನ್ನು ಕಚ್ಚಿಬಿಟ್ಟಿತು. ಅಯ್ಯೊ ! ಇದರ ವಿಷದಿಂದ ನನ್ನ ರೂಪೇ ವ್ಯತ್ಯಾಸವಾಯಿತಲ್ಲಾ ! ಹಾ ! ಏನು ಮಾಡಲಿ ? (ಸ್ವಲ್ಪ ಯೋಚಿಸಿ) ಓಹೊ ! ಇದಕ್ಕೆ ನಾನೇತಕ್ಕೆ ವ್ಯಸನಪಡಲಿ ? ಈ ವಿಷದಿಂದ ಈಗಲೋ ಇನ್ನೊಂದು ಕ್ಷಣಕ್ಕೋ ನನಗೆ ಮರಣವು ಸಿದ್ಧವಾಗಿರುವುದು. ಆದರೆ, ಲೋಕದಲ್ಲಿ ಘಾತುಕರಿಗೆ ಯಾರೂ ಉಪಕಾರ ಮಾಡಬಾರದು.

ಕಂ|| ಪರರುಪಕಾರವನಿನಿಸುಂ |
ಸ್ಮರಿಸದೆ ಘಾತುಕ ರವರ್ಗೆ ಕೇಡನೆ ಬಗೆವರ್ |
ಉರಿಯೊಳಗಿರ್ದಾಪಾವಂ |
ಪೊರವಡಿಸಲದೆನ್ನ ಕರ್ಚಿದುದೆ ದೃಷ್ಟಾಂತಂ ||೧||

ಕಾರ್ಕೋಟಕ—(ನಿಜರೂಪವನ್ನು ಪಡೆದು-ಎಂದರೆ ಸರ್ಪರಾಜನಾಗಿ ಕಾಣಿಸಿಕೊಂಡು) ಎಲೈ ನಳಮಹಾರಾಜನೆ, ನಾನು ಅಂಥವನಲ್ಲ. ಪೂರ್ವದಲ್ಲಿ ಒಂದು ದಿವಸ ನಾನು ನಾರದರನ್ನು ವಂಚಿಸಿದೆನು. ಅದಕ್ಕೆ ಅವರು ಕೋಪಗೊಂಡು ಈ ಕಾಡಿನಲ್ಲಿ ಅಲ್ಲಾಡದೆ ಬಿದ್ದಿರುವಂತೆ ನನಗೆ ಶಾಪವನ್ನು ಕೊಟ್ಟರು. ಆಮೇಲೆ ನಾನು ಬೇಡಿಕೊಳ್ಳಲು, ಈ ಶಾಪವು ನಳಮಹಾರಾಜನಿಂದ ಪರಿಹಾರವಾಗುವುದೆಂದು ಅನು

ಗ್ರಹಿಸಿದ್ದರು. ಇದೊ ಈಗ ನಾನು ಶಾಪವಿಮೋಚನೆಯಾಗಿ ನಿಜರೂಪವನ್ನು ಪಡೆದಿರುವೆನು. ನೀನು ಮಾಡಿದ ಉಪಕಾರಕ್ಕಾಗಿ ಈ ಕಷ್ಟದಶೆಯಲ್ಲಿ ನಿನ್ನನ್ನು ಯಾರೂ ತಿಳಿಯದೆ ಇರಲಿ ಎಂದು ನಿನ್ನ ರೂಪು ವಿಕಾರವಾಗುವಂತೆ ನಾನು ನಿನ್ನನ್ನು ಕಚ್ಚಿದೆನೇ ಹೊರತು ಬೇರೆಯೇನೂ ಇಲ್ಲ. ನಿನ್ನಲ್ಲಿ ಆವೇಶವಾಗಿ ಈ ಕಷ್ಟವನ್ನುಂಟುಮಾಡಿರುವ ಆ ಕಲಿಯೇ ನನ್ನ ವಿಷದಿಂದುಂಟಾಗತಕ್ಕ ಸಂಕಟವನ್ನು ಅನುಭವಿಸುವನು. ಇದರಿಂದ ನಿನಗೇನೂ ಬಾಧೆಯಿಲ್ಲ. ನೀನು ಇಲ್ಲಿಂದ ಅಯೋಧ್ಯೆಗೆ ಹೋಗಿ ಬಾಹುಕನೆಂಬ ಹೆಸರಿನಿಂದ ಋತುಪರ್ಣರಾಯನ ಬಳಿಯಲ್ಲಿ ಕೆಲವುಕಾಲ ಅಜ್ಞಾತವಾಸವನ್ನು ಮಾಡಿಕೊಂಡಿರು. ಮತ್ತು ಆತನಿಗೆ ನಿನ್ನಲ್ಲಿರುವ ಅಶ್ವಹೃದಯವನ್ನು ಹೇಳಿಕೊಟ್ಟು, ಆತನಲ್ಲಿರುವ ಅಕ್ಷಹೃದಯವನ್ನು ನೀನು ಕಲಿತುಕೊಳ್ಳುವುದು. ಆಮೇಲೆ ಶತ್ರುವನ್ನು ಜಯಿಸಿ ಸುಖವಾಗಿರುವೆ. ನೀನು ನಿಜರೂಪವನ್ನು ಅಪೇಕ್ಷಿಸಿದಾಗ ಈ ವಸ್ತ್ರವನ್ನು ಧರಿಸಿಕೊಂಡರೆ, ನಿನಗೆ ನಿಜರೂಪವು ಬರುವುದು. ಇದನ್ನು ಪರಿಗ್ರಹಿಸು. (ವಸ್ತ್ರವನ್ನು ಕೊಡುವನು)

ನಳ—(ತೆಗೆದುಕೊಂಡು) ಸರ್ಪರಾಜನೆ, ನಿನ್ನಿಂದ ನನಗೆ ಮಹೋಪಕಾರವಾಯಿತು. (ಕಾರ್ಕೋಟಕನು ಅದೃಶ್ಯನಾಗಲು ನೋಡಿ) ಓಹೊ! ಕಾರ್ಕೋಟಕನು ತನ್ನ ಲೋಕಕ್ಕೆ ಹೊರಟುಹೋದನು. "ಜೀವನ್ ಭದ್ರಾಣಿ ಪಶ್ಯತಿ" ಎಂದು ದೊಡ್ಡವರು ಹೇಳುವ ಮಾತು ನಿಜವಾದುದು--ಈಗ ನನ್ನ ಪ್ರಾಣಕಾಂತೆಯು ಏನಾಗಿರುವಳೊ! ಎಂದು ಈ ವ್ಯಸನವು ಮನಸ್ಸಿಗೆ ಬಹಳವಾಗಿ ಹತ್ತಿರುವುದರಿಂದ ಈಗಿನ ಸಂತೋಷವೂ ಕೂಡ ನನಗೆ ವಿಷಮಿಶ್ರವಾದ ಅಮೃತದಂತಿರುವುದು.

ಕಂ|| ಅನುಭವಿಸತಕ್ಕುದಂತಾ |
ನನುಭವಿಸಲ್ವೇಳ್ಕುಮಲ್ಲದಿನ್ನೊಂದಿಲ್ಲಂ |
ಜನನಾಂತರಕೃತಕರ್ಮ |
ಕ್ಕನುಸಾರದೆ ನಡೆವುದೆಲ್ಲಮುಂ ಪ್ರಾಣಿಗಳೊಳ್ ||೪||

ಇನ್ನು ನಾವು ಕಾರ್ಕೋಟಕನ ಅಪ್ಪಣೆಯಾದಂತೆ ಅಯೋಧ್ಯೆಗೆ ಹೋಗುವೆನು. (ತೆರಳಿದನು)

ಕಾಡು.

(ಕಲಿಯ ಪ್ರವೇಶ)

ಕಲಿ— *ಕಂ|| ಅಕಟಾ ಎನ್ನಿಂದತಿ ಘಾ |
ತುಕನೆನಿಸುತೆ ಕೇಡನಿಂತೊಡರ್ಚಿದ ಕಾರ್ಕೋ |
ಟಕನ ವಿಷಜ್ವಾಲೆಯ ಸಮು |
ಧಿಕತಾಪವನೆಂತು ಸೈಪೆನೇಗೈದಪೆ ನಾಂ ||೫||

ಅಯ್ಯೋ! ನನಗೆ ಬಹಳ ಸಂಕಟವಾಗುವುದು. ಆ ದುಷ್ಟನಾದ ಕಾರ್ಕೋಟಕನ ವಿಷದಿಂದುಂಟಾದ ಉರಿಯನ್ನು ಸಹಿಸಲಾರೆ, ಸಹಿಸಲಾರೆ. (ಕೋಪದಿಂದ) ಹು! ಇರಲಿ! ಆ ದುರಾತ್ಮನಾದ ನಳನಿಗೆ ರೂಪವಿಕಾರವಾಯಿತಲ್ಲಾ! ನನಗೆ ಬಹಳ ಸಂತೋಷ, ಬಹಳ ಸಂತೋಷ. ನನ್ನ ಶರೀರವೆಲ್ಲಾ ಉರಿದು ಬೂದಿಯಾದರೂ ಚಿಂತೆಯಿಲ್ಲ. ಅವನನ್ನು ಬೇರೆ ನಾನು ಈಗಲೇ ಬಿಡತಕ್ಕವನಲ್ಲ. ಇರಲಿ! ಇರಲಿ! (ತೆರಳಿದನು)

ಸರಯೂ ನದೀತೀರ.

(ನಳನ ಪ್ರವೇಶ)

ನಳ—(ನೋಡಿ) ಓಹೋ! ಇನ್ನೇನು ಅಯೋಧ್ಯಾನಗರದ ಸಮೀಪಕ್ಕೆ ಬಂದುಬಿಟ್ಟೆನು. ಇದೊ, ಇಲ್ಲಿ ಹರಿಯುತ್ತಿರುವುದೇ ಪೂರ್ವವಾಹಿನಿಯಾದ ಸರಯೂ ನದಿ. ಆಹ!

---

*|| ರಾಗ | ಜಂಝೋಟಿಜಿಲ್ಲಾ | ತಾಳ | ತ್ರಿಪುಟಛಾಪು ||
(ಸುಹಿತವಾಗಿರ್ಪುದೀಭಂಗಿ ಎಂಬಂತೆ)

ಅಹಹ ನಾನೆಂತು ಸೈರಿಸಲಿ | ಬಹಳವಾದೀ ಉರಿಯನು ||ಪ|| ವಿಷವುಬಿಟ್ಟೆನ್ನವೈರಿಯನು | ವಿಷಮವಾಗೆನ್ನ ತಪಿಪುದು ||೧|| ಇದಕೆ ನಾನೇನಮಾಡಲಿ ಹಾ | ಬೆದರೆನಹುದೆಲ್ಲವಾಗಲಿ ||೨|| ಬಿಡೆನು ನಾನಿನ್ನುಮೆನ್ನರಿಯ | ಘನಘನೆನಗೇನಂದರೂ ||೩||

* ಮ॥ವಿ॥ ಸಲಿಲಪ್ರಾಂತ ಸಮುದ್ಭವಾಂಬುರುಹ ಪೀಠಾಸೀನಚಕ್ರಾಂಗ ಸಂ |
ಕುಲದಿಂ ತೀರಮಹೀರುಹಪ್ರಕರಶಾಖಾಲೀನ ನಾನಾಪತ |
ತ್ಕುಲಕಂಠಪ್ರಸರನ್ಮನೋಜ್ಞರುತದಿಂವೀಚೀಪ್ರಪೃಷದ್ವ್ಯಾಪಿಶೀ |
ತಲಮಂದಾನಿಲದಿಂದವಿಾನದಿಯದೇನಾದಂಮನಂಗೊಳ್ವುದೋ ॥೬॥

(ಸ್ವಲ್ಪ ನಡೆದು ನೋಡಿ) ಇದೊ, ಈ ನದಿಯ ಆಚೇ ದಡದಲ್ಲಿ ಕಾಣಿಸುವುದೇ ಅಯೋಧ್ಯಾನಗರವು. ಈ ನದಿಯನ್ನು ದಾಟಿಕೊಂಡು ಹೋಗಿ, ಅಲ್ಲಿಗೆ ಅರಸಾದ ಋತುಪರ್ಣರಾಯನನ್ನು ಕಂಡು, ಅತನಲ್ಲಿ ಯಾವುದಾದರೂ ಒಂದು ಕೆಲಸಕ್ಕೆ ಸೇರಿಕೊಳ್ಳುವೆನು. ಈ ರೀತಿಯಾಗಿ ಅಜ್ಞಾತವಾಸ ಮಾಡುತ್ತ ದೇಶಾಂತರಗಳಿಗೆ ಹೋಗಿಬರುವ ಜನಗಳ ಮುಖ ದಿಂದ ನನ್ನ ಪ್ರಿಯೆಯ ವೃತ್ತಾಂತವನ್ನು ವಿಚಾರಿಸುತ್ತಾ ಇರುವೆನು.

(ತೆರಳಿದನು)

ಆಸ್ಥಾನ.

(ಋತುಪರ್ಣರಾಯ, ಮಂತ್ರಿ, ವಾರ್ಷ್ಣೇಯ, ನಳರ ಪ್ರವೇಶ)

ಋ—ಎಲೈ ಸಾಧುವೆ, ನಿನ್ನ ಹೆಸರೇನು ? ಮತ್ತು ನೀನು ಮಾಡತಕ್ಕ ಕೆಲಸವೇನು ?

ನಳ—(ವಿನಯದಿಂದ) ಮಹಾರಾಜನೆ, ನನ್ನ ಹೆಸರು ಬಾಹುಕನೆಂದು. ನಾನು ಅಶ್ವಹೃದಯವನ್ನು ಬಲ್ಲೆನು. ಅತಿಶಯವಾಗಿ ಸಾರಥ್ಯವನ್ನೂ ಮಾಡತಕ್ಕವನು. ಮತ್ತು ಸರ್ವೋತ್ಕೃಷ್ಟವಾಗಿ ಅಡಿಗೆಯನ್ನೂ

---

*॥ ರಾಗ | ಸಿಂಧುಮಂದಾರಿ | ಆದಿತಾಳ ॥

(ಕಲಯಾಮಿಶ್ರೀ ಎಂಬಂತೆ)

ಬಗೆಗೊಳ್ವುದೀ, ನದಿನೋಡಲು | ಮಿಗೆಕಣ್ಗೊಡರ್ಚುತತಂಪನು ॥ಪ॥ ಖಗ ಭೃಂಗಮನೋಹರ ಗಾನದಿಂ | ಸೊಗಯಿಪ್ಪತೀರವನಾಳಿಯಿಂ ॥ಅ॥ ಅರವಿಂದಸಂ ಕುಲದಿಂದಲಿ | ಸ್ಫುರದುತ್ಪಲೋತ್ಕರದಿಂದಲಿ | ದರಫುಲ್ಲಸಿತಾಂಬುಜಬೃಂದದಿಂ | ಪರಿಶೋಭಿಸುತ್ತಿಹತೀರದಿಂ ॥೧॥ ತರಳೋರ್ಮಿಶೀಕರಜಾಲಕಂ | ಬೆರಸಾಂತತಾವರೆ ಗಂಪಿನ | ಭರದಿಂದಲಿ ಮೆಲ್ಲನೆಮೆಲ್ಲನೆ | ಚರಿಸುತ್ತಲಿರ್ಪೆಳಗಾಳಿಯಿಂ ॥೨॥ ವಿಲಸ ತ್ಪಯೋರುಹರತ್ನ ಮಂ | ಜುಳಸಿಂಹಪೀಠದೆಮಂಡಿಸಿ | ಜಲಚಾರಿಖಗಾಳಿಯನಾಳ್ವ ಪೋ | ಲೊಲವಾಂತುಕೋರ್ಪರ ಸಂಚಿಯಿಂ ॥೩॥

ಮಾಡಬಲ್ಲೆನು. ಈ ಎರಡರಲ್ಲೂ ನನ್ನನ್ನು ಯಾರೂ ಮೀರಲಾರರು.

ಋತು—ವಾರ್ಷ್ಣೇಯನೆ, ಕೇಳಿದೆಯಾ ?

ವಾ—ಮಹಾರಾಜನೆ, ಭೂಮಂಡಲದಲ್ಲಿ ನಳಮಹಾರಾಜನಿಗೊಬ್ಬನಿಗೇತಾನೆ ಇಂತಹ ಸಾಮರ್ಥ್ಯವಿದ್ದುದನ್ನು ನಾನು ಬಲ್ಲೆನು. ಈತನಿಗೆ ಅಂತಹ ಸಾಮರ್ಥ್ಯವಿದೆಯೆಂಬುದನ್ನು ನಾನು ನಂಬಲಾರೆ.

ಮಂತ್ರಿ—ವಾರ್ಷ್ಣೇಯನೆ, ಹಾಗೆನ್ನಬೇಡ.

ಕಂ|| ಧಾರಿಣಿಯೊಳಗಿರ್ಪವರೊಳ |
ಗಾರಾರ್ಗಾವಾವ ಶಕ್ತಿಯಿರ್ಪುದೊ ತಿಳಿಯ |
ಲ್ಕಾರರದಾರುಮದರ್ಕೆ ವಿ |
ಚಾರಿಸದವಗಣಿಸಬಾರದಾರುಮನಾರುಂ ||೭||

ಋತು—ಮಹಾಮಾತ್ಯನೆ, ಹಾಗೇ ಸರಿ.

ಕಂ|| ಪರಿಕಿಸಿನೋಡಿದೊಡಲ್ಲದೆ |
ಪುರುಷರ ಯೋಗ್ಯತೆಯನರಿಯಲಾಗದು ಜಗದೊಳ್ |
ಒರೆಗಲ್ಲೊಳೊರೆಯ ಸಿಕ್ಕದೆ |
ನಿರುಕಿಸಿದೊಡೆ ಕಾಣ್ಬುದೇಂ ಸುವರ್ಣದವರ್ಣಂ ||೮||

ವಾ—ಈತನ ರೂಪನ್ನು ನೋಡಿದರೆ, ಇಷ್ಟು ಸಾಮರ್ಥ್ಯವಿದೆಯೆಂದು ಯಾರೂ ಹೇಳಲಾರರು.

ಋತು—ವಾರ್ಷ್ಣೇಯನೆ-ಹಾಗೆನ್ನಬೇಡ. ರೂಪನ್ನು ನೋಡಿದಮಾತ್ರದಿಂದ ಮನುಷ್ಯರ ಯೋಗ್ಯತೆಯು ಗೊತ್ತಾಗುವುದಿಲ್ಲ. ಪರಂತು ಅವರವರ ವಿದ್ಯಾ ಬುದ್ಧಿ ಶಕ್ತಿಗಳನ್ನು ಪರೀಕ್ಷಿಸಿ ಅದನ್ನು ತಿಳಿಯಬೇಕು. ಎಲೈ ಬಾಹುಕನೆ, ನೀನು ನಮ್ಮ ಮುಖ್ಯಸಾರಥಿಗಳಾದ ವಾರ್ಷ್ಣೇಯ ಜೀವಲರೊಡನೆ ನಮ್ಮಶ್ವಶಾಲೆಯ ವಿಚಾರಣೆಯನ್ನು ಮಾಡಿಕೊಂಡಿರುವುದು. ನಿನ್ನ ಯೋಗ್ಯತಾನುಸಾರವಾಗಿ ನಿನಗೆ ಜೀವನವನ್ನು ನಡೆಸುವೆನು.

ನಳ—ಮಹಾರಾಜನ ಅಪ್ಪಣೆಯಾದಂತಾಗಲಿ.

ಋ—ವಾರ್ಷ್ಣೇಯನೆ, ಈತನನ್ನು ನಮ್ಮ ಅಶ್ವಶಾಲೆಗೆ ಕರೆದುಕೊಂಡು ಹೋಗುವುದು.

ವಾ—ಮಹಾರಾಜನ ಅಪ್ಪಣೆಯಾದಂತಾಗಲಿ. (ಎಲ್ಲರೂ ತೆರಳಿದರು)

ಅಶ್ವಶಾಲೆ.

(ಸಾರಥಿಯ ಉಡುಪಿನಿಂದ ಬಾಹುಕನ ಪ್ರವೇಶ)

ಬಾ—* ಚಂ|| ಮಾ|| ಅನುಪಮರಾಜ್ಯಮಂ ಕಳೆದುಕೊಂಡುಮರಣ್ಯದೆ ನಿದ್ರಿಸು
ತ್ತುಮಿ | ರ್ದ್ದನಿಯಳನಂತು ನೋಸದೊಳೆ ದುರ್ಮತಿಯಿಂದುಳಿದೋಡಿ ಬಂ
ದು ಏಿಾ | ತನುವವಿಕಾರಮಂಪಡೆದುಮನ್ಯನೃಪಾಲನ ಸೇವೆಯಿಂದೆಜೀ|
ವನನೊಸಗುತ್ತುಮಿನ್ನುಮಕಟಾ ಬರ್ದುಕಿರ್ದ್ದಪೆನಾರ್ಗೆ ಪೇಳ್ವೆಸಾಂ ||೧||

ಈ ಅಶ್ವಶಾಲೆಯಲ್ಲಿ ಬೆಳಗಾಯಿತೆಂದರೆ ಕುದುರೇ ಆಳುಗಳಸಂಗಡ ಹೊಡೆದಾಡಿಕೊಂಡು ಇಲ್ಲಿನ ಕೆಲಸಗಳನ್ನೆಲ್ಲಾನೇರ್ಪಡಿಸುವುದು ಬಹು ಕಷ್ಟ, ಬಹು ಕಷ್ಟ. ಇಲ್ಲಿ ಕೆಲಸವಾಡತಕ್ಕವರು ಎದುರಿಗಿದ್ದರೊಂದು ಪ್ರಕಾರ, ಕಣ್ಣುಮರೆಯಾದರೊಂದು ಪ್ರಕಾರ. ಇದರಮೇಲೆ ಮಹಾರಾಜನು ಸಂಚಾರಕ್ಕಾಗಿ ಯಾವಾಗ ರಥವನ್ನು ಅಪೇಕ್ಷಿಸುವನೋ! ಯಾವಾಗ ಕುದುರೆಯನ್ನು ಅಪೇಕ್ಷಿಸುವನೊ! ಎಂದು ಎರಡುಹೊತ್ತೂ ಇಲ್ಲೇ ಕಾದುಬಿದ್ದಿರಬೇಕು. ಈ ಕಷ್ಟಗಳೆಲ್ಲಾ ಮೇಲ್ಪಟ್ಟ ಅಧಿಕಾರಿಗಳಿಗೆ ಸ್ವಲ್ಪವೂ ತಿಳಿಯುವುದಿಲ್ಲ. ಕೆಲಸದಲ್ಲೇನಾದರೂ ಅಪ್ಪಿತಪ್ಪಿ ಸ್ವಲ್ಪ ಏರು ಪೇರಾದರೆ, ಅದನ್ನು ಆಕ್ಷೇಪಿಸುವುದಕ್ಕೆ ಮಾತ್ರ ಅವರಿಗೆ ಚೆನ್ನಾಗಿತಿಳಿಯುವುದು. ಇದೆಲ್ಲಾ ನನ್ನ ಅನುಭವದಿಂದಲೇ ನನಗೆ ಚೆನ್ನಾಗಿ ಗೊತ್ತಾಗಿದೆ.

---

* || ರಾಗ | ವರಾಳಿ | ಆದಿತಾಳ ||
(ವರನಾರದ ಎಂಬಂತೆ)

ಇದನಾರಿಗೆ ನಾ ಪೇಳಲಿ | ಹೃದಯಾಂತರ್ಗತ ದುಃಖವ ಹಾ ||ಪ|| ಕುದಿಯುತ್ತಿದೆ ಮಾನಸಮುಂದಿನ | ಕಾರ್ಯವೆ ತೋರದಕ್ಕಟಾ ||ಅ|| ಬಹಳವಾಗಿಬಳಲಿ ಪಾಳಡವಿಯಲಿ | ಮಹಾನಿದ್ರೆಗೈಯುತಲಿರ್ದಾ | (ಎನ್ನ) ಮಹಿಳಾಮಣಿಯಾಗಿಹ ಕಾಂತೆಯ | ನೋಸದಿ ಬಿಟ್ಟುಬಂದೆ ಹಾ ||೧|| ತೊರೆದು ರಾಜ್ಯವನ್ನು ದುರ್ವಿಧಿವಶದಿ | ವಿರೂಪಾಂಗನಾಗಳಲುತ್ತ | (ಇಂತು) ಪರರಾಯನ ಸೇವೆಯಮಾಡುತ | ಪಾಪಿಯವೋಲ್ ಜೀವಿಪೆ ||೨||

ಮುಖ್ಯವಾಗಿ ಪರಸೇವೆಯೇ ಕಷ್ಟ. ಇಷ್ಟು ಕೆಲಸಗಳಿದ್ದರೂ ಕೂಡ ಪದೇ ಪದೇ ನನ್ನ ಪ್ರಿಯೆಯನ್ನು ಸ್ಮರಿಸಿಕೊಂಡು ಸ್ಮರಿಸಿಕೊಂಡು, ಮನಸ್ಸಿನಲ್ಲೇ ಕುದಿಯುತ್ತಿದೇನೆ. ಇದರಿಂದ ಹಗಲಿರುಳೂ ಸರಿಯಾಗಿ ಆಹಾರವೂ ನಿದ್ರೆಯೂ ಇಲ್ಲದೆ ಹುಚ್ಚು ಹಿಡಿದವನಂತೆ ಇದೇನೆ.

ಕಂ|| ಪಸಿವಿಂ ಬಾಯಾರಿಕೆಯಿಂ |
ಬಿಸುಸುಯ್ದು ಬಳಲ್ದು ನೆನೆಯುತೀಕುಮತಿಯನಾ |
ಬಿಸಜಾಕ್ಷಿಯೆಲ್ಲಿ ತಾಂ ಪವ |
ಡಿಸುವಳೊ ಮೇಣಾವರೀತಿಯಿಂ ಜೀವಿಪಳೋ ||೧೦||

ವಾ—(ಬರುತ್ತ ಕೇಳಿ)ಬಾಹುಕನೆ, ನೀನೇತಕ್ಕೆ ಹೀಗೆಹೇಳುವೆ ?

ಬಾ—ಅಯ್ಯಾ, ಯಾವನೋ ಒಬ್ಬ ಮಂದಬುದ್ಧಿಯು ತನಗೆ ಕಷ್ಟದಶೆ ಬಂದಾಗ ವನವಾಸಕ್ಕೆ ಬಂದು, ಅಲ್ಲಿ ಅತಿಪ್ರಿಯಳಾದ ತನ್ನ ಪತ್ನಿಯನ್ನು ಅಗಲಿ, ಅಹೋರಾತ್ರಿಯಲ್ಲೂ ಅವಳನ್ನು ಸ್ಮರಿಸಿಕೊಂಡು ಸ್ಮರಿಸಿಕೊಂಡು, ದುಃಖಪಡುತ್ತ ಈ ಪದ್ಯವನ್ನು ಹೇಳುತಿದ್ದನು. ಅದು ನನ್ನ ಜ್ಞಾಪಕಕ್ಕೆ ಬಂದುದರಿಂದ ಹೇಳಿದೆನು.

ವಾ—ಹಾ ! (ಚಿಂತಿಸುತ್ತ ದುಃಖಿಸುವನು)

ಬಾ—ಅಯ್ಯಾ, ನೀನೇತಕ್ಕೆ ದುಃಖಿಸುವೆ ?

ವಾ—ಬಾಹುಕನೆ, ಈ ಪ್ರಸ್ತಾಪದಿಂದ ಪೂರ್ವದಲ್ಲಿ ನಮ್ಮ ಸ್ವಾಮಿಯಾಗಿದ್ದ ನಳಮಹಾರಾಜನಿಗೆ ಸಂಭವಿಸಿದ ಕಷ್ಟದಶೆಯನ್ನು ನೆನೆದುಕೊಂಡು ನನಗೆ ದುಃಖವುಂಟಾಯಿತು.

ಬಾ—ಯಾವಯಾವಕಾಲಕ್ಕೆ ಯಾರುಯಾರಿಗೆ ಏನೇನು ಕಷ್ಟಬರುವುದೊ ತಿಳಿಯುವುದಕ್ಕಾಗುವುದಿಲ್ಲ. ಆದರೆ ಪ್ರತ್ಯಕ್ಷದಲ್ಲಿ ಸ್ವಾಮಿಭಕ್ತಿಯನ್ನು ತೋರಿಸತಕ್ಕ ಸೇವಕರು ಈ ಪ್ರಪಂಚದಲ್ಲಿ ಬಹುಮಂದಿ ಇರುವರು. ನಿನ್ನಹಾಗೆ ಪರೋಕ್ಷದಲ್ಲೂ ಕೂಡ ಈ ಪ್ರಕಾರ ಸ್ವಾಮಿಭಕ್ತಿಯನ್ನಿಟ್ಟಿರತಕ್ಕವರು ಸಿಕ್ಕುವುದು ದುರ್ಲಭ.

ವಾ—ಬಾಹುಕನೆ, ಈ ಪ್ರಸ್ತಾಪದಲ್ಲಿ ಮರೆತಿದ್ದೆನು. ಈ ದಿವಸ ಮಹಾರಾಜನ ವಾಯುಸಂಚಾರಕ್ಕೆ ಯಾವಕುದುರೆಯನ್ನು ಕಳುಹಿಸಿಕೊಡಲಿ?

ಬಾ—ಬಾಹ್ಲೀಕದೇಶದ ಉಚ್ಚೈಃಶ್ರವಸ್ಸೆಂಬ ಕುದುರೆಯನ್ನು ಕಳುಹಿಸಿ ಕೊಡು.

ವಾ—ಹಾಗೇ ಆಗಲಿ. (ತೆರಳಿದನು)

ಬಾ—ನನ್ನ ಸಾರಥಿಯಾಗಿದ್ದ ವಾರ್ಷ್ಣೇಯನು, ನನ್ನ ಮಕ್ಕಳನ್ನು ಕರೆದುಕೊಂಡು ಹೋಗಿ ವಿದರ್ಭದೇಶದಲ್ಲಿ ಬಿಟ್ಟುಬಂದಾಗಳಿಂದಲೂ, ನನ್ನ ಶತ್ರುವಿನ ಕೈಕೆಳಗಿರುವುದಕ್ಕಿಷ್ಟವಿಲ್ಲದೆ ಈ ರಾಜಧಾನಿಯಲ್ಲಿ ಸೇರಿಕೊಂಡಿರುವಹಾಗಿದೆ. ಇವನು ಬಹುಕಾಲದಿಂದ ನನ್ನ ಬಳಿಯಲ್ಲಿ ಸೇವೆಮಾಡಿಕೊಂಡಿದ್ದವನಾದರೂ ಈಗ ನನ್ನ ಗುರುತನ್ನು ಹಿಡಿಯಲಾರನು. ಹೀಗಿರುವಲ್ಲಿ ಅಪರಿಚಿತರಾದವರಿಗೆ ನನ್ನ ಗುರುತು ಸಿಕ್ಕುವುದೆಂದರೇನು! ಈ ಅವಸ್ಥೆಯಲ್ಲಿ ಹೀಗಿರುವುದೇ ನನಗೆ ಬಹಳ ಅನುಕೂಲವಾಗಿರುವುದು. ಇದುವರೆಗೂ ನಡೆದ ಸಂಗತಿಗಳನ್ನೆಲ್ಲಾ ನೆನೆಮುಕೊಂಡರೆ, ನನಗೇನೋ ಸ್ವಪ್ನವಾದಹಾಗಿದೆ. ಇದೆಲ್ಲಾ ಮಹಾತ್ಮನಾದ ಕಾರ್ಕೋಟಕನು ಹೇಳಿದಂತೆ ಪಾಪಿಯಾದ ಕಲಿಯ ಪ್ರೇರಣೆಯಿಂದಲೇ ನಡೆದಿರುವುದೇ ಹೊರತು ಬೇರೆಯಿಲ್ಲ.

ಮ|| ಸ್ರ|| ಕಲಿಯಿಂದಂ ಸರ್ವರುಂ ತಾಂಸಿರಿಯಕಳೆದುಕೊಂಬರ್ವನಾವಾಸಗೈವರ್ |
ಕಲಿಯಿಂದಂ ಸರ್ವರುಂ ದುರ್ಮತಿಗಳೆನಿಸುವರ್ದುರ್ದಶಾಧೀನರಪ್ಪರ್ |
ಕಲಿಯಿಂದಂ ಸರ್ವರುಂ ಬಂಧುಗಳನುಳಿದು ಚಿಂತಾಗ್ನಿ ಸಂತಪ್ತರಪ್ಪರ್ |
ಕಲಿಯಿಂದಂ ಸರ್ವರುಂ ಜೀವಿಪರನುಚಿತಕಾರ್ಯಕ್ಕೊಡಂಬಟ್ಟು ಸತ್ಯಂ||೧೧||

(ನೋಡಿ) ಇತ್ತಲಾಗಿ ಯಾರೋ ಇಬ್ಬರು ಬ್ರಾಹ್ಮಣರು ಬರುವಂತಿದೆ.

(ಪರ್ಣಾದ ಕಾಷ್ಠಾದರು ಬರುವರು)

ಪರ್ಣಾದ—(ಹಿಂದೆನೋಡಿ) ಎಲಾ ಮಗೂ ಬಾರೋ, ಎಲ್ಲಾದರೂ ತಪ್ಪಿಸಿಕೊಂಡು ಹೋಗೀಯೆ.

ಕಾಷ್ಠಾದ—(ಗಂಟುಹೊತ್ತುಕೊಂಡು ಬಂದು) ಈ ಗಂಟನ್ನು ಯಾರು ಹೊತ್ತಾರು? ಕತ್ತೆಭಾರ! (ಎತ್ತಿಹಾಕುವನು)

ಪ—(ನೋಡಿ) ಛೀ ಭ್ರಷ್ಟ, ಹೊತ್ತುಕೊಳ್ಳೊ, ಹೊತ್ತುಕೊಳ್ಳೊ, ಯಾರಾದರೂ ಎತ್ತಿಕೊಂಡು ಹೋದಾರು!

ಕಾ—ಯಾರಾದರೂ ಎತ್ತಿಕೊಂಡು ಹೋಗಲಿ! ನಾನು ಹೊರಲಾರೆನು. (ಪರಾಙ್ಮುಖನಾಗುವನು)

ಪ—(ನೋಡಿ) ಹು! ಈಗಿನ ಕಾಲದ ಹುಡುಗರೇ ಹೀಗೆ, ಸ್ವಲ್ಪವೂ ಹೇಳದಹಾಗೆ ಕೇಳುವುದಿಲ್ಲ. ಇನ್ನೇನು ಮಾಡಲಿ। ನಾನಾದರೂ ಹೊತ್ತುಕೊಳ್ಳುತ್ತೇನೆ. (ಹೊತ್ತುಕೊಂಡು ಹೊರಡುವನು.)

ಬಾ—ಸ್ವಾಮೀ, ಯಾವದೇಶ?

ಪ—ಛೀ, ಛೀ, ದೂರ ಇರು, ದೂರ ಇರು.

ಕಾ—ಇವನು ಯಾವನೋ ಚಂಡಾಲ!

ಬಾ—(ಆತ್ಮ) ನಿಜ, ನಿಷ್ಕಾರಣವಾಗಿ ಧರ್ಮಪತ್ನಿಗೆ ಮೋಸಮಾಡಿದ ನಾನು ಚಂಡಾಲನೇ ಸರಿ. (ಪ್ರ) ಸ್ವಾಮಿ ನಾನು ಚಂಡಾಲನಲ್ಲ.

ಪ—ಹಾಗಾದರೆ, ಯಾರಪ್ಪಾ?

ಬಾ—ನಾನೊಬ್ಬ ರಾಜಕೀಯನು.

ಪ—ನಿನ್ನರೂಪವನ್ನು ನೋಡಿ ಭ್ರಾಂತಿಪಟ್ಟೆನಯ್ಯಾ. ಕೋಪಿಸಿಕೊಳ್ಳಬೇಡ. ನಮ್ಮದು ವಿದರ್ಭದೇಶವಯ್ಯಾ. (ಗಂಟನ್ನಿಳುಹಿ, ಮಗನನ್ನು ನೋಡಿ) ಎಲಾ ಪ್ರಶ್ನೆಮಾಡೊ.

ಕಾ—ಆಗಲಿ, ಇದೋಮಾಡುವೆನು.

ಕಂ|| ನೆರೆಮಾರ್ಗಾಯಾಸದೆ ಮೈ |
ಮರೆದು ಮಲಂಗಿರ್ದ, ತನ್ನಸಹಧರ್ಮಿಣಿಯಂ |
ತೊರೆದು ಮಹಾರಣ್ಯದೊಳವ|
ಳರೆಸೀರೆಯ ಪರಿದುಕೊಂಡು ಪೋದವನುಂಟೇ ||೧೩||

ಬಾ—(ಆತ್ಮ) ಆಹಾ! ಇದು ನನ್ನ ಭಾಗ್ಯವೇ? ಅಲ್ಲೇದು, ಈ ಮಾತು ಹುಟ್ಟುವುದಕ್ಕೆ ನಿಮಿತ್ತವೇನೋ! ವಿಚಾರಿಸಿ ತಿಳಿಯುವೆನು. (ಪ್ರ) ಸ್ವಾಮಿ, ತಾವು ಈ ಪ್ರಶ್ನೆಯನ್ನು ಮಾಡುವುದಕ್ಕೆ ಕಾರಣವೇನು?

ಪ—ಅಯ್ಯಾ, ಕೇಳು ನಮ್ಮ ಭೀಮಮಹಾರಾಜನು ಈ ಪ್ರಶ್ನೆಗೆ ಸರಿಯಾದ ಉತ್ತರವನ್ನು ತಿಳಿದುಕೊಂಡು ಬಂದವರಿಗೆ ಸರ್ವಮಾನ್ಯಗ್ರಾಮ

ವನ್ನು ಕೊಡುವುದಾಗಿ ವಾಗ್ದಾನಮಾಡಿರುವನು. ಅದಕ್ಕಾಗಿ ನಮ್ಮ ದೇಶದ ಅನೇಕ ಬ್ರಾಹ್ಮಣರು, ದಿಕ್ಕುದಿಕ್ಕಿಗೂ ತೀರ್ಥಯಾತ್ರೆಗೆ ಹೊರಟು ಅಲ್ಲಲ್ಲಿ ಈ ಪ್ರಶ್ನೆಯನ್ನು ಮಾಡುತ್ತಿರುವರು. ಇದುವರೆಗೂ ಇದಕ್ಕೆ ಯಾರೂ ಉತ್ತರವನ್ನು ಹೇಳಲ್ಲ. ನಾನೂ ಅವರಲ್ಲೊಬ್ಬನು. ಬಡವನಾಗಿದ್ದೇನೆ. ನನ್ನ ಪುಣ್ಯದಿಂದ ಯಾರಾದರೂ ಇದಕ್ಕೆ ಸರಿಯಾದ ಉತ್ತರವನ್ನು ಹೇಳಿದರೆ ಬದುಕಿಕೊಳ್ಳುತ್ತೇನೆ.

ಬಾ—ಹಾಗಾದರೆ, ಇಟಕ್ಕೆ ನಾನು ಉತ್ತರವನ್ನು ಹೇಳುತ್ತೇನೆ. ಪಾಪ, ಬಡ ಬ್ರಾಹ್ಮಣರು ಬದುಕಿಕೊಳ್ಳರಿ.

ಪ—ಮಹರಾಯ, ಮಹರಾಯ.

ಬಾ—ಕೇಳಿ,

ಕಂ|| ಹತವಿಧಿವಶದಿಂ ತನ್ನಯ |
ಪತಿ ತನ್ನಂ ಕುಮತಿಯಾಗಿ ಬಿಡಲೊರ್ಮೆಪತಿ |
ವ್ರತೆ ಕೋಪಂಗೊಳ್ಳದೆ ಬೇ |
ಎತಮನವಂಗೋಸುಗಂ ತಳೆದುಕೊಂಡಿರ್ಪಳ್ ||೧೩||

ಪ—ಏನು ? "ಹತವಿಧಿವಶದಿಂ" ಎಂದೊ ?

ಬಾ—ಹೌದು.

ಪ—ಅಹ! ಇದು ಸರಿಯಾದ ಉತ್ತರದಹಾಗೆ ಕಾಣುವುದು. ಎಲಾ ನಿನಗೆ ಗೊತ್ತಾಯಿತೇನೊ ?

ಕಾ—ಒಹೊ ! ಗೊತ್ತಾಯಿತು. ಬೇಕಾದರೆ ಹೇಳುತ್ತೇನೆ.

ಪ—ಹಾಗಾದರೆ ಸರಿ, ಮರೆಯಬೇಡ.

ಕಾ—ಎಂದಿಗೆ ಮರೆತೇನು ! ಉರುಹಾಕಿಕೊಳ್ಳುತ್ತಲೇ ಇರುತ್ತೇನೆ. "ಹತಪಿಧಿವಶದಿಂ ತನ್ನಯ" (ಎಂದು ಮೆಲ್ಲಗೆ ಹೇಳುತ್ತಿರುವನು)

ಬಾ—ಸ್ವಾಮಿ, ತಮ್ಮ ನಾಮಧೇಯವೇನೊ ?

ಪ—ನನ್ನನ್ನು ಪರ್ಣಾದನೆಂದು ಹೇಳುತ್ತಾರೆ.

ಬಾ—ತಮ್ಮ ಮಗನ ನಾಮಧೇಯವೇನು ?

ಪ—ಇವನ ಹೆಸರು ಕಾಷ್ಠಾದನೆಂದು.

ಬಾ—(ಆತ್ಮ) ಇವರ ಹೆಸರುಗಳನ್ನು ಕೇಳಿದರೆ ನಗುಬರುವಹಾಗಿದೆ.

(ಪ್ರ) ಸ್ವಾಮಿ, ತಮ್ಮ ಗಮನಕ್ಕೆ ನಾನೊಂದು ಗಳಿಗೆ ವಿಘ್ನವನ್ನು ಮಾಡಿದೆನು. ಕ್ಷಮಿಸಬೇಕು.

ಪ—ಹಾಗೆಂದರೇನು ? ಮಹರಾಯ, ಮಹೋಪಕಾರವನ್ನು ಮಾಡಿದೆ, ಇನ್ನು ನಾವು ಹೋಗಿಬರುವೆವು.

ಬಾ—ಇದೊ, ವಂದಿಸುವೆನು. (ವಂದನೆಮಾಡುವನು.)

ಇಬ್ಬರೂ—ನಿನಗೆ ಮಂಗಳವಾಗಲಿ. (ಗಂಟನ್ನು ತೆಗೆದುಕೊಂಡು ತೆರಳಿದರು)

ಬಾ—ಈ ಬ್ರಾಹ್ಮಣರು ಮಾಡಿದ ಪ್ರಶ್ನೆಯಿಂದ ನನ್ನ ಪ್ರಿಯೆಯು ತಮ್ಮ ತೌರುಮನೆಯನ್ನು ಸೇರಿದಳೆಂದು ತಿಳಿದಹಾಗಾಯಿತು. ಅಲ್ಲಿಗೆ ಯಾವರೀತಿಯಿಂದ ಹೋಗಿಸೇರಿದಳೋ, ಅದು ಮಾತ್ರ ತಿಳಿಯ ಲಿಲ್ಲ, ಹೇಗಾದರೂ ಸೇರಲಿ ! ನಮ್ಮನ್ನು ಅಗಲಿ ಹಂಬಲಿಸುತ್ತಿದ್ದ ನನ್ನ ಮಕ್ಕಳಿಗೆ ಕೊಂಚ ಅವಲಂಬನವಾಯಿತು. ಇದರಿಂದ ಈ ದಿವಸ ನನ್ನ ದುಃಖವು ಅರ್ಧ ಪರಿಹಾರವಾಯಿತು.

ಕಂ|| ಪಿಂದಡವಿಯೊಳಾಂ ಬಗೆದಿ |
ರ್ದ್ದಂದದೆತೌರೂರನೆಯ್ದಿಸತಿ, ಬಿಟ್ಟೆಮ್ಮಂ |
ದಂದುಗವಡುತಿರ್ದ್ದಣುಗ |
ರ್ಗ್ಗೊಂದಿನಿಸವಲಂಬಮಾದುದಾಂನಿಶ್ಚಿಂತಂ ||೧೪||

ಅಯ್ದನೆಯ ಅಂಕವು ಮುಗಿದುದು.

ಷಷ್ಠಾಂಕಂ.

ವಿದರ್ಭನಗರದ ಅರಮನೆಯ ಮುಂಭಾಗ.

(ಪರ್ಣಾದ ಸುದೇವರ ಪ್ರವೇಶ)

ಪರ್ಣಾದ—ಸುದೇವಭಟ್ಟರಿಗೆ ನಮಸ್ಕಾರ. (ತಲೆಬಾಗುವನು.)

ಸುದೇವ—(ತಲೆಬಾಗಿ) ನಮಸ್ಕಾರ, ಓಹೋಹೋ! ಏನು ಸ್ವಾಮಿ ಪರ್ಣಾದರೆ, ಅಯೋಧ್ಯಾನಗರದಿಂದೇನೋ ಸಮಾಚಾರವನ್ನು ತಂದುಬಿಟ್ಟರಲ್ಲಾ ಅದಕ್ಕಾಗಿ ಅರಮನೆಯಲ್ಲಿ ತಮಗೇನು ಬಹುಮಾನವಾಯಿತು?

ಪ—ಸ್ವಲ್ಪ ಹೆಚ್ಚು ಕಡಮೆಯಾಗಿ ತಮಗಾದಷ್ಟೇ ನನಗೂ ಆಯಿತು.

ಸು—(ಆತ್ಮ) ಓಹೋ! ಇವರೂ ನನ್ನ ಸಮಕ್ಕೆ ಬಂದರು. (ಪ್ರ) ನನಗಾದ ಬಹುಮಾನವೇನು? ಏನೋ ಒಂದು ಸರ್ವಮಾನ್ಯ ಗ್ರಾಮ, ಹತ್ತುಸಾವಿರ ಹೊನ್ನು.

ಪ—(ಆತ್ಮ) ಇವರಿಗೆ ಬಂದಿರುವುದರಲ್ಲಿ ನನಗೆ ಅರ್ಧವೂ ಬಂದಿಲ್ಲ. ಆದರೂ ನಾನೇನೊ ಗಂಭೀರವಾಗಿ ಹೇಳಿಕೊಂಡೆ. ಇವರಿಗೆ ಬೇಕಾದಷ್ಟು ಪ್ರಯೋಜನವಾಗಿದ್ದರೂ "ಏನೋ ಒಂದು ಸರ್ವಮಾನ್ಯ ಗ್ರಾಮ, ಹತ್ತುಸಾವಿರ ಹೊನ್ನು" ಎಂದು ಅಲಕ್ಷ್ಯವಾಗಿ ಹೇಳುತ್ತಾರೆ. ಇವರ ಸ್ವಭಾವವೇ ಹೀಗೆ. ಎಷ್ಟು ಕೊಟ್ಟರೂ ತೃಪ್ತಿಯಿಲ್ಲ. (ಪ್ರ) ಸ್ವಾಮಿ ಚೇದಿದೇಶದಲ್ಲಿ ತಮಗೆ ದಮಯಂತಿ ಗೊತ್ತಾದಬಗೆ ಹೇಗೆ?

ಸು—ಹೇಗೇನು? ಚೇದಿರಾಯನ ತಾಯಿ ನಮ್ಮ ದಮಯಂತಿಗೆ ಚಿಕ್ಕಮ್ಮನಮಾವೆಯಾಗಬೇಕು. ಆದಕಾರಣ ಅಲ್ಲೇನಾದರೂ ಹೋಗಿ ಸೇರಿರಬಹುದೆಂದು ಚೇದಿನಗರಕ್ಕೆ ಹೋದೆ.

ಪ—ಆಹ! ನಿಮ್ಮ ಊಹೆ ಸರಿಯಾದುದು. ಆಮೇಲೆ?

ಸು—ಆಮೇಲೆ ಚೇದಿರಾಯನ ಅರಮನೆಯಲ್ಲಿ ಯಾವಳೋ ಒಬ್ಬ ಸೈರಂಧ್ರಿ ಹೊಸದಾಗಿ ಬಂದು ಸೇರಿರುವಳೆಂದು ಸಮಾಚಾರವನ್ನು ಕೇಳಿ,

ಆಕೆಯನ್ನು ನೋಡುವುದು ಹೇಗೆಂದು ಯೋಚಿಸುತ್ತಿದ್ದೆ. ಅಷ್ಟರಲ್ಲೇ ಅರಮನೆಯಲ್ಲಿ ಸ್ವಸ್ತಿವಾಚನವಾಗತಕ್ಕ ಒಂದು ಪ್ರಕರಣವೊದವಿತು. ಅದನ್ನು ಕೇಳಿದೊಡನೆಯೇ ರಾಜಪುರೋಹಿತರ ಪರಿಚಯವನ್ನು ಮಾಡಿಕೊಂಡು ಆದಿವಸ ನಾನೂ ಅಲ್ಲಿಗೆ ಹೋದೆ.

ಪ—ನೀವು ಘಟ್ಟಿಗರಯ್ಯಾ! ಆಮೇಲೆ?

ಸು—ಆಮೇಲೆ ಆ ಅರಮನೆಯಲ್ಲಿ ರಾಜಕುಮಾರಿಯಾದ ಸುನಂದಾದೇವಿಯು ಬಳಿಯಲ್ಲಿ ಆ ಸೈರಂಧ್ರಿಯನ್ನು ಕಂಡೆ. ಆಕೆಯು ಸರೋವರದಿಂದ ಕಿತ್ತುಹಾಕಿ, ಕೆಸರಂಟಿ ಮಲಿನವಾದ ತಾವರೆಯ ಬಳ್ಳಿಯಂತೆಯೂ, ಪೂರ್ಣ ಚಂದ್ರಗ್ರಹಣವುಳ್ಳ ರಾತ್ರಿಯಂತೆಯೂ ದೀನಳಾಗಿಯೂ, ಕಾಂತಿಹೀನಳಾಗಿಯೂ ಇದ್ದಳು. ನಾನು ನೋಡಿ, ಇವಳೇ ದಮಯಂತಿಯೆಂದು ಗುರುತು ಹಿಡಿದೆ.

ಪ—ದಮಯಂತಿ ಅಲ್ಲಿ ಅಜ್ಞಾತವಾಸ ಮಾಡುತ್ತಿದ್ದಳೆ?

ಸು—ಹೌದು.

ಪ—ಅಲ್ಲಿ ಅವಳ ಅನುಬಂಧಿಗಳು ಇದ್ದಮೇಲೆ ಅವರಿಗೆ ಅವಳಗುರುತಿಲ್ಲವೆ?

ಸು—ಕೇಳಿ, ಅವಳು ಪತಿವ್ರತೆಯಾದಕಾರಣ,

ಶ್ಲೋ॥ ಆರ್ತಾರ್ತೇಮುದಿತೇಹೃಷ್ಟಾಪ್ರೋಷಿತೇ ಮಲಿನಾಕೃಶಾ।
ಮೃತೇಮ್ರಿಯೇತಯಾ ನಾರೀಸಾಸ್ತ್ರೀಜ್ಞೇಯಾ ಪತಿವ್ರತಾ॥

ಎಂಬ ವಚನಕ್ಕನುಸಾರವಾಗಿ ಪತಿಯನ್ನಗಲಿದ ವ್ಯಸನದಿಂದ ಕೃಶಳಾಗಿಯೂ, ಮಲಿನೆಯೂಗಿಯೂ ಇದ್ದಳು. ಅದರಿಂದ ಅವಳ ಗುರುತನ್ನು ಅವರು ಹಿಡಿಯಲಿಲ್ಲ. ದಮಯಂತಿಗೂ ಆ ಪಾಪೆ ಚೆನ್ನಾಗಿ ಗೊತ್ತಿರಲಾರದು.

ಪ—ಲೋಕದಲ್ಲಿ ಎಷ್ಟೋ ಪಾಪೆಗಳು ಇರುತ್ತವೆ. ಅದೆಲ್ಲಾ ಸಾಧಾರಣವಾಗಿ ಜನಗಳಿಗೆ ಎಲ್ಲಿ ಗೊತ್ತಾಗುವುದು? ನಿಮಗೆ ಗೊತ್ತಾದುದು ಹೇಗೆ?

ಸು—ಕೇಳಿ, ಅವಳ ಹುಬ್ಬುಗಳ ಮಧ್ಯದಲ್ಲಿ ಒಂದು ಕೆಂಪು ಮಚ್ಚೆ ಇರುವುದು. ಅದನ್ನು ಬಾಲ್ಯದಿಂದಲೂ ನಾನು ನೋಡಿರುವೆನು. ಆ ಗುರುತಿನಮೇಲೆ ಇವಳು ಇಂಥವಳೆಂದು ನನಗೆ ಗೊತ್ತಾಯಿತು.

ಪ—ಇದು ಒಪ್ಪತಕ್ಕ ಮಾತು. ಆಮೇಲೆ?

ಸು—ಆಮೇಲೆ ನಾನು ಅವಳ ಯೋಗಕ್ಷೇಮಗಳನ್ನು ವಿಚಾರಿಸಿ ಇವಳು ಇಂಥವಳೆಂದು ಆ ರಾಜಮಾತೆಗೆ ತಿಳಿಸಿದೆನು. ಕೂಡಲೆ ಆಕೆಯು ದಮಯಂತಿಯನ್ನು ಬಹು ಪ್ರೀತಿಯಿಂದ ತಬ್ಬಿಕೊಂಡು ಕಣ್ಣೀರು ಸುರಿಸಿದಳು.

ಪ—ಯಾರಿಗಾದರೂ ಕರುಳಸಂಬಂಧವೆಂಬುದು ಹೀಗೆ ಮಾಡಿಸುವುದು. ಆಮೇಲೆ?

ಸು—ಕೇಳಿ, ಈ ಮಾತನ್ನು ನಾನು ತಿಳಿಯಪಡಿಸಿದುದಕ್ಕಾಗಿ ಆ ರಾಜಮಾತೆಯು ನನಗೆ ಉಡುಗೆರೆಯನ್ನು ಕೊಟ್ಟು, ಕೂಡಲೆ ತನ್ನ ಮಗನಾದ ಸುಬಾಹುರಾಜನ ಅನುಮತಿಯಿಂದ ದಮಯಂತಿಗೆ ಬಹಳ ಮರ್ಯಾದೆಮಾಡಿ ತನ್ನ ಪರಿಜನವನ್ನೂ ಸೇನೆಯನ್ನೂ ಕೂಡಲಿಟ್ಟು ಅವಳನ್ನು ತೌರುಮನೆಗೆ ಕಳುಹಿಸಿಕೊಟ್ಟಳು.

ಪ—ಓಹೋ? ಅಲ್ಲೂ ಬೇರೆ ಉಡುಗೆರೆಯನ್ನು ಹೊಡೆದಿರಿ.

ಸು—ಇದೆಲ್ಲಾ ಏನು? ದೈವಯೋಗದಿಂದ ನಳಮಹಾರಾಜನು ಇವಳ ಜೊತೆಯನ್ನು ಸೇರಿದರೆ ಆಗ ನಮ್ಮ ಪುಣ್ಯವನ್ನು ನೋಡಬೇಕು.

ಪ—ದೈವಯೋಗದಿಂದ ಹಾಗಾದರೆ ಸಾಕು. (ಆತ್ಮ) ಇವರಾಶೆಗೆ ಪಾರವೇ ಇಲ್ಲ. (ಪ್ರ) ಇದು ಸರಿ ಸ್ವಾಮಿ, ನಾನಿಲ್ಲಿಗೆ ಬಂದೊಡನೆ ನಮ್ಮ ಮಹಾರಾಣಿಯೂ ದಮಯಂತಿಯೂ ಸಹ ನಮ್ಮ ರಾಜಕುಮಾರನಿಗೆ ಅತ್ಯಂತ ಮಿತ್ರನಾದ ವಸುದೇವನನ್ನು ಅಯೋಧ್ಯಾನಗರಕ್ಕೆ ಏತಕ್ಕೋಸ್ಕರ ಕಳುಹಿಸಿಕೊಟ್ಟರು?

ಸು—ಅದೇನೋ ಬಹಳ ರಹಸ್ಯವಾಗಿದೆ. ಯಾರಿಗೂ ತಿಳಿಯದು.

ಪ—ರಹಸ್ಯವೇನು? ಆ ಅಶ್ವಶಾಲೆಯಲ್ಲಿ ನಾನು ನೋಡಿಕೊಂಡು ಬಂದ ಮನುಷ್ಯನನ್ನು ಇಲ್ಲಿಗೆ ಬರಮಾಡುವುದಕ್ಕಾಗಿರಬಹುದು. ಆದರೆ, ಹೆಂಗುಸರ ಧೈರ್ಯವೇ ಧೈರ್ಯ. ಗಂಡುಸರಿಗೆ ಕೂಡ ಥಟ್ಟಥಟ್ಟನೆ ಹೀಗೆ ಹೀಗೆಮಾಡಬೇಕೆಂಬುದು ಗೊತ್ತಾಗುವುದು ಕಷ್ಟ. ಇವರ ಬುದ್ಧಿಯಾದರೂ ಪ್ರಳಯಾಂತಕವಾದುದು.

ಸು–(ಪಶ್ಚಿಮದಿಕ್ಕನ್ನುನೋಡಿ) ಓಹೋ! ಆಗಲೇ ಸಾಯಂಕಾಲವಾಯಿತು.

ಕಂ|| ಪಡುವಣದೆಸೆಯೊಳ್ಕರೆಯಾ |
ದೊಡೆಸೂರ್ಯನಗಲ್ದುದಿನಿಯಳಂ ಕೋಕಂತಾ ||
ನುಡುಗಲ್ಸುಜ್ಞಾನಂತ |
ನ್ನೊಡಗೂಡಿದ ಸತಿಯ ನಳನಗಲ್ದಂತಿರೆವೋಲ್ ||೧||

ಪ–ಕಂ|| ಒಡನೆಯೆ ನಳನಭ್ಯುದಯಂ |
ಬಡೆವನೆನುತ್ತುದಯಿಪಿಂದುವಿದೊಸೂಚಿಪನಾ ||
ಮಡದಿಮಣಿಯುಂ ನಿಜಪ್ರಿಯ |
ನೊಡವೆರೆದಿಂತೆಸೆವಳೆಂದಿರುಳ್ಳೊಚಿಪ್ಪುದೈ ||೨||

ಇನ್ನು ಸಂಧ್ಯಾವಂದನೆಗೆ ಹೋಗಿಬರೋಣ ಬನ್ನಿ.

(ತೆರಳಿದರು.)

ಆನಂದಸ್ಥಾನ.

(ಕೃತಯುಗಪುರುಷನ ಪ್ರವೇಶ)

ಕೃತ–(ಉಲ್ಲಾಸಪಡುತ್ತಾ ಬಂದು)
ಅಹ! ಬಹಳ ಸಂತೋಷ, ಬಹಳ ಸಂತೋಷ.

* ಕಂ|| ತಳೆದರ್ದೇವರ್ಮುದಮಂ |
ಬೆಳಗಿತ್ತು ಜಗತ್ತು ನೆಲಸಿತಿಳೆಯೊಳ್ಧರ್ಮಂ ||
ಮಳೆಬೆಳೆಗಳೇಳ್ಗೆ ವಡೆದುವು !
ನಳನೃಪನಂ ಬಿಟ್ಟು ಪಾಪಿಯಹ ಕಲಿತೊಲಗಲ್ |೩||

---

* ರಾಗ | ಶಂಕರಾಭರಣ | ಏಕತಾಳ ||

(ನೋಟಿನ ಮಾದರಿ)

ಒಳ್ಳೇದೊಳ್ಳೇದಾದುದು | ಒಳ್ಳೇಕಾಲ ಬಂದುದು ||ಪ|| ನಳನನುತೊರೆದು| ತೊಲಗಲುಕಲಿಯು ||೧|| ಸುರರತಿಮುದವ | ಧರಿಸಿದರಹಹಾ | ಸಿರವಧಿಸುಖದಿಂ| ದಿರುವೆನು ನಾನು ||೨|| ಮಳೆಬೆಳೆಯಿಂದ | ಇಳೆಬೆಳಗುವುದು | ಕಳೆದುದುಪಾಪಂ | ಬಳೆದುದು ಧರ್ಮಂ ||೩||

ತ್ರೇತೆ—(ಪ್ರವೇಶಿಸಿ) ಎಲೈ ಕೃತಯುಗನೆ ಇದೇನು ಇಷ್ಟು ಸಂತೋಷ?

ಕೃ—ಎಲೆ ತ್ರೇತೆ ಈದಿವಸ ಕಲಿಯು ನಮ್ಮಪಕ್ಷದವನಾದ ನಳಮಹಾರಾಜನನ್ನು ಬಿಟ್ಟು ತೊಲಗಿದನು.

ತ್ರೇ—ಅದು ಹೇಗೆ? ಹೇಗೆ?

ಕೃ—ಕೇಳು, ವಸುದೇವನೆಂಬ ಬ್ರಾಹ್ಮಣನು ನಾಳೆ ಸೂರ್ಯೋದಯ ಕಾಲಕ್ಕೆ ಸರಿಯಾಗಿ ದಮಯಂತಿಗೆ ಪುನಸ್ಸ್ವಯಂವರವಾಗುವುದೆಂಬ ವರ್ತಮಾನವನ್ನು ಋತುಪರ್ಣರಾಯನಿಗೆ ತಿಳಿಸಿದನಷ್ಟೆ?

ತ್ರೇ—ಸರಿ, ಆಮೇಲೆ?

ಕೃ—ಆಮೇಲೆ ಅವನು ತನ್ನ ಸಾರಥಿಯಾದ ಬಾಹುಕನ ಸಾಮರ್ಥ್ಯದಿಂದ ಒಂದೇ ದಿವಸಕ್ಕೆ ವಿದರ್ಭದೇಶಕ್ಕೆ ಬಂದುಬಿಟ್ಟನು.

ತ್ರೇ—ಇಂತಹ ಸಾಮರ್ಥ್ಯವು ನಳಮಹಾರಾಜನಿಗೆ ಹೊರತು ಮತ್ತೆ ಯಾರಿಗೂ ಇಲ್ಲ!

ಕೃ—ಅದನ್ನು ನಾನೆಷ್ಟೆಂದು ಹೇಳಲಿ? ಮಧ್ಯಮಾರ್ಗದಲ್ಲಿ ಋತುಪರ್ಣರಾಯನು ತನ್ನ ಕರವಸ್ತ್ರವನ್ನು ಕೆಳಕ್ಕೆ ಕೆಡವಿಕೊಂಡು ಕರವಸ್ತ್ರವು ಕೆಳಕ್ಕೆ ಬಿದ್ದಿತೆಂದು ಹೇಳುವಷ್ಟರಲ್ಲಿ ಆ ರಥವು ಒಂದು ಗಾವುದ ಮುಂದಕ್ಕೆ ಹೊರಟು ಹೋಗಿತ್ತು.

ತ್ರೇ—ಆಶ್ಚರ್ಯ, ಆಶ್ಚರ್ಯ! ಆಮೇಲೆ?

ಕೃ—ಆಮೇಲೆ ಕೇಳು; ಈ ಸಾಮರ್ಥ್ಯಕ್ಕೆ ಮೆಚ್ಚಿ ಋತುಪರ್ಣರಾಯನು ಬಾಹುಕನಿಂದ ಅಶ್ವ ಹೃದಯವನ್ನು ತಾನು ತಿಳಿದುಕೊಂಡು ತನ್ನಲ್ಲಿದ್ದ ಅಕ್ಷಹೃದಯವನ್ನು ಅವನಿಗೆ ಉಪದೇಶ ಮಾಡಿಕೊಟ್ಟನು.

ತ್ರೇ—(ಸಂತೋಷದಿಂದ) ಭಾಪು ಭಾಪು, ಹಾಗಾದರೆ ಇನ್ನು ನಳಮಹಾರಾಜನು ಪುಷ್ಕರನನ್ನು ಜಯಿಸಿ, ತನ್ನ ರಾಜ್ಯವನ್ನು ಪಡೆದುಕೊಂಡ ಹಾಗೇ ಭಾವಿಸಬೇಕು.

ಕೃ—ಅದಕ್ಕೆ ಸಂದೇಹವೆ? ಇದನ್ನು ತಿಳಿದು ಅವನಲ್ಲಿ ಆವೇಶವಾಗಿದ್ದ ಆ ದುರಾತ್ಮನಾದ ಕಲಿಯು ಅವನನ್ನು ಬಿಟ್ಟುಬಿಟ್ಟನು.

ಶ್ರೀ—ಬಹಳ ಸಂತೋಷ, ಆದರೆ, ತನ್ನನ್ನು ದ್ವೇಷದಿಂದ ಬಹಳವಾಗಿ ಬಾಧಿಸಿದ ಕಲಿಯನ್ನು ನಳಮಹಾರಾಜನು ಸುಮ್ಮನೆ ಬಿಟ್ಟನೆ?

ಕೃ—ಇಲ್ಲ, ನಳಮಹಾರಾಜನು ಕೋಪದಿಂದ ಅವನಿಗೆ ಶಾಪಕೊಡುವುದಕ್ಕೆ ಯತ್ನಿಸಿದನು. ಆಗ ಕಲಿಯು ಭಯಪಟ್ಟು ಅವನಿಗೆ ಶರಣಾಗತನಾಗಿ ಹೀಗೆ ಬೇಡಿಕೊಂಡನು.

ಶ್ರೀ—ಹೇಗೆ?

ಕೃ—ಎಲೈ ಧರ್ಮಾತ್ಮನಾದ ನಳ ಮಹಾರಾಜನೆ ನಿನ್ನ ನಾಮ ಸ್ಮರಣೆಯನ್ನು ಯಾರು ಮಾಡುತ್ತಾರೊ ಅವರನ್ನು ನಾನು ಬಾಧಿಸುವುದಿಲ್ಲವೆಂದು ಬೇಡಿಕೊಂಡನು. ಅದನ್ನು ಕೇಳಿ, ದಯಾಳುವಾದ ನಳಮಹಾರಾಜನು ಕೃಪೆಯಿಂದ ಅವನನ್ನು ಬಿಟ್ಟುಬಿಟ್ಟನು.

ಶ್ರೀ—ಬಹಳ ಸಂತೋಷ, ಬಹಳ ಸಂತೋಷ.

* ಕಂ|| ನಳನೃಪನಂ ಬಿಟ್ಟಾ ಕಲಿ |
ತೊಲಗಲ್ಕಜ್ಞಾನವಳ್ಗಿದುದು ಸುಜ್ಞಾನಂ |
ತಲೆದೋರಿತಂತಧರ್ಮಂ |
ಕಳೆದುದು ಸದ್ಧರ್ಮವಡಿಯನಿಟ್ಟುದು ಜಗದೊಳ್ ||೪||

ಕೃತ— ‡ ಕಂ|| ನಳನೃಪನಕ್ಷದ್ಯೂತದೆ |
ಖಲನಹ ಪುಷ್ಕರನ ಗೆಲ್ದು ನಿಜರಾಜ್ಯ ಶ್ರೀ |
ಲಲನೆಯೊಡಗೂಡಿ ಸುಖದಿಂ |
ಸಲಹುಗೆ ಸಕುಟುಂಬನಿನ್ನಿಳಾಮಂಡಲಮಂ ||೫||

---

* ರಾಗ | ಜಿಲ್ಲಾ ಮಾಂಡ್ ಏಕತಾಳ ||
(ಕ್ಯಾಸಹಾಯಿ | ರಂಗೇಸೊ ಮೊರೆರಂಗ್ ಎಂಬಂತೆ)

ತೋರಿತೀಗ | ಸಂತೋಷಭರವು ||ಪ|| ಧೀರನಳನಿಂ | ಜಾರೆಕಲಿಯು ||ಅ|| ತೊಲಗಿತಜ್ಞಾನ | ತಲೆದೋರೆ ಜ್ಞಾನ | ಕಳೆಯೇರಿತು ಭುವನವು | ನಲಿಯುತ | ಕಳೆಯೇರಿತು ಭುವನವು | ಅಹಹಹಾ ||೧|| ಕಳೆಯಿತಧರ್ಮ | ಬೆಳೆಯಿತ್ತುಧರ್ಮ | ದಳವೇರಿತು ಕುಶಲವು | ಜಗದೊಳು | ದಳವೇರಿತು ಕುಶಲವು | ಅಹಹಹಾ ||೨||

‡ ನಳನೃಪನಿನ್ನು | ತಳೆದೊಲ್ಮೆಯನ್ನು | ಸಲಹುತ್ತಲಿರಲಿಳೆಯ | ಬಹುದಿನ | ಸಲಹುತ್ತಲಿರಲಿಳೆಯ ! ಅಹಹಹಾ ||೩||

(ಉಲ್ಲಾಸದಿಂದ ಕುಣಿಯುತ್ತ ತೆರಳಿದರು)

ಆಸ್ಥಾನ ಮಂಟಪ.

(ಭೀಮಭೂಪತಿಯ ಪ್ರವೇಶ)

ಭೀ—(ಪತ್ರಿಕೆಯನ್ನು ನೋಡುತ್ತ ಪ್ರವೇಶಿಸುವನು).

ಮಂತ್ರಿ—(ಪ್ರವೇಶಿಸಿ) ಮಹಾರಾಜನಿಗೆ ಜಯವಾಗಲಿ. (ತಲೆಬಾಗುವನು)

ಭೀ—ಮಂತ್ರಿಯೆ, ನಮ್ಮ ರಾಜಧಾನಿಯ ಎಲ್ಲೆಗಟ್ಟಿಗೆ ಅಯೋಧ್ಯಾಧೀಶ್ವರನಾದ ಋತುಪರ್ಣರಾಯನು ಬಂದಿರುವನೆಂದು ಪತ್ರಿಕೆಯನ್ನು ಕಳುಹಿಸಿರುವೆಯಷ್ಟೆ? ಈಗ ಆಕಸ್ಮಾತ್ತಾಗಿ ಆತನು ಇಲ್ಲಿಗೆ ಬಂದಿರುವುದಕ್ಕೆ ಕಾರಣವೇನಿರಬಹುದು?

ಮಂ—ಮಹಾರಾಜನೆ ನಾನೆಷ್ಟು ಯೋಚನೆ ಮಾಡಿದರೂ ಇದಕ್ಕೆ ಕಾರಣವೇ ಗೊತ್ತಾಗುವುದಿಲ್ಲ. ಇದರ ಮೇಲೆ ಆತನ ಜೊತೆಯಲ್ಲಿ ಇಬ್ಬರು ಸಾರಥಿಗಳು ಹೊರತು ಬೇರೆ ಪರಿಜನವೂ ಇಲ್ಲ. ಸೈನ್ಯವೂ ಇಲ್ಲ. ಏಕಾಂಗಿಯಾಗಿ ಬಂದಿರುವನು.

ಭೀ—(ಸ್ವಲ್ಪಯೋಚಿಸಿ) ಇರಲಿ, ಏತಕ್ಕೆ ಬಂದಿರುವನೋ ನೋಡೋಣ. ಆತನನ್ನು ಕರೆದುಕೊಂಡು ಬರುವುದಕ್ಕಾಗಿ ಪ್ರಮುಖರಾದ ಅಧಿಕಾರಿಗಳನ್ನೂ ಸೈನ್ಯವನ್ನೂ ಕಳುಹಿಸಿರುವೆಯಷ್ಟೆ?

ಮಂ-ರಾಜಮರ್ಯಾದೆಗನುಸಾರವಾಗಿ ಸಕಲವನ್ನೂ ಕಳುಹಿಸಿಕೊಟ್ಟಿರುವೆನು.

ಭೀ—ನಾವೂ ಶೀಘ್ರವಾಗಿ ಹೋಗಿ ಆತನನ್ನು ಕರೆದುಕೊಂಡು ಬರೋಣ ಬಾ. (ತೆರಳಿದರು)

ರಾಜಾಸ್ಥಾನ.

(ಭೀಮಭೂಪತಿ, ಋತುಪರ್ಣರಾಯ, ಮಂತ್ರಿ, ಪರಿಜನರ, ಪ್ರವೇಶ).

ಭೀ—(ಕೈ ಹಿಡಿದು) ರಾಯನೆ, ಈ ಪೀಠವನ್ನು ಅಲಂಕರಿಸಬೇಕು. (ಋತುಪರ್ಣನನ್ನು ಕುಳ್ಳಿರಿಸಿ) ಋತುಪರ್ಣರಾಯನೆ, ನಿನ್ನನ್ನು ನೋಡಿ ನನಗೆ ಬಹಳ ಸಂತೋಷವಾಯಿತು. ವಿಶ್ವಾಸಪೂರ್ವಕವಾಗಿ ನೀನು ಇಲ್ಲಿಗೆ ಬಂದುದಕ್ಕಾಗಿ ನಾನು ನಿನ್ನ ಯಾವ ಕೋರಿಕೆ

ಯನ್ನುನೆರವೇರಿಸಿ ಕೃತಾರ್ಥನಾಗಲಿ? ನೀನುನನ್ನಲ್ಲಿ ದಯವಿಟ್ಟು ಹೇಳಬೇಕು.

ಬಾ—(ಆತ್ಮ) ಇದೇನು! ಸ್ವಯಂವರದ ಸಮಾಚಾರವೇ ಇಲ್ಲ. ನಾನೇ ಮಂಕನೊ, ಅಥವಾ ಇವರೇನಾದರೂ ಮೋಸಮಾಡಿರುವರೊ, ಹೇಗಾದರೂ ಇರಲಿ; ಈಗ ನನ್ನ ಮರ್ಯಾದೆಯನ್ನು ನಾನು ಉಳಿಯಿಸಿ ಕೊಳ್ಳುವೆನು. (ಪ್ರ) ಭೀಮಭೂಪಾಲನೆ, ನಾನು ನಿನ್ನನ್ನು ನೋಡಿ ಬಹಳ ದಿವಸಗಳಾದಕಾರಣ ನಮಗೆಲ್ಲಾ ಹಿರಿಯನಾದ ನಿನಗೆ ವಂದನೆಯನ್ನು ಮಾಡಿ ಬರೋಣವೆಂದು ನಾನಿಲ್ಲಿಗೆ ಬಂದಿರುವೆನು. ಮತ್ತೇನೂ ಕೋರಿಕೆಯಿಲ್ಲ.

ಭೀ—ಬಹಳ ಸಂತೋಷ, ಬಹಳ ಸಂತೋಷ. ಈ ರಾಜಧಾನಿಯು ನಿನ್ನದಾಗಿಯೇ ಇರುವುದು.

ಬಾ—ಭೂಪತಿಯೇ, ನಿನ್ನಳಿಯನಾದ ನಳಮಹಾರಾಜನು ರಾಜ್ಯಭ್ರಷ್ಟನಾಗಿ ಅರಣ್ಯಪ್ರವೇಶಮಾಡಿ ಬಹಳ ದಿವಸಗಳಾದುವು; ಇನ್ನೂ ಆತನ ಸಮಾಚಾರವು ಗೊತ್ತಾಗದೆ ಇರುವುದು ಬಹಳ ವ್ಯಸನಕರವಾದುದು.

ಭೀ—ಹೌದು. ಮಾಡುವುದೇನು? ದೈವಗತಿಯು ಮೀರತಕ್ಕುದಲ್ಲ. ಈಗ ನನ್ನಳಿಯನು ಸಿಕ್ಕಿದರೆ ನಮ್ಮ ದಮಯಂತಿಗೆ ಮೊದಲು ಸ್ವಯಂವರವಾದುದು ಸುಳ್ಳು, ಈಗ ಸ್ವಯಂವರವಾಗುವುದು ನಿಜ.

ಬಾ—(ಆತ್ಮ) ದಮಯಂತಿಗೆ ಪುನಸ್ಸ್ವಯಂವರವೆಂಬುದು ಇದೇಯೇನೋ! (ಪ್ರ) ಭೀಮಭೂಪತಿಯೆ ಹಾಗೇಸರಿ.

ಭೀ—ರಾಯನೇ ನೀನು ಅಯೋಧ್ಯೆಯನ್ನು ಬಿಟ್ಟು ಎಷ್ಟು ದಿವಸಗಳಾದುವು?

ಬಾ—ಭೂಪತಿಯೇ ನಾನು ಅಯೋಧ್ಯೆಯಿಂದ ಇಲ್ಲಿಗೆ ಮೂವತ್ತುಗಳಿಗೆಯಲ್ಲಿ ಬಂದೆನು.

ಭೀ—ಆಹ! ಇದು ಪರಮಾಶ್ಚರ್ಯ; ಈ ಸಾಮರ್ಥ್ಯವು ನನ್ನ ಆಳಿಯನಿಗೆ ಮಾತ್ರ ಇದ್ದುದನ್ನು ನಾನುಬಲ್ಲೆ. ನಿನಗೂ ಇಂತಹ ಸಾಮರ್ಥ್ಯವಿದೆಯೆಂದು ಈಗತಾನೇ ಗೊತ್ತಾಯಿತು.

ಋ—ಭೂಪತಿಯೆ, ಈ ಸಾಮರ್ಥ್ಯವು ನನ್ನದಲ್ಲ. ನನ್ನಲ್ಲಿ ಬಾಹುಕನೆಂಬ ಒಬ್ಬ ಸಾರಥಿ ಯಿರುವನು. ಅವನದು.

ಭೀ—ಅವನ ಹೆಸರನ್ನು ನಾನೂ ಕೇಳಿದ್ದೆ. ಆದರೆ ಅವನಿಗೆ ಇಂತಹ ಸಾಮರ್ಥ್ಯವಿರುವುದೆಂದು ತಿಳಿದಿರಲಿಲ್ಲ.

ಋ—ಆತನಿಗೆ ಪಾಕಶಾಸ್ತ್ರದಲ್ಲೂ ಬಹಳ ಪಾಂಡಿತ್ಯವಿರುವುದು.

ಭೀ—(ಆತ್ಮ) ಈ ಮಾತುಗಳನ್ನೆಲ್ಲಾ ಕೇಳಿ ನನಗೆ ಬಹಳ ಅನುಮಾನವುಂಟಾಗಿದೆ. ಈ ಪ್ರಮೇಯವು ಚೆನ್ನಾಗಿ ಪರೀಕ್ಷಿಸತಕ್ಕುದಾಗಿದೆ. (ಪ್ರ) ರಾಯನೇ ಇಂತಹ ಮನುಷ್ಯನು ಸಿಕ್ಕುವುದು ಬಹಳ ದುರ್ಲಭ.

ಋ—ಹೌದು.

ತೆರೆಯಲ್ಲಿ-ಸ್ತುತಿಪಾಠಕರು—

* ಕಂ|| ವನಜಭವಹರಿಹರಾತ್ಮಕ |
ನೆನಿಸಿದ ರವಿಯೊಲ್ದು ನೀಂ ಸಮರ್ಪಿಪಮಾಧ್ಯಂ ||
ದಿನಪೂಜೆಯಂ ಗ್ರಹಿಸಲೆಂ |
ದೆನೆಬಂದಂಗಗನಮಧ್ಯಕಿದೊ ರಾಜೇಂದ್ರಾ ||೮||

ಭೀ—(ಕೇಳಿ) ಏಹೋ! ಆಗಲೆ ಮಧ್ಯಾಹ್ನದ ಸ್ತುತಿಪಾಠವು ಕೇಳಿ ಬರುವುದು. (ಎಲ್ಲರೊಡನೆ ಎದ್ದು ಮೇಲೆ ಸುತ್ತಲೂ ನೋಡಿ)

ಕಂ|| ಬಳಲುತೆ ಬಿಸಿಲುಪಟಲದಿಂ |
ದೊಳಪೊಕ್ಕು ಕಪೋತಪಾಲಿಕಾಪಂಜರಮಂ ||
ನೆಲೆಚಂತೆಯೊಳ್ಕಪೋತಂ !
ಕಲರವಮೆಸಗುತೆ ತಿರುಂಗುತಿರ್ಪುದು ನೋಡಲ್ ||೭||

ಎಲ್ಲರೂ ತೆರಳಿದರು)

---

* || ರಾಗ | ಶಂಕರಾಭರಣ | ಏಕತಾಳ ||
(ನೋಟು)

ರಾಜೇಂದ್ರಾ ಕರುಣಾಸಾಂದ್ರ | ರಾಜಕುಲಾಮೃತವಾರಿಧಿಚಂದ್ರ | ನೈಜಪದಾನತ | ನರಪಾಲಶತ | ಈಜಗತಿಯನೀ | ನಿಂತೋವುತಲಿ | ವಿಜಯಿಸು ವಿಜಯಿಸು ||೧|| ಈಮಧ್ಯಂದಿನಕಾಲದೆ ನೀಂ | ನೇಮದಿನೆಸಗುವಪೂಜೆಯನು | ಪ್ರೇಮದೆಕೈಕೊಳ್ಳುವಮನದಿಂದೆನೆ ! ತಾಮರಸಪ್ರಿಯ ನಂಬರಶಿರಕೆ| ನಡೆತರುತಿರುವನು||೨||

ಬಿಡಾರ.

(ಋತುಪರ್ಣ ವಾರ್ಷ್ಣೇಯರ ಪ್ರವೇಶ)

ಋ—ವಾರ್ಷ್ಣೇಯನೆ, ಅಯೋಧ್ಯಾನಗರದಲ್ಲಿ ನಾನು ಕೇಳಿದಮಾತೇ ಇಲ್ಲಿಲ್ಲ. ಈ ಸುಳ್ಳು ಸಮಾಚಾರವು ಹುಟ್ಟುವುದಕ್ಕೆ ಕಾರಣವೇನಿರಬಹುದು? ನಮ್ಮಲ್ಲಿಗೆ ಬಂದಿದ್ದ ಆ ಬ್ರಾಹ್ಮಣನೇನಾದರೂ ಹುಚ್ಚನಾಗಿರಬಹುದೆ ?

ವಾ—ಅವನು ಹುಚ್ಚನಲ್ಲ. ಅವನ ಮಾತನ್ನು ನಂಬಿಕೊಂಡು, ಇಲ್ಲಿಗೆ ಬಂದವರು ಹುಚ್ಚರು.

ಋ—ನಿಜ, ಹುಚ್ಚರೇಸರಿ. ಆದರೆ ನಾವು ರಾಜಧಾನಿಯನ್ನು ಬಿಟ್ಟು ಬಹಳ ದಿವಸ ಇಲ್ಲಿರುವುದು ಸರಿಯಾಗಿ ಕಾಣಿಸುವುದಿಲ್ಲ. ಏತಕ್ಕೆಂದರೆ—

ಕಂ|| ಅರಸಿಲ್ಲದ ರಾಜ್ಯದಮೇ |
ಲರಿಗಳ್ದಾಳಿಡುವುದಕ್ಕೆ ಯತ್ನಿಪರದರಿಂ ||
ದರಸಂ ನಿಜರಾಜ್ಯಮನುಳಿ |
ದಿರಬಾರದುಪರರರಾಜ್ಯದೊಳ್ಬಹುಕಾಲಂ ||೮||

ವಾ—ಮಹಾರಾಜನೆ ಇಲ್ಲಿಗೆ ಬಂದಮೇಲೆ ಬಂದೆರಡುದಿವಸವಾದರೂ ಇಲ್ಲಿರದೆ ಬಹಳ ಅವಸರದಿಂದ ಹೋದರೆ ನಮ್ಮ ಮೂರ್ಖತ್ವಕ್ಕೆ ಅಲಂಕಿಕತ್ವವನ್ನೂ ಜೊತೆಮಾಡಿದ ಹಾಗಾಗುವುದು. ಆದಕಾರಣ ಇನ್ನು ಬಂದೆರಡುದಿನ ಇಲ್ಲಿದ್ದಮಾತ್ರಕ್ಕೆ ಅಂತಹ ಬಾಧಕವೇನೂ ತೋರುವುದಿಲ್ಲ.

ಋ—ಹಾಗೇ ಆಗಲಿ, ಹೇಗಾದರೂ ನಮ್ಮ ಅಜ್ಞತ್ವವು ಪ್ರಕಾಶವಾಗದಂತೆ ನಮ್ಮ ಸ್ಥಳವನ್ನು ನಾವು ಸೇರಿದರೆ ಸಾಕು. ಬಾಹುಕನು ನಮ್ಮ ರಥವನ್ನೆಲ್ಲಿ ಬಿಟ್ಟುಕೊಂಡಿರುವನು ?

ವಾ—ಅಂತಃಪುರಕ್ಕೆ ಸಮೀಪವಾದ ಅರಮನೆಯ ಉದ್ಯಾನದಲ್ಲಿ ಆತನು ರಥವನ್ನು ಬಿಟ್ಟುಕೊಂಡಿರುವಂತೆ ಇಲ್ಲಿಯ ಅಧಿಕಾರಿಗಳು ಗೊತ್ತುಮಾಡಿರುವರು.

ಋ—ನಮ್ಮ ಹತ್ತಿರ ಇರದೆ ನಮ್ಮ ರಥವನ್ನು ಅಲ್ಲಿ ಬಿಡಿಸಿರುವುದಕ್ಕೆ ನಿಮಿತ್ತವೇನು ? ಇದು ವಿಚಾರಿಸತಕ್ಕ ವಿಷಯವಾಗಿದೆ. ಒಳ್ಳೇದು, ಆ ಅಧಿಕಾರಿಗಳನ್ನೇ ಕರೆಯಿಸಿ ಕೇಳೋಣ ಬಾ. (ತೆರಳಿದರು.)

ಆಸ್ಥಾನ ಮಾರ್ಗ.

(ಭೀಮಭೂಪತಿ ಮಂತ್ರಿಗಳ ಪ್ರವೇಶ)

ಭೀ—ಮಂತ್ರಿಯೆ, ನನ್ನ ಮಗಳ ಸಂವಿಧಾನದಿಂದಲೇ ಋತುಪರ್ಣರಾಯನು ಇಲ್ಲಿಗೆ ಬಂದನೆಂದು ಚೆನ್ನಾಗಿ ಗೊತ್ತಾಯಿತು. ಈಗ ನಾವು ಮಾಡುವುದೇನು ?

ಮಂ—ನಾವು ಮಾಡುವುದೇನು? ನಮ್ಮಿಂದ ರಾಜಕೀಯವಾದ ಪತ್ರಿಕೆಯೇನಾದರೂ ಹೋಗಿ ಅವನು ಬಂದಿದ್ದರೆ ನಾವು ಯೋಚಿಸಬೇಕಾಗಿತ್ತು. ಈಗ ಆತನು ತನ್ನ ಇಷ್ಟವಿದ್ದಷ್ಟುದಿವಸ ಇಲ್ಲಿದ್ದು ಹೋಗಬಹುದು.

ಭೀ—ಹಾಗೇ ಸರಿ, ಈಗ ನಮ್ಮ ಉದ್ಯಾನದಲ್ಲಿ ಇಳಿದಿರುವ ಬಾಹುಕನನ್ನು ಪರೀಕ್ಷಿಸಬೇಕಾಗಿರುವುದರಿಂದ ಆತನಿಗೆ ಅಡಿಗೆ ಮಾಡಿಕೊಳ್ಳುವುದಕ್ಕಾಗಿ ಎಲ್ಲಾ ಪದಾರ್ಥಗಳನ್ನೂ ನಮ್ಮ ಉಗ್ರಾಣದಿಂದ ಕೊಡಿಸುವುದು. ಆತನು ಎಷ್ಟು ಕೇಳಿದರೂ ನೀರು, ಬೆಂಕಿ, ಈ ಎರಡು ಪದಾರ್ಥಗಳನ್ನು ಕೊಡಕೂಡದು.

ಮಂ—ಅಪ್ಪಣೆ.

ಭೀ—ಇದರಮೇಲೆ ನಿನಗೆ ನಂಬಿಕೆಯಿರತಕ್ಕ ಮಾತುಗಳನ್ನು ಹೇಳಿ ಕಳುಹಿಸಿ ಪರೀಕ್ಷಿಸಬಹುದೆಂದು ನನ್ನ ಮಗಳಿಗೂ ಹೇಳಿರುವೆನು.

ಮಂ—ಯುಕ್ತ.

ಭೀ—ಇನ್ನು ನಾವು ರಾಜಮರ್ಯಾದೆಗನುಸಾರವಾಗಿ ಋತುಪರ್ಣರಾಯನ ಸಂಗಡ ಕುಶಲಪ್ರಶ್ನೆಯನ್ನು ಮಾಡಿಕೊಂಡು ಬರುವುದಕ್ಕಾಗಿ ಆತನ ಬಿಡಾರಕ್ಕೆ ಹೊರಡತಕ್ಕ ಸನ್ನಾಹವನ್ನು ಮಾಡೋಣ ಬಾ.

(ತೆರಳಿದರು)

ಅಂತಃಪುರ.

(ಸಖೀ ಚೇಟಿಯರೊಡನೆ ದಮಯಂತಿಯ ಪ್ರವೇಶ)

ದಮ—

* ಕಂ|| ಅರಿಯದೊಡರ್ಚಿದಕಜ್ಜಂ |
ಪರಿತಪಿಪ್ಪುದು ಮನವ ನನ್ಯನಂ ಮತ್ಪತಿಯೆಂ ||
ದಿರದೆಣಿಸಿದೆನಗೆ ದೋಷಂ |
ದೊರೆದುದೆ ಯಿಾವಿಧಿಯನೇಕೊಡರ್ಚಿದೆ ವಿಧಿಯೇ ||೧||

(ಎಲ್ಲರೂ ದುಃಖವನ್ನು ನಟಿಸುವರು)

ಸಖಿ—ಎಲೆ ಕೆಳದಿ ಸ್ಥೈರಿಸು ಸ್ಥೈರಿಸು. ಬಾಹುಕನ ನಿಜಸ್ಥಿತಿಯನ್ನು ತಿಳಿದುಕೊಂಡು ಬರುವುದಕ್ಕಾಗಿ ಉಪಮಾತೆಯಾದ ಕೇಶಿನಿಯೂ ಸಖಿಯಾದ ತರಂಗಿಣಿಯೂ ಸಹ ಹೋಗಿರುವರಷ್ಟೆ ? ಇನ್ನು ಒಂದು ಮುಹೂರ್ತದೊಳಗಾಗಿ ಯಾವುದೂ ಗೊತ್ತಾಗುವುದು.

ದಮ—ಎಲೆ ಹೇಮಪ್ರಭೆ, ಆ ರಥಧ್ವನಿಯನ್ನು ಕೇಳಿ ನಾನು ಆರ್ಯಪುತ್ರನ ರಥವೇ ಬರುವುದೆಂದು ಭ್ರಾಂತಿಪಟ್ಟು ಮೇಘಧ್ವನಿಯನ್ನು ಕೇಳಿ ನವಿಲು ಸಂತೋಷಪಡುವಂತೆ ಸಂತೋಷಪಡುತ್ತ, ಆರ್ಯಪುತ್ರನ ಮುಖಚಂದ್ರನನ್ನು ಎಷ್ಟು ಹೊತ್ತಿಗೆ ನೋಡೇನೊ ಎಂದು ಕುತೂಹಲಪಡುತ್ತ ಉಪ್ಪರಿಗೆಯನ್ನು ಏರಿದೆ. ಆಮೇಲೆ ಆ ರಥದಲ್ಲಿ ಆರ್ಯಪುತ್ರನು ಕಾಣಿಸದಿರಲು, ನನ್ನ ಉತ್ಸಾಹವೆಲ್ಲಾ ಮರಳು ಭೂಮಿಯಲ್ಲಿ ಹುಯಿದ ಮಳೆಯಂತೆ ಕ್ಷಣಕಾಲದಲ್ಲಿ ಇಂಗಿಹೋಯಿತು. ನನ್ನ ದುಃಖವನ್ನು ತಡೆಯಲಾರದೆ ನಾನು ನನಗೆ ಆಯೋ

---

*|| ರಾಗ | ತೋಡಿ | ಆದಿತಾಳ ||

(ತೆಲಿಯಲೇದು ರಾಮಾ ಎಂಬಂತೆ)

ವಿಧಿಯು ಗೈದೆಯೇಕೀ | ವಿಧಿಯನ್ನು ನೀನು ||ಪ|| ಅಧಿಕಂಪುನೋ | ವ್ಯಥೆಯೆನ್ನನೀ | ವಿಧದಿಂದಚುರ್ಚು | ತ್ತಿದೆ ಯೇಗೈವೆ ||ಅನು|| ಪರಪೂರುಷನ | ಅರಸನೆಂದೆಣಿಸಿ | ಪರಮಪಾಪವನ್ನು | ವಿರಚಿಸಿದೆನೆ ಹಾ || ಅರಿಯದೆಸಗಿದೀ | ತೆರದ ಕಾರ್ಯವು | ನಿರವಧಿಕದುಃಖಾ | ಕರವೆನಿಸಿತೆ ಹಾ ||೧||

ಗ್ಯವಾದ ದುರ್ವಾರ್ತೆಯನ್ನು ಕಳ್ಪಿಸಿ ಆ ಬಾಹುಕನನ್ನು ಇಲ್ಲಿಗೆ ಬರಮಾಡಿದುದಕ್ಕೆ ತಕ್ಕಹಾಗೆ ಅವನೇ ಆರ್ಯಪುತ್ರನಾಗಿ ಈ ದಿವಸ ಸಾಯಂಕಾಲದೊಳಗಾಗಿ ನನಗೆ ತನ್ನ ನಿಜರೂಪವನ್ನು ತೋರಿಸಿದ ರಂತೂ ಸರಿ ; ಇಲ್ಲದಪಕ್ಷದಲ್ಲಿ ನಾನುಬೇರೆ ಈ ಪ್ರಾಣವನ್ನು ಇಟ್ಟುಕೊಂಡಿರತಕ್ಕವಳಲ್ಲ.

ಹೇ—ಶಿವಶಿವಾ (ಎಂದು ಕಿವಿ ಮುಚ್ಚಿಕೊಂಡು) ಎಲೆ ಸಖಿ, ಏತಕ್ಕಿಂತಹ ಕ್ರೂರವಾದ ಮಾತನ್ನಾಡುವೆ ? ನೀನು ಮಹಾಪತಿವ್ರತೆಯಾದಕಾರಣ ನೀನು ಮಾಡಿದ ಪ್ರಯತ್ನವು ವ್ಯರ್ಥವಾಗಲಾರದು.

ಕೇಶಿನಿ—(ತರಂಗಿಣಿಯೊಡನೆ ತಟ್ಟೆಯಲ್ಲಿ ಭಕ್ಷ್ಯವನ್ನು ತೆಗೆದುಕೊಂಡು ಬಂದು) ಕುಮಾರಿಗೆ ಜಯವಾಗಲಿ, ಕುಮಾರಿಯೆ ನಾವು ಉದ್ಯಾನಕ್ಕೆ ಹೋಗಿ ಕುರೂಪಿಯಾದ ಆ ಸಾರಥಿಯನ್ನು ಕಂಡು ನೀನು ಹೇಳಿದ ಮಾತುಗಳನ್ನು ಹೇಳಿದೆವು.

ದಮ—ನೀವು ಹೇಗೆ ಹೇಳಿದಿರಿ ? ಹೇಳಿ.

ಕೇ—ಕೇಳು,

ಕಂ|| ನೆರೆಮಾರ್ಗಾಯಾಸದೆ ಮೈ |
ಯ್ಮರೆದು ಮಲಂಗಿರ್ದ ತನ್ನ ಸಹಧರ್ಮಿಣಿಯಂ ||
ತೊರೆದು ಮಹಾರಣ್ಯದೊಳವ |
ಳರೆಸೀರೆಯಪರಿದುಕೊಂಡು ಪೋದವನುಂಟೇ ||೧೦||

ಎಂದು ಹೇಳಿದೆವು.

ದಮ—ಸರಿ, ಆಮೇಲೆ ?

ಕೇ—ಅದಕ್ಕವನು ಈ ಉತ್ತರವನ್ನು ಹೇಳಿದನು.

ದಮ—ಅದೇನು ? ಹೇಳಿ, ಹೇಳಿ.

ಕೇ—ಕೇಳು,

ಕಂ|| ಪತಿಯಂ ವಂಚಿಸಿದಾ ದು |
ಶ್ಕೃತಿ ತಾನಂತಿರ್ಕೆ ಕೊರತೆಯೇನವಳ್ಗದರಿಂ ||
ಪತಿಯಂ ಜರಿವಾಕೆ ಪತಿ |
ವ್ರತೆಯೇ ಮೇಣಾಕೆ ಧರ್ಮಮಂ ತಿಳಿದವಳೇ ||೧೧||

ದಮ--(ತನ್ನಲ್ಲಿ ತಾನು) ಹಾ ಪ್ರಿಯನೆ, ಈ ಮಾತೆಲ್ಲಾ ನಿನ್ನ ಮಾತಿನ ಹಾಗೆಯೇ ಇರುವುದಲ್ಲಾ! ನಿನ್ನ ನಿಜಸ್ಥಿತಿಯನ್ನು ಮಾತ್ರ ನನಗೆ ತೋರಿಸದೆ ನನ್ನನ್ನು ಏತಕ್ಕೆ ಸಂಕಟಪಡಿಸುತ್ತಿರುವೆ? (ಕೇಶಿನಿಯನ್ನು ನೋಡಿ) ಆಯಿತು, ಆಮೇಲೆ?

ಕೇ—ಆಮೇಲೆ ಅವನು ಅಡಿಗೆಯ ಮನೆಯಲ್ಲಿ ತನ್ನ ಕಯ್ಯಿಂದ ಸ್ಪರ್ಶ ಮಾಡಿದ ಮಾತ್ರಕ್ಕೆ ಒಲೆಯಲ್ಲಿ ಬೆಂಕಿಯೂ, ಪಾತ್ರಗಳಲ್ಲಿ ನೀರೂ ತನಗೆತಾನೇ ಸಿದ್ಧವಾದುವು.

ದಮ—ಏನು? ತನಗೆತಾನೇ ಸಿದ್ಧವಾದುವೆ? (ಎಂದು ಹೊರಡಲು)

ಕೇ—(ತಡೆದು) ಒಡತಿಯೆ, ಸಿಥಾನಿಸಬೇಕು, ಸಿಥಾನಿಸಬೇಕು. ಅಷ್ಟು ಮಾತ್ರಕ್ಕೆ ಹೀಗೆ ದುಡುಕುವುದುಂಟೆ?

ದಮ—ಹಾ! ಪ್ರಾಣಕಾಂತನೆ, ಇನ್ನೂ ನನಗೇಕೆ ದೂರವಾಗಿರುವೆ? (ಬೀಳುವಳು)

ತರಂಗಿಣಿ—(ಹಿಡಿದುಕೊಂಡು) ಎಲೆ ಸಖಿ, ಸ್ಥೈರಿಸು ಸ್ಥೈರಿಸು. (ಸಂತೈಸುವಳು)

ದಮ—(ಮೆಲ್ಲಗೆದ್ದು) ಎಲೆ ಕೇಶಿನಿ, ನಿನ್ನ ಮಾತನ್ನೆಲ್ಲಾ ಬೇಗ ಮುಗಿಸು, ಬೇಗ ಮುಗಿಸು.

ಕೇ—ಆಮೇಲೆ ಅವನು ಊಟಮಾಡಿದನಂತರ ಅವನು ಮಾಡಿದ ಭಕ್ಷ್ಯದಲ್ಲಿ ಇದೊಂದನ್ನು ನಾನು ಕೇಳಿ ತೆಗೆದುಕೊಂಡು ಬಂದೆ.

ದಮ—(ಆದರದಿಂದ) ಎಲ್ಲಿ? ತಾ. (ತೆಗೆದುಕೊಂಡು ತಿಂದು) ಕೇಶಿನಿಯೆ, ಇದು ಆರ್ಯಪುತ್ರನು ಮಾಡಿದುದು, (ಎಂಬಷ್ಟರಲ್ಲಿ) ಆಹ! ಹೇಗಿರುವುದೊ ಹಾಗಿರುವುದು. ಎಲೆ ಕೇಶಿನಿ, ಇನ್ನು ತಡಮಾಡಬೇಡ. ಪುನಃ ಆತನ ಬಳಿಗೆ ಹೋಗಿ ದಮಯಂತಿಯು ನಿನ್ನನ್ನು ನೋಡಬೇಕೆಂದು ಅಪೇಕ್ಷಿಸುವಳೆಂದು ಹೇಳಿ ಉಪಾಯದಿಂದ ಆತನನ್ನು ಇಲ್ಲಿಗೆ ಕರೆದುಕೊಂಡು ಬಾ.

ಕೇ—ಒಡತಿಯೆ, ನಿನ್ನಪ್ಪಣೆಯಾದಂತಾಗಲಿ. (ತರಂಗಿಣಿಯೊಡನೆ ತೆರಳಿದಳು)

ದಮ—ಎಲೆ ಮನಸ್ಸೆ, ಏತಕ್ಕೆ ಇಷ್ಟೊಂದು ತ್ವರೆಪಡುವೆ? ಇನ್ನು ಜಾಗ್ರತೆಯಾಗಿ ನಿನ್ನ ಸಂಶಯವನ್ನು ಪರಿಹರಿಸುವೆನು.

* ಕಂ॥ ಅನುಮಾನ ಪರಿಚ್ಛೇದಂ |
ನಿನಗಪ್ಪನ್ನೆವರಮೇಕೆ ಸುಮ್ಮನೆ ನಲಿವಯ್ ||
ಮನವೇ ಪೂವಂ ತೋರಿ |
ರ್ಪೆನಿತ್ತು ಪುಣ್ಯದ್ರುಮಂ ಫಲಂದೋರದಿರಲ್ ||೧೩||

ಯಾರಲ್ಲಿ ?

ದ್ವಾರಪಾಲಿಕೆ—(ಬಂದು) ಕುಮಾರಿಯೆ. ಏನಪ್ಪಣೆ ?

ದಮ—ಎಲೆ ಶಾರಿಕೆ, ನಮ್ಮ ಇಂದ್ರಸೇನನನ್ನೂ ಇಂದ್ರಸೇನೆಯನ್ನೂ ಒಳ್ಳೇ ಉಡುಪನ್ನಿಕ್ಕಿ ಬಾಗಿಲಲ್ಲೇ ಆಡಿಸುತ್ತಿರುವುದು. ಯಾರಾದರೂ ಬಂದು ಎತ್ತಿಕೊಂಡರೆ ಸುಮ್ಮನಿರಿ.

ದ್ವಾ—ಅಪ್ಪಣೆ. (ತೆರಳಿದಳು)

ದಮ—ಈ ದಿವಸ ನಾನು ನನ್ನ ಪತಿಯನ್ನು ನೋಡಿದರಂತು ಸರಿ, ಇಲ್ಲದ ಪಕ್ಷದಲ್ಲಿ ಅಗ್ನಿಪ್ರವೇಶ ಮಾಡಿ ಪಾಪಿಯಾದ ಈ ಜನ್ಮವನ್ನು ಕಳೆದುಕೊಳ್ಳುವೆನು. (ಪೀಠದಲ್ಲಿ ಕುಳ್ಳಿರುವಳು)

ಕೇ—(ತರಂಗಿಣಿಯೊಡನೆ ಬಂದು) ಕುಮಾರಿಗೆ ಜಯವಾಗಲಿ.

ದಮ—(ಆತ್ಮ) ನನಗೆ ಜಯವಾದೀತೆ ?

ಕೇ—ಕುಮಾರಿಯೆ, ನೀನು ಹೇಳಿದ ಮಾತನ್ನು ತಿಳಿಸಿದಕೂಡಲೆ ಆ ಸಾರಥಿಯು ಬಹು ಕುತೂಹಲದಿಂದ ಬಂದು ಅಂತಃಪುರದ ಬಾಗಿಲಲ್ಲಿ ಆಡುತ್ತಿದ್ದ ಎರಡು ಮಕ್ಕಳನ್ನೂ ಬಹಳ ಆದರದಿಂದ ಎತ್ತಿಕೊಂಡು ಕಣ್ಣೀರುತುಂಬಿ ಮುದ್ದಾಡುತ್ತಿರುವನು.

ದಮ—(ಸಂಭ್ರಮದಿಂದೆದ್ದು) ಏನು ? ಮಕ್ಕಳನ್ನು ಮುದ್ದಾಡುತ್ತಿರುವನೆ ? ಆರ್ಯಪುತ್ರನಿಗಲ್ಲದೆ ಇನ್ನು ಯಾರಿಗೆತಾನೆ ನನ್ನ ಮಕ್ಕಳಲ್ಲಿ ಇಷ್ಟು

---

*|| ರಾಗ | ಆನಂದಭೈರವಿ | ತಾಳ | ತ್ರಿಶ್ರಜಾತಿತ್ರಿಪುಟೆ ||
(ಮಂಚಿದಿನಾಮು ಎಂಬಂತೆ)

ಮನನೇ ಮುಂತೆ ನೀನು | ಇನಿತೂ ಒಲಾಡುವರೇ || ಪ || ಅನುಮಾನಪರಿಚ್ಛೇದ | ನಿನಗಿನ್ನೂ ಆಗದೋವೊ ||ಅನು|| ಎನೆವೀ ಪುಣ್ಯವೃಕ್ಷ | ಪೊಸತಾಗಿ ಪೂವತೋರಿ | ಹಸನಾದಾ ಫಲವನ್ನು | ಒಸೆದಿನ್ನೂ ತೋರದಿರೆ ||೧|| ಪಿರಿದಾಗಿ ಪಸಿದಿರ್ಪ | ನರನು ಸಿಧಾಸಿಸದೆ | ಎರಡೂ ಕೈಗಳಿಂದಲಂ | ತುರದಿಂದಲುಂಬುದುಂಟೆ || ೨||

ಸ್ವಾತಂತ್ರ್ಯವುಂಟಾದೀತು ? ಒಳ್ಳೇದು, ವಿನಯದಿಂದ ಒಳಗೆ ಕರೆದುಕೊಂಡು ಬಾ.

ಕೇ—ಅಪ್ಪಣೆ. (ತರಂಗಿಣಿಯೊಡನೆ ತೆರಳಿದಳು)

ದಮ—(ತನ್ನಲ್ಲಿ ತಾನು) ಈಗ ನನ್ನ ಅದೃಷ್ಟವನ್ನು ಪರೀಕ್ಷಿಸುತ್ತೇನೆ.

(ಸುಮ್ಮನೆ ನಿಂದಿರುವಳು)

ನಳ—(ಮಕ್ಕಳೊಡನೆ ಬರುತ್ತಿರಲು)

ಇಂದ್ರಸೇನೆ—(ಅಣ್ಣನೊಡನೆ ಬೇಗ ಬಂದು) ಅಮ್ಮಾ ಈತನು ಯಾರೊ ನಮ್ಮನ್ನು ಮಕ್ಕಳಿರಾ ಮಕ್ಕಳಿರಾ ಎಂದು ಎತ್ತಿಕೊಂಡು ಮುದ್ದಾಡುವನು.

ದಮ—(ಆತ್ಮ) ಈ ಮಕ್ಕಳ ಪುಣ್ಯದಿಂದಲಾದರೂ ದೇವರು ನನ್ನ ದುಃಖವನ್ನು ಪರಿಹಾರಮಾಡಿದರೆ ಸಾಕು. (ಪ್ರ) ಮಕ್ಕಳಿರಾ, ಈತನು ಯಾರೊ ಈಗಲೇ ಗೊತ್ತಾಗುವುದು. ಸ್ವಲ್ಪ ನಿಧಾನಿಸಿ.

ಇಂದ್ರಸೇನ-(ನಸುನಗುತ) ಇವನನ್ನು ನೋಡಿದರೆ ಚಿತ್ರದಲ್ಲಿ ಬರೆಯಬೇಕು.

ದಮ—ಉಭಯಥಾಪಿ ಈ ಮಾತು ಸರಿಯಾದುದೇ ಸರಿ.

ಇಂದ್ರಸೇನೆ—ಇವನನ್ನು ನೋಡಿದರೆ ಹುಲಿಗಳು ಕೂಡ ಹೆದರಿಕೊಳ್ಳುತ್ತವೆ.

ದಮ—ಈ ಮಾತೂ ಯೋಗ್ಯವಾಗಬಹುದು.

ನಳ—(ಆತ್ಮ) ಈ ಮಕ್ಕಳ ಮುದ್ದುಮಾತುಗಳು ನನ್ನ ಮನಸ್ಸನ್ನು ಕರಗಿಸುತ್ತಿರುವುವು.

ದಮ—(ಲಜ್ಜೆಯಿಂದ) ಬಾಹುಕನೆ, ಜೂಜಾಡಿ ರಾಜ್ಯವನ್ನುಕಳದುಕೊಂಡು, ತನ್ನನ್ನೇ ನಂಬಿ ಅರಣ್ಯದಲ್ಲಿ ಮಲಗಿದ್ದ ನಿರಪರಾಧಳಾದ ಧರ್ಮಪತ್ನಿಯನ್ನು ಬಿಟ್ಟುಹೋದ ಒಬ್ಬ ಧರ್ಮಜ್ಞನನ್ನು ನೀನು ಬಲ್ಲೆಯಾ ?

ನಳ—ಎಲೆ ಕೋಮಲಾಂಗಿ, ಆತನು ತಾನಾಗಿ ರಾಜ್ಯವನ್ನು ಕಳೆದುಕೊಂಡವನಲ್ಲ. ತಾನಾಗಿ ಧರ್ಮಪತ್ನಿಯನ್ನು ಬಿಟ್ಟವನೂ ಅಲ್ಲ. ಇಷ್ಟೂ ಕಲಿಪುರುಷನ ಆವೇಶದಿಂದ ನಡೆದಿರುವುದು. ಅವನು ಪೂರ್ವದಲ್ಲಿ ಮಾಡಿದ ತಪಸ್ಸಿನ ಬಲದಿಂದ ಕಲಿಯು ಅವನನ್ನು ಬಿಟ್ಟು ತೊಲಗಿದನು. ಈಗ ಆ ಪುರುಷನು ನಿನ್ನ ಎದುರಿಗೇ ಬಂದು ನಿಂತಿರುವನು.

ಲೋಕದಲ್ಲಿ ಸ್ತ್ರೀಯಾದವಳು ಕೈಹಿಡಿದ ಪತಿಯನ್ನು ಬಿಟ್ಟು, ಮತ್ತೊಬ್ಬ ಪುರುಷನನ್ನು ಎಂದಿಗಾದರೂ ವರಿಸುವುದುಂಟೆ ?

ದಮ—(ಭಯದಿಂದ ಕಯ್ಮುಗಿದುಕೊಂಡು) ಮಹಾನುಭಾವನೆ, ನಿನ್ನ ಮಾತಿನಲ್ಲಿ ನನಗೆ ಸಂಶಯವುಂಟಾಗಿ ನಿನ್ನನ್ನು ಇಲ್ಲಿಗೆ ಬರಮಾಡುವುದಕ್ಕಾಗಿ ನಾನು ಅಂತಹ ಮಾತನ್ನು ಕಲ್ಪಿಸಿದೆನೇ ಹೊರತು ಅನ್ಯಥಾ ನೀನು ಭಾವಿಸಬೇಡ. ನನ್ನ ಪತಿಯ ಪಾದಸಾಕ್ಷಿಯಾಗಿಯೂ ನಾನು ಮನಸ್ಸಿನಿಂದಲೂ ಕೂಡ ಸ್ವಲ್ಪವಾದರೂ ದುಷ್ಕೃತ್ಯವನ್ನು ಮಾಡಿದವಳಲ್ಲ. ನಾನೇನಾದರೂ ಅಂತಹ ದುಷ್ಕೃತ್ಯವನ್ನು ಮಾಡಿದ್ದಪಕ್ಷದಲ್ಲಿ ಸರ್ವತ್ರ ಸಾಕ್ಷೀಭೂತನಾಗಿರುವ ವಾಯುವು ನನ್ನ ಪ್ರಾಣವನ್ನು ಅಪಹರಿಸಲಿ.

ವಾಯು—(ಆಕಾಶದಲ್ಲಿ) ಎಲೈ ನಳಮಹಾರಾಜನೆ, ದಮಯಂತಿಯು ಮೂರು ವರುಷದಿಂದಲೂ ತನ್ನ ಪಾತಿವ್ರತ್ಯವನ್ನು ರಕ್ಷಿಸಿಕೊಂಡಿದ್ದುದಕ್ಕೆ ನಾನು ಸಾಕ್ಷಿಯಾಗಿರುವೆನು. ಧರ್ಮಪತ್ನಿಯಾದ ಈಕೆಯನ್ನು ಪರಿಗ್ರಹಿಸಿ ನೀನು ಸುಖವಾಗಿರು. ಈ ವಿಷಯದಲ್ಲಿ ನೀನು ಸಂಶಯಪಡಬೇಡ, ಸಂಶಯಪಡಬೇಡ.

ನಳ—(ಮೇಲೆ ನೋಡಿ) ಇದೊ ಭಗವಂತನಾದ ವಾಯುವೇ ಸಾಕ್ಷಾತ್ತಾಗಿ ಈ ಮಾತನ್ನು ಹೇಳಿದ ಮೇಲೆ ಇನ್ನು ನನಗೆ ಈಕೆಯಲ್ಲಿ ಸಂಶಯವಿಲ್ಲ. (ಕೈ ಮುಗಿದು) ಎಲೈ ಮಹಾನುಭಾವನಾದ ಕಾರ್ಕೋಟಕನೆ ನನ್ನ ನಿಜರೂಪವನ್ನು ಕೊಡು (ಎಂದು ಆ ವಸ್ತ್ರವನ್ನು ಧರಿಸಿ, ನಿಜರೂಪವನ್ನು ಪಡೆದು ಆದರದಿಂದ ದಮಯಂತಿಯನ್ನು ಆಲಂಗಿಸಿ ಆಕಾಶದಿಂದ ಪುಷ್ಪವೃಷ್ಟಿಯಾಗಲು),

* ಕಂ|| ಕಲಿಯೆನ್ನಿಂ ತೊಲಗಲ್ಕಂ |
ಗಳಗಾತ್ರಿಯನೆನ್ನ ಕಾಂತೆಯುಮನೆನ್ನಯಮ ||

---

* || ರಾಗ | ಕೇದಾರ | ಏಕತಾಳ ||
(ನೀರಜಮುಖಿ ಎಂಬಂತೆ)

ಎನ್ನಯ ಸತಿಯನ್ನೀಗ ಸೇರಿದೆನು | ಮನ, ದನ್ನೆಯಾ | ಮಹಿತೆಯನಾ |
ನೆನ್ನಯ ||ಪ|| ತೊಲಗಿದನೆನ್ನೊಳು | ನೆಲಸಿದ ಕಲಿಯು | ಸುಲಲಿತಗಾತ್ರಿಯಳಾ |

ಕ್ಕಳುಮಂ ಕಂಡೀದಿನಮು |
ಗ್ಗಳಿಸಿದ ಸಂತಸದ ಕಡಲೊಳೀಸಾಡಿದಪೆಂ ||೧೩||

ದಮ—(ಸಂತೋಷ ಭಾವದಿಂದ)

† ಕಂ|| ಪರಮೇಶ್ವರಕೃಪೆಯಿಂ ಶ್ರೀ |
ಗುರುವಿನನುಗ್ರಹದಿನೆನ್ನ ಪುಣ್ಯೋದಯದಿಂ ||
ಚಿರಕಾಲಕೆ ನಿನ್ನಿಂದೊಡ |
ವೆರೆದಾನತಿಮಾತ್ರಧನ್ಯೆಯಾದೇಂ ಪ್ರಿಯನೇ ||೧೪||

(ಎಂದು ನಳನನ್ನು ಆಲಿಂಗಿಸಲು) (ಎಲ್ಲರೂ ಉಲ್ಲಾಸದಿಂದ ತೆರಳಿದರು.)

ಅರಮನೆ

ಕಂಚುಕಿಯ ಪ್ರವೇಶ.

ಕಂ—(ಕೋಲೂರಿಕೊಂಡು ಬಂದು, ಉಸ್ಸಪ್ಪಾ ಎಂದು ನಿಂತು) ಈ ಅರಮನೆಯಲ್ಲಿ ಗಳಿಗೆಗೆ ಮೂರು ಸಲ ಅಂತಃಪುರಕ್ಕೂ ಆಸ್ಥಾನಕ್ಕೂ ಸುತ್ತಿ ಸುತ್ತಿ ಎರಡು ಕಾಲುಗಳೂ ಬಿದ್ದುಹೋಗುತ್ತವೆ. ಈ ಮುಪ್ಪಿನಲ್ಲೂ ಕೂಡ ನಮಗೆ ವಿಶ್ರಾಂತಿಸುಖವಿಲ್ಲ. ಲೋಕದಲ್ಲಿ ಪುಣ್ಯಾತ್ಮರು ಅನೇಕರು ಯಾವುದಾದರೂ ಬಂದು ಅಧಿಕಾರದಲ್ಲಿ ಕೆಲವು ಕಾಲವಿದ್ದು ಇನ್ನೂ ತಮಗೆ ಅಧಿಕಾರ ಮಾಡುವ ಶಕ್ತಿಯಿದ್ದರೂ ವಿಶ್ರಾಂತಿಸುಖವನ್ನು ಪಡೆದು ಬಗೆಬಗೆಯಾದ ಮನೋವಿನೋದಗಳಿಂದಲೂ ದೇವತಾಸೇವೆಗಳಿಂದಲೂ ಉಲ್ಲಾಸಪಡುತ್ತ

ದೆನ್ನಯ ||೧|| ಹೆಕ್ಕಳಿಸಿದಮನ | ದಕ್ಕರಿಂದೆನ್ನಯ | ಮಕ್ಕಳ ನೋಡಿದೆನಾ | ನೆನ್ನಯ ||೨||

† || ರಾಗ | ಕಮಾಚು | ಏಕತಾಳ ||
(ಜೋರಜೋರೀಭಯ್ಯ ಎಂಬಂತೆ)

ಧನ್ಯಳಾದೇ ಪ್ರಿಯ | ಮಾನ್ಯಳಾದೇ || ಪ || ನಾಗೈದಸುಕೃತದ | ಯೋಗದಿ ಮುನಿವರರಿ | ಶ್ರೀಗುರುವನುಗ್ರಹದಿ | ರಾಗದೆ ನೆರೆದು ನಿನ್ನಾ || ೧ || ಈ ನಾನು ಜಗದಲಿ | ಮಾನಿನಿಯರ ಕುಲಕೆ | ಆನನವ ತೋರಿಸುವ | ಆನಂದ ದೊರೆದುದೀಗ || ೨ ||

ಸ್ವತಂತ್ರರಾಗಿ ಹಾಯಾಗಿರುವರು. ನಮ್ಮಂಥವರಿಗಾದರೊ ಜೀವ ಮಾನವಿರುವವರಿಗೂ ಅಂತಹ ಸುಖವು ಸ್ವಪ್ನದಲ್ಲೂ ಕೂಡ ಇಲ್ಲ. ನಮ್ಮಗತಿ ಹೀಗೇ ಆಯಿತು.

ವಾರ್ಷ್ಣೇಯ–(ಪ್ರವೇಶಿಸಿ) ಅಯ್ಯಾ ಕಂಚುಕಿಯೆ ಈಗ ನಳಮಹಾ ರಾಜನ ಸಮಯವೇನು ?

ಕಂ–ವಾರ್ಷ್ಣೇಯನೆ ಕೇಳು. ಆತನು ಮಾವನಾದ ಭೀಮಭೂಪಾಲನನ್ನು ಕಾಣುವುದಕ್ಕಾಗಿ ದಮಯಂತಿಯು ಅಂತಃಪುರದಿಂದ ಆಸ್ಥಾನಕ್ಕೆ ಹೊರಟಿರುವನು. ಅಲ್ಲೇ ನಿಮ್ಮ ಮಹಾರಾಜನಾದ ಋತುಪರ್ಣ ರಾಯನನ್ನೂ ಕಾಣುವೆನೆಂದು ನಿನಗೆ ತಿಳಯಿಸುವಂತೆ ಬಾಯಿಂದ ಹೇಳಿ ಕಳುಹಿಸಬೇಕೆಂದು ನನಗಾಜ್ಞಾಪಿಸಿರುವನು.

ವಾ–ನಾನೂ ಈ ವಿಷಯವನ್ನು ತಿಳಿದುಕೊಂಡು ಹೋಗುವುದಕ್ಕಾಗಿಯೇ ಬಂದಿರುವೆನು. ನಿನ್ನಿಂದಲೇ ಈ ವಿಷಯವು ನನಗೆ ತಿಳಿದಹಾಗಾ ಯಿತು. ಹೀಗೆಂದೇ ನೀನು ನಳಮಹಾರಾಜನಿಗೆ ತಿಳಯಿಸಬಹುದು. ನಾನು ಹೋಗಿಬರುವೆನು.

ಕಂ–ಹಾಗೇ ಆಗಲಿ. ಒಳ್ಳೇದು (ಇಬ್ಬರೂ ತೆರಳುವರು)

ಆಸ್ಥಾನ.

(ಭೀಮಭೂಪತಿ, ನಳ, ಋತುಪರ್ಣ, ವಾರ್ಷ್ಣೇಯರ ಪ್ರವೇಶ)

ಭೀ–ಅಯ್ಯಾ ಋತುಪರ್ಣರಾಯನೆ ದೈವಯೋಗದಿಂದ ನೀನು ಇಲ್ಲಿಗೆ ಬರ ಲಿಕ್ಕಾಗಿ, ಅಪಾರವಾದ ಚಿಂತಾಸಮುದ್ರದಲ್ಲಿ ಮುಳುಗಿದ್ದ ನನ್ನ ಮಗಳಾದ ದಮಯಂತಿಗೆ ಪುನಸ್ಸ್ವಯಂವರವಾದಂತೆಯೇ ಆಯಿತು.

ಋ–ಮಹಾರಾಜನೆ ನಿನ್ನ ಮಾತು ನಿಜವಾದುದು. ನಾನು ಪುನಸ್ಸ್ವಯಂ ವರವೆಂಬ ಸುದ್ದಿಯನ್ನು ಕೇಳಿದೊಡನೆ ಹೀಗೂ ನಡೆಯುವುದುಂಟೆ? ಎಂದು ಯೋಚಿಸಿ, ಇದೇನೋ ತಂತ್ರವಿರಬಹುದೆಂದು ತಿಳಿದು, ಈ ಅಸಂಭಾವಿತದ ನಿಜಸ್ಥಿತಿಯನ್ನು ಪ್ರತ್ಯಕ್ಷವಾಗಿ ತಿಳಿಯಬೇಕೆಂಬ ತಾತ್ಪರ್ಯದಿಂದಲೇ ಇಲ್ಲಿಗೆ ಬಂದೆನು. ಇಲ್ಲಿಗೆ ಬಂದಮೇಲೆ ನನ್ನ ಸಂಶಯವು ಪರಿಹಾರವಾಗಿ, ಹೀಗಾದುದು ದೈವಾನುಗ್ರಹವೇಸರಿ,

ಇವರಿಂದ ನನಗೆ ಬಹಳ ಸಂತೋಷವಾಯಿತು. ಇನ್ನು ನಿನ್ನಪ್ಪಣೆಯಾದರೆ ನಾನು ಅಯೋಧ್ಯೆಗೆ ಹೋಗಿಬರುವೆನು.

ಭೀ—ಒಳ್ಳೇದು ಹಾಗಾಗಲಿ. ಈ ವಾರ್ಷ್ಣೇಯನು ಇನ್ನುಮೇಲೆ ನಮ್ಮ ನಳಮಹಾರಾಜನ ಸಮೀಪದಲ್ಲೇ ಇರಬೇಕಾದ ಕಾರಣ ನಿನಗಾಗಿ ಬೇರೊಬ್ಬ ಸಾರಥಿಯನ್ನು ಕಳುಹಿಸಿಕೊಡುವೆನು.

ಋ—ಒಳ್ಳೇದು ಹಾಗೇ ಆಗಲಿ. ಬಹಳ ಸಂತೋಷ. (ನಳನನ್ನು ನೋಡಿ) ಎಲೈ ನಳಮಹಾರಾಜನೆ, ನೀನು ದೈವಯೋಗದಿಂದ ನಿನ್ನ ಪತ್ನಿಯನ್ನು ಸೇರಿದೆ. ಇದು ಎಲ್ಲರಿಗೂ ಬಹಳ ಸಂತೋಷಕರವಾದುದು. ನೀನು ನಮ್ಮರಮನೆಯಲ್ಲಿ ಅಜ್ಞಾತವಾಸಮಾಡುವಾಗ ತಿಳದಾಗಲಿ ತಿಳಿಯದೇ ಆಗಲಿ ನಿನಗೆ ಅಸಮಾಧಾನವಾಗುವಂತೆ ನಾನೇನಾದರೂ ಮಾಡಿದ್ದರೂ ಆಡಿದ್ದರೂ ಅದನ್ನು ನೀನು ಕ್ಷಮಿಸಬೇಕು.

ನಳ—ಋತುಪರ್ಣರಾಯನೆ ನಾನು ಅಜ್ಞಾತವಾಸಮಾಡುವಾಗ ನನ್ನ ಸ್ವರೂಪವು ನಿನಗೆ ಗೊತ್ತಾಗಿದ್ದರಲ್ಲವೆ ? ನಾನು ಕ್ಷಮಿಸಬೇಕು. ಇದರ ಮೇಲೆ ಆಕಾಲದಲ್ಲಿ ನೀನು ನನಗೆ ಪ್ರಭುವಾಗಿದ್ದರೂ ನನಗೆ ಅಸಮಾಧಾನವಾಗುವ ಹಾಗೇನೂ ಮಾಡಿಯೂ ಇಲ್ಲ ಆಡಿಯೂ ಇಲ್ಲ. ಪೂರ್ವದಿಂದಲೂ ನೀನು ನನಗೆ ಮಿತ್ರನಾಗಿದ್ದವನು. ಇಲ್ಲಿಂದ ಮುಂದಕ್ಕೂ ನೀನು ನನ್ನಲ್ಲಿ ವಿಶೇಷವಾದ ಪ್ರೀತಿಯನ್ನಿಡಬೇಕು. ನಾನು ಪೂರ್ವದಲ್ಲಿ ನಮ್ಮರಮನೆಯಲ್ಲಿ ಹೇಗೆ ಸುಖವಾಗಿದ್ದೆನೊ ಹಾಗೇ ನಿಮ್ಮರಮನೆಯಲ್ಲೂ ಸುಖವಾಗಿ ಇದ್ದೆನು.

ಋ—ವೀರಸೇನರಾಯನ ಮಗನಾದ ನಿನಗೆ ಈ ಮಾತುಗಳು ಯೋಗ್ಯವಾಗಿವೆ. ಮುಂದೂ ನೀನು ನನ್ನಲ್ಲಿ ಈಪ್ರಕಾರ ಸ್ನೇಹವನ್ನೇ ಇಟ್ಟಿರಬೇಕು,

ನಳ—ಓಹೋ ! ಅದಕ್ಕೇನಡ್ಡಿ ? (ಭೀಮಭೂಪತಿಯನ್ನು ನೋಡಿ) ಪೂಜ್ಯರಾದ ಮಾವಂದಿರಿಗೆ ವಿಜ್ಞಾಪನೆ. ಈಗ ನಾನು ಅಕ್ಷಹೃದಯವನ್ನು ಚೆನ್ನಾಗಿ ತಿಳದಿರುವುದರಿಂದ ನಿಮ್ಮಪ್ಪಣೆಯಾದರೆ ನಿಷಧದೇಶಕ್ಕೆ

ಹೋಗಿ, ಅಕ್ಷದ್ಯೂತದಲ್ಲಿ ದುರಾತ್ಮನಾದ ಪುಷ್ಕರನನ್ನು ಸೋಲಿಸಿ, ನನ್ನ ರಾಜ್ಯಕೋಶಾದಿಗಳನ್ನು ಸ್ವಾಧೀನಪಡಿಸಿಕೊಳ್ಳುವೆನು.

ಭೀ—ಆಯುಷ್ಮಂತನಾದ ನಳಮಹಾರಾಜನೆ ಹಾಗೆ ಮಾಡಬಹುದು. ನಿನ್ನ ಸಂಗಡ ಅನೇಕ ಪರಿಜನರನ್ನೂ ಚತುರಂಗಸೈನ್ಯವನ್ನೂ ಅಪರಿಮಿತವಾದ ದ್ರವ್ಯವನ್ನೂ ಕಳುಹಿಸಿಕೊಡುತ್ತೇನೆ. ಆ ಶತ್ರುವಾದ ಪುಷ್ಕರನು ಅಕ್ಷದ್ಯೂತಕ್ಕೆ ಬಾರದಿದ್ದಲ್ಲಿ ಅವನೊಡನೆ ನೀನು ಯುದ್ಧಕ್ಕೆ ಸಿದ್ಧನಾಗುವುದು. ಆಕಾಲಕ್ಕೆ ಇನ್ನೂ ಬೇಕಾದಷ್ಟು ಸೈನ್ಯವನ್ನೂ ದ್ರವ್ಯವನ್ನೂ ಒದವಿಸಿಕೊಂಡು ನಾನೂ ಯುದ್ಧಾಂಕಣಕ್ಕೆ ಬಂದು ನಿಲ್ಲುವೆನು. ಶತ್ರುಜಯವಾಗುವವರಿಗೂ ನಮ್ಮ ದಮಯಂತಿಯು ಮಕ್ಕಳೊಡನೆ ಇಲ್ಲೇ ಇರಲಿ. ಅನಂತರ ನೀನು ಕರೆಯಿಸಿಕೊಳ್ಳಬಹುದು.

ನಳ—ತಮ್ಮ ಪ್ರಣೆಯಾದಂತಾಗಲಿ. ಹಾಗೇ ಮಾಡುವೆನು.

ಭೀ—(ಸ್ವಲ್ಪ ಮುಂದೆ ಬಂದು ನಿಂದು) ದೈವಾನುಗ್ರಹದಿಂದ ಈಗ ನಾನು ನಿಶ್ಚಿಂತನಾದೆನು.

ಶಾ|| ವೃ|| ದೈವಾನುಗ್ರಹದಿಂದಮೆನ್ನಸುತೆತಾಂಗೆಯ್ದ ಳ್ರಹ ಸ್ತಂತ್ರಮಂ |
ದೈವಾನುಗ್ರಹದಿಂದೆ ಬಂದ ನೃತುಪರ್ಣೋರ್ವೀಶ್ವರಂ ವೇಗದಿಂ |
ದೈವಾನುಗ್ರಹದಿಂದೆ ಸಂಗಡಿಸಿದಳ್ ಮತ್ಪುತ್ರಿ ತನ್ನೋಪನಿಂ |
ದೈವಾನುಗ್ರಹದಿಂ ದಮುಂದಮುದದಿಂ ನಿಶ್ಚಿಂತ ನಿಂತಾದೆನಾಂ ||೧೫||

(ಎಲ್ಲರೂ ತೆರಳುವರು)

ಆರನೆಯಂಕವು ಮುಗಿದುದು.

ಸಪ್ತಮಾಂಕಂ.

ಪಾಟಲೀಪುರದ ಬೀದಿ.

(ಕಾರ್ಪಟಿಕ (ಬುಡುಬುಡಿಕೆಯವನ) ಪ್ರವೇಶ)

ಕಾರ್ಪಟಿಕ—(ಬುಡುಬುಡಿಕೆಯನ್ನು ಡುಬುಡುಕ್ಕೆಂದು ಅಳ್ಳಾಡಿಸುತ್ತ)

॥ ಶರಷಟ್ಪದಿ ॥

ಕೇಳಿರಿ ಕೇಳಿರಿ | ತಾಳದೆಭಯವನು | ಪೇಳುವಪಕ್ಷಿಯಶಕುನವನು ||
ಕಾಲದಮಹಿಮೆಯ | ಕೇಳಿದಜನರಿಗೆ | ಗಾಳಿಯಕರುಣದೆಜಯವಹುದು ||೧||

(ಡುಬುಡುಕ್)

ಬಂದಪ್ರವೀಕಪೆ | ಯಿಂದಲಿಜನರಿಗೆ | ದೊಂದುಮಹಾಭಯಭರದಿಂದ ||
ಹಿಂದಸುಮುಂದಸು | ಚಂದದಿತಿಳಿದವ | ರೊಂದಿನಿಸುಂಕೆಡರದರಿಂದ ||೨||

(ಡುಬುಡುಕ್)

ಪೊಡವಿಯಮುಂದಣ | ನಡೆವಳಿಯೆಲ್ಲವ | ಘಡಘಡಶಕುನದಪಕ್ಷಿಗಳು ||
ಒಡನೊಡನಿರುಳೊಳು | ನುಡಿದುವೃಮರದೊಳು | ಬಿಡದೊಂದನುನಾಂಪೇಳುವೆನು ||೩||

(ಡುಬುಡುಕ್)

(ಏನು ಹೇಳುತ್ತ ಪುಷ್ಕರನ ಮಂತ್ರಿಯಾದ ಸುಮತಿಯ ಮನೆಯ ಮುಂದೆ ಬಂದು) ಈ ಮನೆಯಲ್ಲಿ ಸಂತೋಷವಾಗುತಯ್ತೆ. ಈ ಮೂಲೆ ಯಿಂದ ಒಂದು ಚಿಂತೆ ಬರುತಯ್ತೆ. ಅದು ಬೆಟ್ಟಥಂಗೆ ಒಂದು ತರಗೆಲೆ ಯಂತೆ ತೇಲಿಹೋಗುತಯ್ತೆ. (ಡುಬುಡುಕ್)

ಬರಮ, ನಾರಾಯಣ, ಸಿವ ಒಳ್ಳೇದು ಮಾಡುತಾರೆ. ಈ ಮನೆ ಯಲ್ಲಿ ಜಯವುಂಟೆಂದು ಪಾಲಕ್ಕಿ ಹೇಳುತಯ್ತೆ. ಸಕುನಾ ಕೇಳದೋರಿಗೆ ಸಿರಿಬರುತಯ್ತೆ. (ಡುಬುಡುಕ್, ಡುಬುಡುಕ್)

ದ್ವಾರಪಾಲಕ—ಎಲೈ ಕಾರ್ಪಟಿಕನೆ ಇಲ್ಲಿಗೇಕೆಬಂದೆ? ಸದ್ದುಮಾಡಬೇಡ, ಅತ್ತಲಾಗಿ ಹೋಗು.

ಕಾ—ಅಯ್ಯಾ ಕೋಪವಮಾಡಬೇಡ, ನಾನು ಇಲ್ಲಿಗೇ ಬಂದಿದೇನೆ. ಇನ್ನೆತ್ತಲಾಗಿ ಹೋಗಲಿ? ಸದ್ದುಮಾಡದೆ ನಾನು ಸಕುನಾ ಹೇಳೋದು ಹೆಂಗೆ? ನಿಮ್ಮ ಮಂತ್ರಿಗಳಿಗೆ ಒಬ್ಬ ಸುಕುನಾ ಹೇಳೋನು ಬಂದವನೆಂದು ತಿಳಿಸಯ್ಯಾ. ನಾನು ಕೈನೋಡಿ ಮುಂದಾಗೂದನ್ನೂ ಹೇಳೋದುಂಟು.

ದ್ವಾ—(ನಸುನಗುತ್ತ) ಓಹೋಹೊ! ನೀನು ಹೇಳೋದೆಲ್ಲಾ ನಿಜವಾಗಿ ಆಗಿಬಿಡುತ್ತೆಯೇನೊ? ಇಂಥ ಬುಡುಬುಡಿಕೆಯನ್ನು ಈ ಪಾಟಲೀಪುರದಲ್ಲಿ ನಾನೆಷ್ಟು ಕೇಳಿಲ್ಲ. ಈಗ ನಮ್ಮ ಮಂತ್ರಿಗಳು ಪುಷ್ಕರ ಮಹಾರಾಜನ ಅಸ್ಥಿ ಸಕ್ಕೆ ಹೊರಟಿರುವರು. ಸಮಯವಿಲ್ಲ ಇನ್ನೊಂದುವೇಳೆ ಬಾ, ಹೋಗು.

ಕಾ—ಹಂಗನ್ನಬೇಡಪ್ಪಾ, ನಾನು ಹೇಳೂಸಕುನವನ್ನೆಲ್ಲಾ ನಿಮ್ಮ ಮಂತ್ರಿಗಳು ಚೆನ್ನಾಗಿ ತಿಳೀಬಲ್ಲರು. ನನ್ನ ಮಾತನ್ನು ತಿಳಿಸಿದರೆ ಅವರೆಂದಿಗೂ ನಿನ್ಹಂಗೆ ಹೇಳಲಾರರು. ಹೋಗಪ್ಪಾ ತಿಳಿಸು. ಆಮೇಲೆ ನಿನಗೂ ವಸಿ ಸಕುನಾ ಹೇಳುತೇನೆ.

ದ್ವಾ—ಹಂಗಾದರೆ ನಾನು ಹೋಗಿ ತಿಳಿಸಿ ಬರುತೇನೆ. ಅವರಿಗೂ ಸದ್ದು ಮಾಡದೆ ಸುಮ್ಮನಿರು.

ಕಾ—ಹಂಗೇ ಆಗಲಿ.

ದ್ವಾ—(ತೆರಳಿದನು) (ಜೋಯಿಸನೊಬ್ಬನು ಬರುವನು)

ಕಾ—(ಕೈಮುಗಿದು) ಸ್ವಾಮಿ ತಾವು ಯಾರು? ಎಲ್ಲಿಂದ ಬಂದಿರಿ?

ಜೋಯಿಸ—ಅಯ್ಯಾ ನಾನು ಜೋಯಿಸನು. ದಕ್ಷಿಣದೇಶದಿಂದ ಬಂದಿರುವೆನು.

ಕಾ—ಹಂಗಾದರ ತಾವೇನು? ಪಗಸನೆ ಹೇಳೋರೋ? ಹೆಸರುಬಲ ಹೇಳೋರೊ? ಪಂಚಾಂಗ ಬರೆಯೋರೋ?

ಜೋ—ನಾನು ಪ್ರಶ್ನೆಯನ್ನೂ ಹೇಳುತ್ತೇನೆ. ಹೆಸರುಬಲವನ್ನೂ ಹೇಳುತ್ತೇನೆ. ಪಂಚಾಂಗವನ್ನು ಬರೆಯುತ್ತದೂ ಉಂಟಯ್ಯಾ. ನೀನೇನು ಹೇಳುತ್ತೀಯೆ?

ಕಾ—ನಾನು ಹಕ್ಕೀ ಸಕುನಾ ಹೇಳೋನು ಸ್ವಾಮಿ. ಕೈನೋಡಿ ಮುಂದಾ ಗೂದನ್ನೂ ವಸಿ ಹೇಳೂದುಂಟು.

ಜೋ—ಕೈನೋಡಿ ಹೇಳುವುದು ಹಾಗಿರಲಿ. ನೀನು ಡುಬುಡುಕ್ ಡುಬು ಡುಕ್ಕೆಂದು ಬುಡುಬುಡಿಕೆಯನ್ನು ಅಳ್ಳಾಡಿಸಿಬಿಟ್ಟು, ಹಕ್ಕಿ ಹೀಗೆ ಹೀಗೆ ನುಡಿಯುತ್ತದೆಯೆಂದು ಹೇಗೆ ಹಿಡಿಯುತ್ತೀಯೆ?

ಕಾ—ಸ್ವಾಮಿ ನಾನು ಹೆಂಗೊ ಹಿಡಿಯುತ್ತೇನೆ. ನೀವು ಮೂರು ಮೂರು ಆರು, ಆರು ಮೂರು ಒಂಭತ್ತು ಎಂದು ಬೆರಳುಗಳನ್ನು ಎಣಿಸಿ ಬಿಟ್ಟು, ಸನಿ ಮೂರನೇ ಕಡೆಗೆ ಬಂದ, ನಾಕನೇಕಡೆ ನೋಡುತ್ತಾನೆ ಎಂತ ಹೇಳ ಕೈ ಬೆಚ್ಚಗೆ ಮಾಡಿಕೊಂಡು ಹೊಂಟೋಗುತ್ತೀರಲ್ಲಾ! ಇಂತಾ ಗರಹ ಇಲ್ಲಿ ಬಂತು. ಇಲ್ಲಿ ನೋಡುತಯ್ತೆ ಎಂತ ನೀವು ಹೆಂಗೆ ಹಿಡಿಯುತ್ತೀರಿ? ನಮ್ಮಪ್ಪಾ ವಸಿಹೇಳ.

ಜೋ—ಅದಕ್ಕೆಲ್ಲಾ ನಮಗೆ ಶಾಸ್ತ್ರವಿದೆ.

ಕಾ—ನನಗೂ ನಮ್ಮ ಗುರು ಹೇಳಕೊಟ್ಟ ಸಾಸ್ತ್ರವಯ್ತೆ.

ಜೋ—ಅದೆಂತಹ ಶಾಸ್ತ್ರ! ಬೇಕಾದಷ್ಟು ಹಣಾ ಕಾಸೂ ಬಟ್ಟೆ ಬರೆ ಕಿತ್ತು ಕೊಂಡು ಹೋಗುವ ಶಾಸ್ತ್ರ!

ಕಾ—ಅಯ್ನೋರೆ ನೀವು ಪುಗಸಟ್ಟೆ ಬಂದೋವನ್ನೆಲ್ಲಾ ಬುಟ್ಟುಬುಡು ತ್ತೀರೇನೊ?

ಜೋ—ನಮುನಮುಗೇಕಯ್ಯಾ ಜಗಳ! ಸುಮ್ಮನಿರು. ನಿನಗೆ ಬಂದುದು ನಿನಗೆ. ನನಗೆ ಬಂದುದು ನನಗೆ.

ಕಾ—ಸೈ ಸೈ, ಹಂಗ್ಹೇಳ.

ದ್ವಾ—(ಬಂದು) ಅಯ್ಯಾ ಕಾರ್ಪಟಿಕನೆ ನಿನ್ನಪುಣ್ಯವು ಚೆನ್ನಾಗಿದೆ. ನಿನ್ನನ್ನು ಒಳಕ್ಕೆ ಬಿಡುವಂತೆ ನಮ್ಮ ಮಂತ್ರಿಗಳ ಅಪ್ಪಣೆಯಾಗಿದೆ ಹೋಗು.

ಕಾ—ಸೈ ಸೈ, ಹಂಗ್ಹೇಳಪ್ಪಾ, ಇದೋ ಹೋಗುತೇನೆ (ಡುಬುಡುಕ್ ಡುಬುಡುಕ್) (ತೆರಳಿದನು)

ದ್ವಾ—(ನೋಡಿ) ನೀವು ಯಾರು ಸ್ವಾಮಿ?

ಜೋ—ನಾನೊಬ್ಬ ಜೋಯಿಸನಯ್ಯಾ.

ದ್ವಾ—ಓಹೋ! ನೀವು ಜೋಯಿಸರೋ? ನಿಮ್ಮ ಹೆಸರೇನು?

ಜೋ—ಗಣಪತಿಜೋಯಿಸನೆಂದು ಹೇಳುತ್ತಾರೆ.

ದ್ವಾ—(ನಸುನಗುತ) ನಿಜ ನಿಮ್ಮನ್ನು ನೋಡಿದರೆ ಗಣಪತೀಹಂಗೇ ಇದ್ದೀರಿ. ನಮ್ಮ ಮಂತ್ರಿಗಳು ಗಣಪತಿಜೋಯಿಸರೆಂಬುವರು ಬಂದರೆ ಅವರನ್ನು ಒಳಗೆ ಬಿಡಬೇಕೆಂದು ಮೊದಲೇ ಅಪ್ಪಣೆ ಮಾಡಿದ್ದರು. ನೀವೂ ಒಳಗೆ ದಯಮಾಡಿಸಬಹುದು. ನನಗೆ ವಸಿ ಹೆಸರುಬಲಾ ಹೇಳಬೇಕಲ್ಲಾ?

ಜೋ—ಈಗ ಹೇಳುವುದೆಲ್ಲಯ್ಯಾ? ಆಗಲಿ, ಆಮೇಲೆ ಹೇಳುತ್ತೇನೆ.

ದ್ವಾ—ಆಮೇಲ ನೀವೆಲ್ಲೋ ನಾನೆಲ್ಲೊ! ಒಳ್ಳೇದಿರಲಿ, ಹೋಗಿಬನ್ನಿ.

(ಇಬ್ಬರೂ ತೆರಳಿದರು)

ಅಸ್ಥಾನ.

(ಪುಷ್ಕರ, ಸುಮತಿ, ಭರತ, ಸೇನಾಪತಿಗಳ ಪ್ರವೇಶ)

ಪು— ಕಂ|| ಧಡಧಡಮುತ್ತಂ ಸತಿಯಿಂ |
ದೊಡಗೂಡಿದ ನಳನನಿನ್ನ ದೊರ್ಕೆಯದೆಂತಾ |
ದೊಡಮಕ್ಷದ್ಯೂತದೆ ಗೆ |
ಲ್ದಡವಿಗೆ ಕಳುಹದಿರಲಾಗೆನಾಂ ನಿಶ್ಚಿಂತಂ ||೪||

ಎಲೈ ಸುಮತಿಯೇ ಅಯೋಧ್ಯಾನಗರದ ಕಡೆಗೆ ಹೋಗಿದ್ದ ನಮ್ಮ ಗೂಢಚಾರರಿಂದ ದಮಯಂತಿಗೆ ಪುನಸ್ಸ್ವಯಂವರವೆಂಬ ಸುದ್ದಿಯನ್ನು ಕೇಳಿ, ಹೇಗಾದರೂ ಮಾಡಿ ಅವಳನ್ನು ನಾನು ವರಿಸಬೇಕೆಂದು ಬಹು ಕುತೂಹಲಪಟ್ಟು, ವಿದರ್ಭದೇಶಕ್ಕೆ ಪ್ರಯಾಣಮಾಡಿದೆನು. ಅರ್ಧಮಾರ್ಗದಲ್ಲಿಯೇ ಮತ್ತೊಬ್ಬ ಗೂಢಚಾರನು ಬಂದು ಮೂರುವರುಷಗಳಿಂದಲೂ ಹೆಸರಿಲ್ಲದಹಾಗೆ ಅಡಗಿಹೋಗಿದ್ದ ಶತ್ರುವಾದ ನಳನು ದಮಯಂತಿಯನ್ನು ಸೇರಿದನೆಂಬ ವೃತ್ತಾಂತವನ್ನು ತಿಳಿಸಿದೊಡನೆ—

ಕಂ|| ಭರದಿಂದಂ ಕಾರ್ಗಾಲದೆ |
ಪರಿವಪೊನಲ್ ಬತ್ತುವಂತೆ ಬೇಸಗೆಯೊಳ್ ||
ಭರಮಾದೆನ್ನ ಕುತೂಹಲ |
ಮರೆನಿಮಿಸದೆ ಪಿಂಗಿಪೋದುದೇನೆಂದಪೆನಾಂ ||೫||

ಆದುದರಿಂದ ಈಗಲೂ ಆ ವೈರಿಯನ್ನು ಇನ್ನೊಂದುಸಲ ಜೂಜಿನಲ್ಲಿ ಸೋಲಿಸಿ, ಕಾಡಿಗೆ ಕಳುಹಿಸಿದ ಹೊರತು ನನ್ನ ಮನಸ್ಸಿಗೆ ಸಮಾಧಾನವಾಗುವುದಿಲ್ಲ. ಈ ವಿಷಯದಲ್ಲಿ ನಿಮ್ಮಗಳ ಅಭಿಪ್ರಾಯವೇನು ?

ಸುಮತಿ—ಮಹಾರಾಜನೆ ಬುಡುಬುಡಿಕೆಯವನ ವೇಷದಿಂದ ವಿದರ್ಭದೇಶಕ್ಕೆ ಹೋಗಿದ್ದ ನಮ್ಮ ಗೂಢಚಾರನಾದ ಮಲಯಸಾರನಿಂದ ಈ ದಿವಸ ಬಂದ ಸಮಾಚಾರವನ್ನು ಸ್ವಲ್ಪ ಕೇಳಬೇಕು.

ಪು—ಅದೇನು ? ಹೇಳು.

ಸು—ಇದೊ ಅರಿಕೆಮಾಡುವೆನು. ಈಗ ನಳನು ಮಾವನಾದ ಭೀಮಭೂಪತಿಯಿಂದ ಅಪರಿಮಿತವಾದ ದ್ರವ್ಯವನ್ನೂ ಸೈನ್ಯವನ್ನೂ ಸಹಾಯ ಮಾಡಿಕೊಂಡು ನಿನ್ನ ಮೇಲೆ ಯುದ್ಧಕ್ಕೆ ಹೊರಟಿರುವನೆಂತಲೂ ಇದುವರಿಗೂ ಎಲ್ಲಿದ್ದರೋ ಗೊತ್ತೇಯಿಲ್ಲದಿದ್ದ ಅವನ ಮಂತ್ರಿಯಾದ ನಯಸಾಗರನೂ ವಿದೂಷಕನಾದ ಮಂಡೂಕನೂ ಸಹ ಅವನ ಜೊತೆಯನ್ನು ಸೇರಿರುವರೆಂತಲೂ ತಿಳಿದು ಬಂದಿರುವುದು. ಮತ್ತು ಅಯೋಧ್ಯಾನಗರದ ಕಡೆಗೆ ಜೋಯಿಸನ ವೇಷದಿಂದ ಹೋಗಿದ್ದ ನಮ್ಮ ಗೂಢಚಾರನಾದ ಪಿಂಗಳಕನಿಂದ ಬಂದ ಸಮಾಚಾರವೇನೆಂದರೆ—ಅಯೋಧ್ಯಾಧಿಪತಿಯಾದ ಋತುಪರ್ಣರಾಯನೂ ಕೂಡ ನಳನಿಗೆ ಸಹಾಯ ಮಾಡುವುದಕ್ಕಾಗಿ ತನ್ನ ಸೇನೆಯನ್ನು ಸನ್ನಾಹಪಡಿಸುತ್ತಿರುವನೆಂದು ಕೇಳಿದೆನು. ಮೊದಲು ಈ ವಿಷಯವನ್ನು ಯೋಚಿಸಬೇಕಾಗಿದೆ.

ಪು—(ಅಲಕ್ಷ್ಯದಿಂದ) ಅವನು ಎಷ್ಟು ಸೇನೆಯನ್ನು ಬೇಕಾದರೂ ತೆಗೆದುಕೊಂಡು ಬರಲಿ. ನಾನು ಯುದ್ಧಕ್ಕೆ ಹೆದರತಕ್ಕವನಲ್ಲ. ಕೈರವನೆ ನಿನ್ನ ಅಭಿಪ್ರಾಯವೇನು ?

ಕೈ—ಮಹಾರಾಜನೆ, ಈಗ ನಳನು ಯುದ್ಧಸನ್ನಾಹವಮಾಡುತ್ತಿರುವುದನ್ನೂ ಮತ್ತು ಅವನಸಂಗಡ ಸಯುಸಾಗರನು ಸೇರಿರುವುದನ್ನೂ ಕೇಳಿದರೆ-ಅವನು ನಿನ್ನನ್ನು ಜೈಸಿ, ತನ್ನ ರಾಜ್ಯವನ್ನು ಪಡೆದುಕೊಳ್ಳುವ ವಿಷಯದಲ್ಲಿ ಅನೇಕ ರಾಜರು ಅವನಿಗೆ ಸಹಾಯರಾಗಿರುವಂತೆ ತೋರುವುದು. ಮತ್ತು ಅವನು ಈ ರಾಜ್ಯದ ಮರ್ಮಗಳನ್ನೆಲ್ಲಾ ಚೆನ್ನಾಗಿ ತಿಳಿದಿರತಕ್ಕವನು. ಅಂಥವನ ಸಂಗಡ ನೀನು ಯುದ್ಧಕ್ಕೆ ತೊಡಗಿದರೆ ನಮಗೆ ಜಯವಾಗುವುದರಲ್ಲಿ ಬಹಳವಾಗಿ ಸಂದೇಹವಿರುವುದು. ಆದಕಾರಣ ನಾವು ಯುದ್ಧಕ್ಕೆ ತೊಡಗದೆ, ಅವನಸಂಗಡ ಸಂಧಿಮಾಡಿಕೊಂಡು, ಅವನ ರಾಜ್ಯವನ್ನು ಅವನಿಗೇ ಕೊಟ್ಟುಬಿಟ್ಟು, ನ್ಯಾಯವಾಗಿ ನಿನಗೆ ಬರತಕ್ಕ ರಾಜ್ಯಭಾಗವನ್ನು ನೀನು ತೆಗೆದುಕೊಂಡು, ನೀವಿಬ್ಬರೂ ಸ್ನೇಹದಿಂದಿರುವುದು ಈಕಾಲಕ್ಕೆ ನನಗೆ ಯುಕ್ತವಾಗಿ ತೋರುವುದು.

ಪು—(ಅಸಮಾಧಾನದಿಂದ) ಇದೇನು ! ಆಶ್ಚರ್ಯವಾಗಿದೆ. ಮೊದಲಿದ್ದ ಕೈರವನೇ ಬೇರೆ, ಈಗಿರುವ ಕೈರವನೇ ಬೇರೆ ಎನ್ನುವಹಾಗೆ ಮಾತನಾಡುತ್ತಿರುವೆ ! ಮೊದಲೆಲ್ಲಾ ಈ ರಾಜ್ಯವು ನಿನ್ನದಾಗಿಯೇ ಇರಬೇಕೆಂದು ಹೇಳುತ್ತಿದ್ದವನು ಈಗ ಅವನ ರಾಜ್ಯವನ್ನು ಅವನಿಗೇ ಬಿಟ್ಟುಬಿಡಬೇಕೆಂದು ಶತ್ರುಪಕ್ಷವನ್ನೇ ಹಿಡಿದು ಮಾತನಾಡುತ್ತಿರುವೆ. ನಿನ್ನ ಬುದ್ಧಿಯು ಹೀಗೆ ವ್ಯತ್ಯಾಸವಾಗುವುದಕ್ಕೆ ಕಾರಣವೇನು ?

ಕೈ—ಮಹಾರಾಜನೆ, ಪೂರ್ವದಲ್ಲಿ ನಳನು ಶಾಪಾಹತನು ಮಂಕುಹಿಡಿದವನಂತೆ ಇದ್ದುದರಿಂದ ಆಗ ನಿನ್ನಿಷ್ಟಾನುಸಾರವಾಗಿ ನಾನು ಮಾಡಿದ ಪ್ರಯತ್ನವೆಲ್ಲಾ ಫಲಿಸಿತು. ಈಗ ನಾನು ಕೇಳಿರುವುದರಲ್ಲಿ ಅವನ ಬುದ್ಧಿಯೂ ತೇಜಸ್ಸೂ ಕೂಡ ಅತಿಶಯವಾಗಿರುವಹಾಗೆ ತೋರುವುದು. ಇದರಮೇಲೆ ನೀನು ಅವನನ್ನು ಜೂಜಿನಲ್ಲಿ ಸೋಲಿಸಿ ವನವಾಸಕ್ಕೆ ಕಳುಹಿಸಿದ ಬಳಿಕ, ಅನೇಕ ರಾಜರು ನಿನ್ನ ವಿಷಯದಲ್ಲಿ ಬಹಳ ಅಸಮಾಧಾನದಿಂದಿರುವರು. ಅವರೆಲ್ಲರೂ ನಳನಿಗೆ ಸಹಾಯರಾಗಿ ನಿನ್ನಮೇಲೆ ಬಿದ್ದರೆ ನೀನು ಗೆಲ್ಲುವುದು ಬಹಳ ಕಷ್ಟವಾಗುವುದು. ಆದಕಾರಣ ಈಗ ನನ್ನ ಬುದ್ಧಿಗೆ ತೋರಿದಂತೆ

ನಿನಗೆ ಹಿತವಾದವನ್ನು ಹೇಳಿದೆನೇ ಹೊರತು ಮತ್ತೆ ಬೇರೆಯಿಲ್ಲ. ಕೇಳು,

ಕಂ॥ ಅನವರತಂ ಪ್ರಿಯಮಾದಿಗ |
ಳೆನಿಸಿದವರ್ಪಲಬರಿರ್ಪರಿಳೆಯೊಳ್ಪ್ರಿಯಮೆಂ |
ದೆನಿಸದೊಡಂ ಹಿತವಹಮಾ |
ತನೆಪೇಳ್ವಜನಂಗಳೆಣಿಸೆದುರ್ಲಭರಿಳೆಯೊಳ್ ||೫||

ಪು—ಕೈರವನೆ, ಇಂತಹ ನೀತಿಗಳನ್ನು ನಾನೂ ಬೇಕಾದಷ್ಟು ತಿಳಿದಿದೇನೆ. ಈಗ ನಳನಿಗೆ ಎಷ್ಟುಮಂದಿ ರಾಜರು ಬೇಕಾದರೂ ಸಹಾಯರಾಗಿರಲಿ. ಈಗ ನನ್ನಲ್ಲಿರುವ ಪ್ರಜಾನುರಾಗದಿಂದಲೂ ಸೈನ್ಯಸಮೃದ್ಧಿಯಿಂದಲೂ ದ್ರವ್ಯಸಂಪತ್ತಿನಿಂದಲೂ ಯಾರಿಗೂ ನಾನು ಹೆದರತಕ್ಕವನಲ್ಲ. ನೀನು ಮಾತ್ರ ಪೂರ್ವದಂತೆ ನನ್ನ ಇಷ್ಟಾನುಸಾರವಾಗಿದ್ದರೆ ಸಾಕು. ಹಾಗಿಲ್ಲದಿದ್ದರೆ ನಳನಂತೆ ನೀನೂ ನನಗೆ ಶತ್ರುವಲ್ಲದೆ ಮಿತ್ರನುಬೇರೆ ಅಲ್ಲ. ಸುಮತಿಯೆ ನೀನೇನು ಹೇಳುವೆ?

ಸು—ಮಹಾರಾಜನೆ, ನಮ್ಮಲ್ಲಿ ಎಷ್ಟು ಪ್ರಜಾನುರಾಗವಿದ್ದರೂ ಎಷ್ಟು ಬಲವಿದ್ದರೂ ಎಷ್ಟು ದ್ರವ್ಯವಿದ್ದರೂಸಹ ಯುದ್ಧಕ್ಕೆ ತೊಡಗಿದರೆ ಜಯಪರಾಜಯಗಳು ಮಾತ್ರ ಹೀಗೇ ಸರಿಯೆಂದು ಯಾರೂ ಹೇಳಲಾರರು. ಪೂರ್ವದಂತೆ ಜೂಜಾಡಬೇಕಾದರೂ ಈಗ ನನಗೊಂದು ಸಂದೇಹವಿರುವುದು. ಕೇಳು, ನೀನು ಕರೆದರೆ ನಳನೇನೂ ಜೂಜಾಡುವುದಕ್ಕೆ ಹಿಂಜರಿಯಲಾರನು. ಆದರೆ ಅವನು ಋತುಪರ್ಣರಾಯನನ್ನು ಹೆಚ್ಚಾಗಿ ಸ್ನೇಹಮಾಡಿಕೊಂಡಿರುವುದು ಮಾತ್ರ ಶಂಕಿಸತಕ್ಕ ವಿಷಯವಾಗಿರುವುದು. ಏಕೆಂದರೆ—ಋತುಪರ್ಣರಾಯನು ಅಕ್ಷಹೃದಯವನ್ನು ಚೆನ್ನಾಗಿ ಬಲ್ಲವನೆಂದು ಲೋಕಪ್ರಸಿದ್ಧಿಯಿರುವುದು. ಆದಕಾರಣ ಒಂದುವೇಳೆ ನಳನು ಅವನಿಂದ ಆ ವಿದ್ಯವನ್ನು ಗ್ರಹಿಸಿದ್ದರೂ ಇರಬಹುದೆಂದು ನನ್ನ ಮನಸ್ಸಿಗೆ ಹೊಳೆಯುವುದು, ಹಾಗಿದ್ದಲ್ಲಿ ಅವನಸಂಗಡ ನೀನು ಜೂಜಾಡಿದರೆ ಪೂರ್ವದಂತೆ ನಿನಗೇ ಜಯವಾಗುವುದೆಂದು ನಿರ್ಧರಿಸುವುದಕ್ಕಾಗುವುದಿಲ್ಲ. ಇದ

ನ್ನೆಲ್ಲಾ ಯೋಚಿಸಿದರೆ ಈಗ ಸಂಧಿಮಾಡಿಕೊಳ್ಳುವುದೇ ನನಗೂ ಉತ್ತಮಪಕ್ಷವಾಗಿ ತೋರುವುದು.

ಋ—(ಅಸಮಾಧಾನದಿಂದ) ಛೀ, ಛೀ, ಇದೇನು! ಕೈರವನಂತೆ ನೀನೂ ಹೀಗೆ ಹೇಳುವೆ! ಆ ಋತುಪರ್ಣನೇನು ನಾನು ಕಾಣದವನೆ? ಅಯ್ಯೋ ಪಾಪ! ಪಗಡೇದಾಳವನ್ನು ಕೂಡ ಕಯ್ಯಲ್ಲಿ ಹಿಡಿಯುವುದಕ್ಕೆ ಅವನಿಗೆ ಗೊತ್ತಿಲ್ಲ. ಅಂಥವನಿಂದ ಇವನೇನು ಕಲಿತಿದ್ದಾನು! ನೀನೇನೋ ಸುಮ್ಮನೆ ಭ್ರಾಂತಿಪಡುತ್ತಿರುವೆ. ಆ ಭೂಲಾಕ್ಷನು ಬಂದರೂ ಕೂಡ ನನ್ನಸಂಗಡ ಜೂಜಾಡಿ ಗೆಲಲಾರನು. ಹೀಗಿರುವಲ್ಲಿ ಆ ಮಂಕನನ್ನು ಗೆಲ್ಲುವುದು ಎಷ್ಟರಲ್ಲಿದೆ? ಈ ಶಂಕೆಯನ್ನು ಬಿಡು. ಎಲೈ ಸೇನಾಪತಿಯೆ, ಪ್ರಕೃತದಲ್ಲಿ ಆಯಾ ಗಡಿಗಳಲ್ಲಿರುವ ನಮ್ಮ ಚತುರಂಗಸೈನ್ಯಗಳನ್ನೂ ತಕ್ಕ ಯುದ್ಧಸನ್ನಾಹದೊಡನೆ ನಮ್ಮ ದೇಶದ ಎಲ್ಲೆಗಟ್ಟುಗಳಲ್ಲಿ ಬಂದು ನಿಲ್ಲುವಂತೆ ಆಜ್ಞಾಪಿಸುವುದು. ಮತ್ತು ಯಾವಕಡೆ ಪರಸೇನೆ ಬಂದರೂ ಅದನ್ನು ತಡೆದು ಆಕ್ಷಣವೇ ರಾವುತರಿಂದ ನನುಗೆ ತಿಳಯುಪಡಿಸುವುದು.

ಸೇ—ಮಹಾರಾಜನಪ್ಪಣೆಯಾದಂತಾಗಲಿ.

ದ್ವಾ—(ಬಂದು ಅಡ್ಡಬಿದ್ದು) ಒಡೆಯನೆ, ವಿದರ್ಭದೇಶದಕಡೆಯಿಂದ ಒಬ್ಬ ಚಾರನು ಬಂದು ಪತ್ರಿಕೆಯನ್ನು ತೆಗೆದುಕೊಂಡು ಬಂದಿರುವನು.

ಋ—ಏನು! ಪತ್ರಿಕೆಯನ್ನು ತಂದಿರುವನೆ? ಅವನನ್ನು ಇಲ್ಲಿಗೆ ಕರೆತರುವುದು.

ಸು—ಅವನಲ್ಲಿ ಆಯುಧವೇನಾದರೂ ಇದ್ದೀತು! ಶೋಧನೆಮಾಡಿ ಕರೆತರುವುದು.

ದ್ವಾ—ಅಪ್ಪಣೆ. (ತೆರಳಿ ಚಾರನೊಡನೆ ಬರುವನು.)

ಚಾ—(ಅಡ್ಡಬಿದ್ದು) ಈ ಪತ್ರಿಕೆಯನ್ನು ನಮ್ಮೊಡೆಯನಾದ ನಳಮಹಾರಾಜನು ತಮಗೆ ಒಪ್ಪಿಸುವಂತೆ ಕಳುಹಿಸಿಕೊಟ್ಟಿರುವನು.

ಋ—ಸುಮತಿಯೇ ಅದನ್ನು ತೆಗೆದುಕೊಂಡು ಓದು. ಏನು ಬರೆದಿರುವನೊ, ಕೇಳೋಣ.

ಸು—ಅಪ್ಪಣೆ. (ತೆಗೆದುಕೊಂಡು) ಚಾರನೇ ಹೊರಗಿರು.

ಚಾ—ಅಪ್ಪಣೆ. (ತೆರಳಿದನು)

ಸು—(ಓದುವನು) ಶ್ರೀಮಂತನಾದ ಪುಷ್ಕರಮಹಾರಾಜನಿಗೆ—ಮಹಾರಾಜ ನಳನು ತಿಳಿಯಪಡಿಸುವುದೇನೆಂದರೆ—ಈಗ ನಾನು ಬಹುದ್ರವ್ಯವನ್ನು ಸಂಪಾದಿಸಿ ನಿನ್ನಸಂಗಡ ಜೂಜಾಡುವುದಕ್ಕೆ ಬರಲು ಸಿದ್ಧನಾಗಿರುವೆನು. ಇದಕ್ಕೆ ನಿನಗೆ ಅಪೇಕ್ಷೆಯಿದ್ದಲ್ಲಿ ಪಾಟಲೀಪುರದ ಹೊರಗಿರುವ ದ್ಯೂತಮಂಟಪದಲ್ಲಿ ಅಕ್ಷದ್ಯೂತಕ್ಕೆ ಸಿದ್ಧನಾಗುವುದು. ಇದಕ್ಕೆ ನಿನಗೆ ಅಪೇಕ್ಷೆಯಿಲ್ಲದಿದ್ದರೆ ನನ್ನ ರಾಜ್ಯದ ನಿಮಿತ್ತವಾಗಿ ನಾನು ಕ್ಷತ್ರಿಯಧರ್ಮವನ್ನು ಅನುಸರಿಸಿ ನಿನ್ನಮೇಲೆ ಯುದ್ಧಕ್ಕೆ ಬರಲು ಸನ್ನದ್ಧನಾಗಿರುವೆನು. ಅದಕ್ಕಾದರೂ ನೀನು ಒಪ್ಪಬೇಕು. ದ್ಯೂತಮಂಟಪಕ್ಕೆ ನಾನು ಬರಬೇಕಾದಲ್ಲಿ ಅಂಗರಕ್ಷಣೆಗೆ ತಕ್ಕಷ್ಟು ಸೈನ್ಯದೊಡನೆಯೂ ಪರಿಜನದೊಡನೆಯೂ ಬರುವೆನು ಇದಕ್ಕೆ ಸಮ್ಮತಿಸಿ, ಉತ್ತರವನ್ನು ಕೊಡಬೇಕು. ಈ ವಿವರವನ್ನು ನಿನ್ನ ಮನಸ್ಸಿಗೆ ಸರಿತರುವುದು.

ನಳಮಹಾರಾಜ.

ಪು—(ಕೇಳಿ, ಸಂತೋಷದಿಂದ) ಅಹ! ನಾನು ಆಲೋಚಿಸಿದ ಕಾರ್ಯಕ್ಕೆ ದೈವವೂ ಅನುಕೂಲವಾಗಿರುವುದು. ಸುಮತಿಯೆ ಇದಕ್ಕೆ ಉತ್ತರವನ್ನು ಬರೆ. ಏನೆಂದರೆ—ನಿ ಪತ್ರಿಕೆಯನ್ನು ನೋಡಿ ಬಹಳ ಸಂತೋಷವಾಯಿತು. ನಿನ್ನ ಇಷ್ಟಾನುಸಾರವಾಗಿ ಕೂಡಲೇ ನೀನು ದ್ಯೂತಮಂಟಪಕ್ಕೆ ಬಂದು ಸೇರುವುದು. ನಾನೂ ಸಿದ್ಧನಾಗಿರುವೆನು. ಎಂದು.

ಸು—ಮಹಾರಾಜನಪ್ಪಣೆಯಾದಂತಾಗಲಿ.

ಪು—(ಎದ್ದು) ಕೈರವನೆ, ನಾನಾಗಿ ಅಪೇಕ್ಷಿಸುತ್ತಿದ್ದ ಕಾರ್ಯಕ್ಕೆ ನಳನು ತಾನಾಗಿ ಅಪೇಕ್ಷಿಸುತ್ತಿರುವುದು ಹೇಗಾಯಿತೆಂದರೆ, ಕೇಳು—

ಕಂ॥ ಉರುಫಲಕೋಸುಗಮೇರ |
ಲ್ಮರನಂ ನಿಚ್ಚಣಿಗೆಯೊಂದನೆಳಸುತ್ತಿರ್ಪಾ ||
ಪುರುಷಂಗೇನೆಂದಪೆನಾ |
ನೆರಂಕೆಗಳೆ ಭೋಂಕನೊಗೆದತೆರನಾಯ್ತುಮಹಾ ||೬||

(ಎಲ್ಲರೂ ತೆರಳಿದರು.)

ಬೀದಿ.

(ಜಂಘಾಲ ಸುವೇಗರೆಂಬ ಚಾರರ ಪ್ರವೇಶ)

ಸುವೇಗ—(ವೇಗದಿಂದ ಬರುವನು.)

ಜಂಘಾಲ—(ಎದುರಿಗೆ ಬಂದು) ಸುವೇಗನೆ ಇದೇನು ! ಇಷ್ಟು ತ್ವರೆ ?

ಸುವೇ—ಜಂಘಾಲನೆ, ವಿದರ್ಭದೇಶದಿಂದ ನಳಮಹಾರಾಜನು ಅಪರಿಮಿತವಾದ ಚತುರಂಗಸೈನ್ಯದೊಡನೆ ಹೊರಟಿರುವನೆಂತಲೂ ಆ ಸೈನ್ಯವನ್ನೆಲ್ಲಾ ಮಾರ್ಗದಲ್ಲೇ ಅಲ್ಲಲ್ಲಿ ಬಿಟ್ಟು, ನಮ್ಮ ಮಹಾರಾಜನ ಅಪ್ಪಣೆಯಾಗಿದ್ದಂತೆ ನೂರಾರುಮಂದಿ ಪರಿಜನದೊಡನೆ ಮಾತ್ರ ಈ ರಾಜಧಾನಿಯ ಕಡೆಗೆ ಬರುತ್ತಿರುವನೆಂತಲೂ ಮಂತ್ರೀಶ್ವರನಿಗೆ ಜಾಗ್ರತೆಯಾಗಿ ತಿಳಿಸಿಬಾ ಎಂದು ನಮ್ಮ ಸೇನಾಪತಿಯಾದ ಚಂಡಬಲನು ನನಗಾಜ್ಞಾಪಿಸಿರುವನು. ಅದಕ್ಕಾಗಿ ಬೇಗಬೇಗನೆ ಹೋಗುತ್ತಿರುವೆನು. ನೀನೆತ್ತಲಾಗಿ ಹೊರಟೆ ?

ಜಂ—ಕೇಳು, ನಳಮಹಾರಾಜನು ಇತ್ತಲಾಗಿ ಬಂದ ಸುದ್ದಿಯನ್ನು ಕೇಳಿ ಪುರಜನರು ಏನಾದರೂ ಗಲಭೆಮಾಡಿಯಾರೆಂದು ಅವರನ್ನು ತಡೆಯುವುದಕ್ಕಾಗಿ ನಗರಾಧ್ಯಕ್ಷನಿಗೆ ಮಹಾರಾಜನು ಕೊಟ್ಟಿರುವ ಆಜ್ಞೆಯನ್ನು ತಿಳಿಸುವುದಕ್ಕಾಗಿ ನಾನು ಹೋಗುವೆನು.

ಸುವೇ—ಹಾಗಾದರೆ, ನಡೆನಡೆ ಹೊತ್ತಾಯಿತು. ನಾನೂ ಹೋಗುವೆನು.

(ಇಬ್ಬರೂ ತೆರಳಿದರು)

ದ್ಯೂತಮಂಟಪ.

(ಕೈರವ ಸುಮತಿ ಮೊದಲಾದವರೊಡನೆ ಪುಷ್ಕರನ ಪ್ರವೇಶ)

ಪು— * ಕಂ|| ಇಂದೆನ್ನಮನಕ್ಕೆ ಮಹಾ |
ನಂದಂಲಭಿಸಿದುದು ಮಗುಳೆ ಜೂಜಿಂಗೆನಳಂ ||

---

* ರಾಗ—ಬೇಹಾಗ್ | ರೂಪಕತಾಳ || (ಘನವಸಂತ ಎಂಬಂತೆ)

ಭಳಿರೆಪಾರವಿಲ್ಲ ಮನವು | ತಳೆದಹರಿಸಕೆ | ನಳನುಜೂಜನಾಡಲಿತ್ತ ! ಲೊಲಿದುಬರಲಿಕೆ ||೧|| ಹಂದೆಯವನು ಮಾವನಮನೆ | ಯಿಂದನಾಚದೆ | ತಂದಸಿರಿಯಬಿಡೆನುಪಾಯ | ದಿಂದಗೆಲ್ಲದೆ ||೨|| ಪಂತಕೆಬಳಿಕೊಡ್ಡಿಸಿದಮ | ಯಂತಿಯನಾನು | ಚಿಂತೆಯೇನುಗೆದ್ದುಕೊಂಡು | ಸೌಖ್ಯಪಡುವೆನು ||೩||

ಬಂದುದರಿಂ ದಮಯಂತೀ |
ಸುಂದರಿಯೊಡನವನಸಿರಿಯಗೆಲ್ಲದೆ ಬಿಡೆನಾಂ ||೬||

ದ್ವಾ—(ಬಂದು ಕೈಮುಗಿದು) ಒಡೆಯನೆ, ನಳಮಹಾರಾಜನು ಪರಿವಾರ ಸಹಿತ ಬಂದಿರುವನು.

ಪು—(ಕೇಳಿ) ಬಹಳ ಸಂತೋಷ, ಬರಲಿ. ಸುಮತಿಯೆ, ರಾಜಮರ್ಯಾದೆಯಿಂದ ಕರದುಕೊಂಡು ಬರುವುದು.

ಸು—ಅಪ್ಪಣೆ. (ದ್ವಾರಪಾಲಕನೊಡನೆ ತೆರಳದನು.)

ಪು—ಮಿತ್ರನೆ, (ಕೈರವನೊಡನೆ ಕಿವಿಮಾತಾಡುವನು.)

ನಳ—(ನಯಸಾಗರ ಮಂಡೂಕರೊಡನೆ ಬರುವನು.)

ಸು—ಹೀಗೆ ದಯಮಾಡಿಸಬೇಕು.

ಪು—(ಉಲ್ಲಾಸದಿಂದ ಕೈಹಿಡಿದು) ರಾಯನೆ, ಹೀಗೆ ಬರಬೇಕು.

ನಳ—ಇದೊ ಬಂದೆನು. (ಸ್ವಲ್ಪ ನಡೆದು) ಎಲೈ ಪುಷ್ಕರನೆ, ನಾನು ಬಹು ದ್ರವ್ಯವನ್ನು ಸಂಪಾದಿಸಿಕೊಂಡು ಬಂದಿರುವೆನು. ಅದನ್ನೂ ಮತ್ತು ನನ್ನ ಸರ್ವಸ್ವವನ್ನೂ ನನ್ನ ಪ್ರಾಣಗಳೊಡನೆ ಪಂತಕ್ಕೆ ಒಡ್ಡಿ ನಿನ್ನೊಡನೆ ಪಗಡೆಯನ್ನಾಡುವುದಕ್ಕೆ ನಿಶ್ಚಯಿಸಿಕೊಂಡು ಬಂದಿರುವೆನು. ಇದಕ್ಕೆ ಪ್ರತಿಯಾಗಿ ನೀನು ನಿನ್ನ ಪ್ರಾಣಗಳೊಡನೆ ನಿನ್ನ ರಾಜ್ಯವನ್ನೂ ನಿನ್ನ ಸರ್ವಸ್ವವನ್ನೂ ಸಹ ಪಂತಕ್ಕೆ ಒಡ್ಡಿ ನನ್ನೊಡನೆ ಆಡಬೇಕು. ಹೀಗೆ ಜೂಜಾಡುವುದಕ್ಕೆ ನಿನಗೆ ಇಷ್ಟವಿಲ್ಲದಿದ್ದರೆ ನನ್ನೊಡನೆ ಯುದ್ಧಕ್ಕೆ ಸಿದ್ಧನಾಗು. ನಮ್ಮಿಬ್ಬರಲ್ಲಿ ಯಾರಿಗಾದರೂ ಒಬ್ಬರಿಗೆ ಜಯವಾಗುವುದು.

ಪು—(ಉಲ್ಲಾಸದಿಂದ) ಭಾಪು ನೀನೇ ಭಾಪು, ದೈವಯೋಗದಿಂದ ನೀನು ದ್ರವ್ಯವನ್ನು ಸಂಪಾದಿಸಿಕೊಂಡು ನನ್ನಸಂಗಡ ಜೂಜಾಡುವುದಕ್ಕೆ ಬಂದೆ. ಈ ಆಟಕ್ಕೆ ನೀನು ಯಾವಾಗ ಬರುವೆಯೋ ಎಂದು ನಾನು ನಿತ್ಯವೂ ನಿನ್ನನ್ನು ಸ್ಮರಿಸುತ್ತ ನಿರೀಕ್ಷಣೆ ಮಾಡುತ್ತಿದ್ದೆನು. ಈಗ ನಿನ್ನ ಸರ್ವಸ್ವವನ್ನೂ ಗೆದ್ದು ಕೃತಾರ್ಥನಾಗುವೆನು.

ನಳ—(ಸ್ವಲ್ಪ ಕೋಪದಿಂದ) ಈ ಬರೀಮಾತುಗಳಿಂದೇನುಪ್ರಯೋಜನ? ನಿನಗೆ ಅಂತಹ ಸಾಮರ್ಥ್ಯವಿದ್ದರೆ ಆಡು, ನೋಡೋಣ; ಯಾರು ಗೆಲ್ಲುವರೋ ಗೊತ್ತಾಗುತ್ತದೆ.

ಪು—ಇದೋ ಸಿದ್ಧನಾಗಿರುವೆನು. (ಇಬ್ಬರೂ ತಮ್ಮ ತಮ್ಮ ಕಡೆಯವರೊಡನೆ ಆಟಕ್ಕೆ ಕುಳ್ಳಿರುವರು.)

ನಳ—ಈ ಆಟಕ್ಕೆ ನಾನು ನನ್ನ ಪ್ರಾಣಗಳೊಡನೆ ನನ್ನ ಸರ್ವಸ್ವವನ್ನೂ ಪಂತವಾಗಿ ಒಡ್ಡಿರುವೆನು.

ಪು—ಈ ಆಟಕ್ಕೆ ನಾನೂ ನನ್ನ ಪ್ರಾಣಗಳೊಡನೆಯೂ ನನ್ನ ರಾಜ್ಯದೊಡನೆಯೂ ನನ್ನ ಸರ್ವಸ್ವವನ್ನೂ ಪಂತವಾಗಿ ಒಡ್ಡಿರುವೆನು.

(ಇಬ್ಬರೂ ದಾಳಗಳನ್ನುರುಳಿಸುತ್ತ ಕಾಯಿ ನಡೆಸುತ್ತ ಆಟಕ್ಕೆ ತೊಡಗುವರು.)

ಪು—* ಆಹ! ನನ್ನ ಇಷ್ಟವಿದ್ದಂತೆ ಈ ದಿವಸ ಜೂಜಾಡುವುದಕ್ಕೆ ಪ್ರಾರಂಭವಾದುದರಿಂದ ನನ್ನ ಸಂತೋಷಕ್ಕೆ ಪಾರವಿಲ್ಲ.

ನಳ—† ಪುಷ್ಕರನೆ, ನನ್ನನ್ನು ಜೈಸದೆ ಈಗಲೇ ಏತಕ್ಕೆ ಇಷ್ಟೊಂದು ಸಂತೋಷಪಡುವೆ? ದಾಳವನ್ನು ಬಿಡು.

ಪು—(ದಾಳಗಳನ್ನು ಬಿಡುವನು.)

ನಳ—‡ (ನಸುನಗುತ್ತ) ಆರೂ ಒಂದು ಬಿದ್ದಿತು.

ನಯು—(ಹಾಸ್ಯದಿಂದ) ಅಯ್ಯೋ! ಇಷ್ಟೆಯೆ?

ಸು—(ಸ್ವಲ್ಪ ಕೋಪದಿಂದ) ಇಷ್ಟೊ, ಅಷ್ಟೊ, ಈಗೇನು? ಮುಂದೇನಾಗುವುದೋ ನೋಡು.

ರಾಗ—೬೦ || ತೋಡಿ || ಆದಿತಾಳ || (ಇಷ್ಕಮೆ ಬೇಗಲ್ ಎಂಬಂತೆ)

* ಪಡೆದೆನಾನಿಂಗತೀವ ಮುದವಾ | ತೊಡಗೆ ಜೂಜೆಂಗೀರೀತಿಮಗುಳೆ || ಪ ||

† ಫಡನನ್ನಂ ಜೈಸದೇನೀನು | ಕಡುತೋಷವಾಂತು | ಬಂದೇಕೆ | ನುಡಿಯುತ್ತಿರುವೈ | ಬಿಡುದಾಳಗಳನು |

‡ ಬಿದ್ದುದಾರೂಒಂದು ||ಅ||

ಪು—** (ಕಾಯಿ ನಡಸಿ ದಾಳಬಿಟ್ಟು) ಇದೊ ಹನ್ನೆರಡು, ಈ ಹಸುರು ಜೋಡಿ ಹೋಯಿತು ನೋಡು.

ಕೈ—ಭಲಾರೇ ಭಲಾ, ಭಾಪು ಪುಷ್ಕರನೇ ಭಾಪು.

ನಳ—(ಹೊಡೆದ ಕಾಯಿಗಳನ್ನು ಹೂಡಿ ಆಡುತ್ತ)

* ನನ್ನದು ಒಂದುಜೋಡಿ ಹೋದರೇನು? ಇದೋ ನಿನ್ನ ಜೋಡಿಗಳೆಲ್ಲಾ ಹೋದುವು.

ಪು—(ಹೊಡೆದಕಾಯಿಗಳನ್ನು ಹೂಡಿ ಆಡುತ್ತ)

† ಆಡು, ಆಡು, ದೈವಾಜ್ಞೆಯಿದ್ದಂತಾಗುವುದು.

ಕೈ—ಅಪ್ಪುತಾನೆ ಏನೀಗ!

ನಳ—(ದಾಳಬಿಟ್ಟು ಕಾಯಿ ನಡಸಿ ಆಡುತ್ತ)

‡ ಆಹ! ಪುಷ್ಕರನೆ, ಇದೊ ನೋಡು. ನಾನು ಗೆದ್ದುಬಿಟ್ಟೆ. ಈಗ ನನ್ನ ಸಂತೋಷಕ್ಕೆ ಪಾರವಿಲ್ಲ.

ಮಂಡ—ಭಲಾರೇ ಭಲಾ, ಭಾಪು ನಳನೇ ಭಾಪು.

ಪು—(ವ್ಯಸನದಿಂದ) ಆಹಾ! ನಳಮಹಾರಾಜನೆ, ನೀನು ಇಷ್ಟುಮಟ್ಟಿಗೆ ಅಕ್ಷಹೃದಯವನ್ನು ತಿಳಿದಿರುವೆಯೆಂದು ನನಗೆ ಗೊತ್ತಿರಲಿಲ್ಲ. ಇದು ದೈವತಂತ್ರವೇ ಹೊರತು ಬೇರೆಯಲ್ಲ. ಇದೊ ರಾಜ್ಯಮುದ್ರೆಯನ್ನು ಸ್ವೀಕರಿಸು. (ಬೆರಳಿಂದ ತೆಗೆದುಕೊಡುವನು.)

ನಳ—(ಸ್ವೀಕರಿಸಿ ತನ್ನ ಬೆರಳಿಗಿಟ್ಟುಕೊಂಡು ನಸುನಗುತ್ತ) ಎಲೈ ಪುಷ್ಕರನೆ, ನಿಷ್ಕಂಟಕವಾದ ಈ ಸಕಲ ರಾಜ್ಯವೂ ನಿನ್ನ ಪ್ರಾಣಸಹಿತ ಇನ್ನು ನನ್ನದಾಯಿತು. ಎಲೈ ಮೂಢನೆ, ಪೂರ್ವದಲ್ಲಿ ನೀನು ನನ್ನನ್ನು ಜಯಿಸಿದುದು ಕಲಿಪುರುಷನ ಶಕ್ತಿಯಿಂದಲೇ ಹೊರತು ನಿನ್ನ ಶಕ್ತಿಯಿಂದಲ್ಲ. ನೀನು ಮಾತ್ರ ಸ್ವಶಕ್ತಿಯಿಂದ ಜಯಿಸಿದೆ

** ನೋಡುಪಸುರಿನೀ | ಜೋಡಿಸಾಯಿಯನೀ | ನಾಡುಹೊಡೆದೆನೀ | ರಾರಿಂದ |

* ಕೇಡಾದುದೆನೀಗ | ನೋಡೋಹೊ ನಿನ್ನ | ಜೋಡಿಯೆಲ್ಲವು ಹೋಯ್ತು ಸಹಾ ||

† ಆಡುಆಡೀಗ ದೈವಾಜ್ಞೆಯೆಂತಿರ್ಪುದೋ |

‡ ಆಹಹನೋಡು ಜಯಿಸಿದೆನು ||೧|| (ಪಡೆದೆನಾನಿಂದತೀವ ಮುದವಾ)

ನೆಂದು ತಿಳಿದುಕೊಂಡಿರುವೆ. ನಾನಾದರೊ ಮತ್ತೊಬ್ಬರು ಮಾಡಿದ ಅಪರಾಧವನ್ನು ಸ್ವಲ್ಪವಾದರೂ ನಿನ್ನಮೇಲೆ ಕೆಡಹತಕ್ಕವನಲ್ಲ. ಕೇಳು, ಈಗ ನಾನು ನಿನ್ನನ್ನು ನಿನ್ನ ಪ್ರಾಣಸಹಿತವಾಗಿ ಬಿಟ್ಟು ಬಿಡುತ್ತೇನೆ. ಪೂರ್ವದಂತೆ ನಿನ್ನಲ್ಲಿ ಪ್ರೀತಿಯನ್ನೂ ಇಡುತ್ತೇನೆ. ನೀನು ಮಾತ್ರ ನನ್ನಲ್ಲಿ ಎಂದಿಗೂ ಸ್ನೇಹವನ್ನು ತಪ್ಪಬೇಡ ಎಲೈ ಪುಷ್ಕರನೆ, ನೀನು ನನಗೆ ತಮ್ಮನು. ಪೂರ್ವದಲ್ಲಿ ನಿನಗೆ ನಾನು ಗೊತ್ತುಮಾಡಿರುವ ರಾಜ್ಯಭಾಗವನ್ನು ತೆಗೆದುಕೊಂಡು ನೂರುವರುಷ ಸುಖವಾಗಿ ಜೀವಿಸು

ಪು—(ವಿನಯದಿಂದ ಕೈಮುಗಿದುಕೊಂಡು) ಅಗ್ರಜನಾದ ನಳಮಹಾರಾಜನೆ, ಇದೊ ನಿನಗೆ ನಾನು ವಂದಿಸುವೆನು. (ವಂದಿಸುವನು)

ನಳ—ನಿನಗೆ ಮಂಗಳವಾಗಲಿ.

ಪು—ಎಲೈ ಪುಣ್ಯಶ್ಲೋಕನೆ, ಇದುವರಿಗೆ ನಾನು ಮಾಡಿದ ಅಪರಾಧವನ್ನೆಲ್ಲಾ ಕ್ಷಮಿಸಿ ನೀನು ನಿನ್ನ ಕೈಗೆ ಸಿಕ್ಕಿದ್ದ ನನ್ನ ಪ್ರಾಣವನ್ನೂ ರಾಜ್ಯ ಭಾಗವನ್ನೂ ಮರಳಿ ನನಗೆ ಕೊಟ್ಟುದರಿಂದ ನಿನ್ನ ಕೀರ್ತಿಯು ಲೋಕದಲ್ಲಿ ಅಕ್ಷಯವಾಗಿರುವುದು. ನಿನ್ನ ಪತ್ನೀಪುತ್ರರೊಡನೆ ಹತ್ತುಸಾವಿರ ವರುಷ ನೀನು ಈ ರಾಜ್ಯವನ್ನು ಆಳುತ್ತ ಸುಖವಾಗಿರ ಬೇಕೆಂದು ನಾನು ದೇವರನ್ನು ಪ್ರಾರ್ಥಿಸುವೆನು.

ಮಂಡೂ—ಇದೀಗ ಕೃತಜ್ಞತೆ.

ಎಲ್ಲರೂ—ಅಹುದಹುದು, ಒಪ್ಪಬೇಕು.

ನಳ—ಎಲೈ ನಯಸಾಗರನೆ, ಈ ರಾಜಧಾನಿಯಲ್ಲಿರುವ ಮುಖ್ಯಮುಖ್ಯ ರಾದ ಪುರಜನಗಳಿಗೂ ಅಧಿಕಾರಿಗಳಿಗೂ ಈ ನಿಮಿಷದಿಂದ ನನ್ನ ಆಜ್ಞಾನುಸಾರವಾಗಿರಬೇಕೆಂದು ಪ್ರಕಟಿಸುವುದು. ಮತ್ತು ಕೂಡಲೆ ನಮ್ಮ ಮಾವನಾದ ವಿದರ್ಭರಾಜನಿಗೆ ನನ್ನ ವಿಜಯವನ್ನು ತಿಳಿಸಿ, ಆತನ ಅಪ್ಪಣೆಯನ್ನು ಪಡೆದು, ಮಹಾದೇವಿಯನ್ನು ಮಕ್ಕಳು

ಸಹಿತ ತಕ್ಕ ಸೈನ್ಯಪರಿವಾರದೊಡನೆ ಇಲ್ಲಿಗೆ ಕರೆದುಕೊಂಡು ಬರುವಂತೆ ನಮ್ಮ ವಾರ್ಷ್ಣೇಯನಿಗೆ ಆಜ್ಞಾಪಿಸುವುದು.

ನಯ—ಮಹಾರಾಜನ ಅಪ್ಪಣೆಯಾದಂತಾಗಲಿ.

ಪು—(ಕೈಮುಗಿದುಕೊಂಡು) ಅಗ್ರಜನೆ, ನಿನ್ನ ಅಪ್ಪಣೆಯಾದರೆ ಇನ್ನು ನೀನು ಪುರಪ್ರವೇಶವನ್ನು ಮಾಡಿ ಅರಮನೆಯನ್ನು ಸೇರುವುದಕ್ಕೆ ತಕ್ಕ ಸನ್ನಾಹವನ್ನು ಮಾಡುವೆನು.

ನಳ—ಒಳ್ಳೆಯದಾಗಲಿ.

ಪು—ಎಲೈ ಸುಮತಿಯೆ, ಈ ದಿವಸ ನಳಮಹಾರಾಜನನ್ನು ಸಕಲ ಸೈನ್ಯ ಪರಿವಾರದೊಡನೆ ಮಹೋತ್ಸವದಿಂದ ಪುರಪ್ರವೇಶವನ್ನು ಮಾಡಿಸಿ ಅರಮನೆಗೆ ಬಿಜಯಮಾಡಿಸಬೇಕೆಂದು, ಮಂತ್ರಿಶ್ರೇಷ್ಠನಾದ ನಯಸಾಗರನ ಅನುಮತಿಯಿಂದ ಪ್ರಮುಖರಾದ ಪುರಜನಗಳಿಗೂ ಅಧಿಕಾರಿಗಳಿಗೂ ಆಜ್ಞಾಪಿಸುವುದು.

ಸು—ಅಪ್ಪಣೆ.

ನಳ—ಶಾ॥ವಿ॥ ಈಶಾನುಗ್ರಹದಿಂದೆ ಪಾಪಿ ಕಲಿಯೆನ್ನಂ ಬಿಟ್ಟುಪೋದಂ ಮಗು ।
ಳ್ದೀಶಾನುಗ್ರಹದಿಂದೆ ಮಕ್ಕಳೊಡನಾಂಸೇರ್ದೆಂ ಮಹಾದೇವಿಯಿಂ॥
ಈಶಾನುಗ್ರಹದಿಂದೆ ಪುಷ್ಕರನನಕ್ಷದ್ಯೂತದೊಳ್ಗೆಲ್ದೆನಾ ।
ನೀಶಾನುಗ್ರಹದಿಂದಮಿಂತುಪಡೆದೇನೀರಾಜ್ಯಮಂ ಸೌಖ್ಯದಿಂ ॥೮॥

(ಎಲ್ಲರೂ ತೆರಳಿದರು)

ಮಂತ್ರಿಸ್ಥಾನ.

(ನಯಸಾಗರನ ಪ್ರವೇಶ)

ನಯ—ರಾಜಾಧಿರಾಜನಾದ ನಳಮಹಾರಾಜನು ಪುರಪ್ರವೇಶಮಾಡಿ ತನ್ನ ಅರಮನೆಯನ್ನು ಸೇರಿದನು. ಮಹಾದೇವಿಯಾದ ದಮಯಂತಿಯು ವಿದರ್ಭದೇಶದಿಂದ ಮಕ್ಕಳೊಡನೆ ಇಲ್ಲಿಗೆ ಬಂದು ತನ್ನ ಅಂತಃಪುರವನ್ನು ಸೇರಿದಳು. ಮತ್ತು—

ಕಂ|| ಪೇಳಲದೇಂ ಶ್ರೀನಳಭೂ |
ಪಾಲೋತ್ತಮನಾಜ್ಞೆ ನಿಷಧದೇಶದ ಜನರಾ ||
ಮೌಳಿಯ ಪೂಮಾಲೆಯೊಳೊ |
ಲ್ದೋಲಾಡುವ ಮಧುಕರಾಳಿಗೆಣೆಯೆನಿಸಿರ್ಕುಂ ||೯||

ಈ ದಿವಸ ನಮ್ಮ ನಳಮಹಾರಾಜನಿಗೆ ಪಟ್ಟಾಭಿಷೇಕಪೂರ್ವಕವಾಗಿ ಸಿಂಹಾಸನಾರೋಹಣೋತ್ಸವವು ಗೊತ್ತಾಗಿರುವುದು. ಇದಕ್ಕಾಗಿ ಪಟ್ಟಣವೆಲ್ಲಾ ಶೃಂಗಾರಮಾಡಲ್ಪಟ್ಟಿರುವುದು. ಈ ದೇಶದ ಎಂಟು ದಿಕ್ಕುಗಳಿಂದಲೂ ಬರತಕ್ಕ ಮುಖ್ಯಮುಖ್ಯರಾದ ಅಧಿಕಾರಿಗಳೂ ನಾಡಿಗರೂ ಸೈನಿಕರೂ ಎಲ್ಲರೂ ಬಂದಿರುವರು. ಈಗ ಶಾಸ್ತ್ರೋಕ್ತಪ್ರಕಾರ ಪಟ್ಟಾಭಿಷೇಕವೂ ಬಹು ವಿಜೃಂಭಣೆಯಿಂದ ನೆರವೇರಿತು. ಮುಂದಣ ಕಾರ್ಯಭಾರವನ್ನೆಲ್ಲಾ ನಮ್ಮ ಆಸ್ಥಾನಾಧಿಕಾರಿಯಿಂದ ತಾನೆ ತಿಳಿಯಬೇಕಾಗಿದೆ.

ದ್ವಾ—(ಪ್ರವೇಶಿಸಿ_ತಲೆವಾಗಿ) ಮಂತ್ರಿಶ್ರೇಷ್ಠನೆ ಆಸ್ಥಾನಾಧಿಕಾರಿಯಾದ ಧರ್ಮಧ್ವಜನು ಬಂದಿರುವನು.

ನಯ—ಬರಲಿ, ನಾನೂ ಅದನ್ನೇ ಯೋಚಿಸುತ್ತಿದ್ದೆನು.

ದ್ವಾ—ಅಪ್ಪಣೆ. (ತೆರಳಿದನು)

ಧರ್ಮಧ್ವಜ—(ಬಂದು ತಲೆವಾಗಿ) ಇದೊ, ವಂದಿಸುವೆನು. ಮಂತ್ರಿಶ್ರೇಷ್ಠನೆ, ನಳಮಹಾರಾಜನ ಸಿಂಹಾಸನಾರೋಹಣದ ಮಹೋತ್ಸವಕ್ಕಾಗಿ ಮುಖ್ಯಮುಖ್ಯರಾದ ಪುರಜನರೂ ನಾಡಿಗರೂ ಅಧಿಕಾರಿಗಳೂ ಸಾಮಂತರಾಜರೂ ವೈದಿಕರೂ ವಿದ್ವಾಂಸರೂ ಎಲ್ಲರೂ ಆಸ್ಥಾನ ಮಂಟಪಕ್ಕೆ ಬಂದು ಸೇರಿರುವರು. ಅರಮನೆಯ ಮುಂಭಾಗದಲ್ಲಿ ಚತುರಂಗಸೈನ್ಯವೂ ಬಂದು ನಿಂತಿರುವುದು. ರಾಜಾಧಿರಾಜನಾದ ನಳಮಹಾರಾಜನು ಮಹಾದೇವಿಯಾದ ದಮಯಂತಿಯೊಡನೆಯೂ ಮಕ್ಕಳೊಡನೆಯೂ ಆಸ್ಥಾನಮಂಟಪಕ್ಕೆ ಹೊರಡಲು ಸಿದ್ಧನಾಗಿರುವನು.

ನಯ—ಇದೊ, ನಾನೂ ಸಿದ್ಧನಾಗಿರುವೆನು. (ಇಬ್ಬರೂ ತೆರಳಿದರು)

ಆಸ್ಥಾನ ಮಂಟಪ.

(ದಮಯಂತೀನಳರು ಅತ್ತಿತ್ತ, ಮಕ್ಕಳೊಡನೆ ಸಿಂಹಾಸನದಲ್ಲಿ ಕುಳ್ಳಿರುವರು ಹಿಂದೆ ಚೇಟಿಯರೂ ಮುಂದೆ ಸೇವಕರೂ ರಾಜೋಪಚಾರ ಮಾಡುತ್ತಿರುವರು)

ಎಲ್ಲರೂ .

* ವೃ|| ವೃ|| ಜಯಜಯ ನಳಸಾರ್ವಭೌಮ ಸತ್ಯ |
ಪ್ರಿಯ ಜಯ ಧೀರಜನಾಗ್ರಗಣ್ಯಾವೀರ ||
ಜಯ ಕಲಿಭಯಕೃನ್ನಿಜಾಖ್ಯ ಭೈಮೀ |
ದಯಿತ ಮಹಾಶಯ ಪುಷ್ಪಚಾಪರೂಪ ||೧||

---

*|| ಪಾರ್ಸಿ ಟ್ಯೂನ್ | ಆನಂದಭೈರವೀರಾಗಚ್ಛಾಯ: | ಏಕತಾಳ ||

ಪಾಪಾಧಾಽಪಾ | ಮಪಮಃಧಪಾಽಮ | ಗಮಗಪಮಾಽಗ |
ಜಯ ವೀರ | ಜಿತರಿಪುವಾರ | ಜಯರಣಧೀರ |
ರಿಗರಿಮಗಾಽರಿ | ಸರಿಸಗರಿಽಸ | ಸನಿಗಮಪಾಽಽ ||ಪ||
ಜಲಧಿಗಭೀರ | ಜಯಮಣಿಹಾರ | ಶೃಂಗಾ-ರಾ ||ಪ||
ಪಸನಿಸಾಸಪನಿ | ಪನೀನಿಮಪಮಪಾಽ, ಪಗಮಗಮಾಮ |
ನಿಯಮಿತಾರಿಕುಲ | ನಿತಾಂತಭಯಕೃದಾ-,ಜ್ಞ ಪು-ಷ್ಪಚಾಪ |
ರಿಮಗರಿಸಾಽಽ ||ಅ||
ರೂ- - -ಪಾ ||ಅ||
ಮಮಮಪಾಪಸೀ | ನಿಸಾಸರಿನಿಸಾ | ಸಿಸಗಾರಿಸನಿದ |
ನಳನೃಪಾಲಸ | ಮ್ರ್ಯಲೋಕಪಾ-ಲಾ | ಕಲಿದೋಷಹರಣ |
ರಿಸನಿದ ಪಸನಿದ | ಪಮಗರಿಸಾಽಽ ||೧||
ಚಣಸಿಟ ಸುಚರಿತ | ಮಾ- -ನಿತಾ ||೧||

ಭರತವಾಕ್ಯಂ.

† ಕಂ|| ಅವನಿಯೊಳೀನಳಚರಿತ |
ಶ್ರವಣಂ ಕಲಿದೋಷಹಾರಿಯೆನಿಕೆ ಮಹಾವ್ಯೆ ||
ಭವದೊಡನಿರ್ಕ್ಕಕಲ್ಪಂ |
ಪ್ರವಿದಿತಮಹಿಶೂರ ಕೃಷ್ಣಭೂಪತಿವಂಶಂ ||೧೦||

೭ ನೆಯ ಅಂಕವು ಮುಗಿದುದು.

---

† || ರಾಗ | ಸುರಟಿ | ಆದಿತಾಳ ||

ಮಂಗಳಂಶಿವೇ | ಮಂಗಳೋತ್ಸವೇ | ಮಂಗಳಂಭವೇ | ತುಂಗವೈಭವೇ ||ಪ|| ಲಲಿತಾಂಬಿಕೇ | ಜಲಜಾಂಬಕೇ | ಕಲಿಭಂಜಿಕೇ | ಗಿರಿಬಾಲಿಕೇ ||೧|| ಸುರಪೂಜಿತೇ | ಹರಿಸನ್ನುತೇ | ಕರುಣಾನ್ವಿತೇ | ಪರದೇವತೇ ||೨|| ವರಕೃಷ್ಣಭೂ | ವರವಂಶಮಂ | ಪರಿಪಾಲಿಪಾ | ಪರಮೇಶ್ವರಿ ||೩||

ನಳಚರಿತ್ರನಾಟಕಂ ಸಂಪೂರ್ಣಂ